# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ 2017

## ಡಿಜಿಟಲ್ ಪ್ರಪಂಚ



ಅಜ್ಜಿಯನ್ನು ನೋಡಲು ಬಂದ ಡಿಜಿಟಲ್ ಮೊಮ್ಮಕ್ಕಳು!

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 34**

**ಸಂಚಿಕೆ – 5**

**ಫೆಬ್ರವರಿ – 2017**


## ಈ ಸಂಚಿಕೆಯಲ್ಲಿ .....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಹೀಗೊಂದು ಸಂಭ್ರಮ.. | **ಶಿವಕುಮಾರ್** | 5 |
| ಕಂಪ್ಯೂಟರ್..... | **ಶಿವು** | 8 |
| ಡಿಜಿಟಲ್ ಮದುವೆ | **ಸಿ.ಆರ್. ಸತ್ಯ** | 9 |
| ಕಂಪ್ಯೂಟರ್ ಮೆಡಿಸನ್ | **ಡಾ. ಪ್ರಕಾಶ್** | 12 |
| ನನ್ನ ಜಾಣ ದೂರವಾಣಿ | **ಸಹನಾ ಪ್ರಸಾದ್** | 14 |
| ಗೂಗ್ಲಾವತರಣ | **ಪ್ರಕಾಶ್** | 16 |
| ಆಪ್ಸ್ ಜೀವನ....... | **ಇ.ಆರ್. ರಾಮಚಂದ್ರನ್** | 17 |
| ಲಂಕೆಯ ಲಿಂಕ್ | **ವೈ.ವಿ. ಗುಂಡೂರಾವ್** | 20 |
| ಸಿಂಟಾಕ್ಸ್ ಎರರ್ | **ಎನ್. ರಾಮನಾಥ್** | 22 |
| ಈ ಅಮ್ಮನ ಇ-ಪ್ರಲಾಪ | **ನಳಿನಿ ಸೂರ್ಯಪ್ರಕಾಶ್** | 24 |
| ಪಂಚ್ ಪದ್ಯಗಳು | **ಎಚ್. ಡುಂಡಿರಾಜ್** | 26 |
| ತುಂತುರು | **ದಂನಳ** | 27 |
| ಓದುಗರ ಪತ್ರ | **ಪ್ರಭುಪ್ರಸಾದ್** | 28 |
| ಅಜ್ಜಿಯ ಡಿಜಿಟಲ್.... | **ಬೇಲೂರು ರಾಮಮೂರ್ತಿ** | 29 |
| ವ್ಯಂಗ್ಯ ಮೆಲುಕು | **ಪ್ರಕಾಶ್ ಶೆಟ್ಟಿ** | 32 |
| ಪೇಪರ್ ಆಫೀಸ್..... | **ಎಂ.ಕೆ. ಭಾಸ್ಕರ ರಾವ್** | 33 |
| ಕಾರ್ಡೇ ಕಾಂಚಾಣ | **ಆನಂದ** | 36 |
| ಓಎಲ್‌ಎಕ್ಸ್‌ನಲ್ಲಿ.... | **ಸುಧಾ ಸರನೋಬತ್** | 38 |


**ಮುಖಪುಟ ವ್ಯಂಗ್ಯಚಿತ್ರ – ನಾಗನಾಥ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಆಮೆಗಾರಿಕೆ ಕಾಮಗಾರಿ; ಮೇಯರ್ ಕಿಡಿ – ಸುದ್ದಿ

***● ಆಮೆಗಳ ಸಂಘ ಪ್ರತಿಭಟಿಸಿವೆಯಂತೆ !!***

★★★

'ಎಲ್ಲ ರಂಗಗಳ ಮೇಲೂ ದತ್ತಾಂಶದ ಪ್ರಭಾವ' – ಹೇಳಿಕೆ

***● ಅಂಗಂದ್ರೇನ್ ಸಾ ?!!***

★★★

ಯಡಿಯೂರಪ್ಪ – ಈಶ್ವರಪ್ಪ ಮಧ್ಯೆ ತೀವ್ರ ವಿರಸ – ಪತ್ರಿಕೆ

***● ಹಣೆಗಣ್ಣು ಬಿಡದಿದ್ದರೆ ಕ್ಷೇಮ !!***

★★★

ಹಳ್ಳಿಗಳಲ್ಲಿ ಇ–ಶಿಕ್ಷಣ, ಇ–ಆರೋಗ್ಯ ಸೇವೆ ಶೀಘ್ರ – ಪತ್ರಿಕೆ

***● ಈ – ಸೇವೆಗಳಿಗೆ ಅಪರಂಜಿಯ ಶುಭಾಶಯಗಳು !!***

★★★

ಅಕ್ರಮ – ಸಕ್ರಮಕ್ಕೆ ಸುಪ್ರೀಂ ಕೋರ್ಟ್ ತಡೆ – ಪತ್ರಿಕೆ

***● ಈ ದುರಂತ ನಾಟಕಕ್ಕೆ ತೆರೆ ಎಳೆಯಲೇಬೇಕು !!***

★★★

ಸೈಕಲ್ ಯಾರಿಗೆ? ತೀರ್ಪು ಕಾಯ್ದಿರಿಸಿದ ಆಯೋಗ – ಪತ್ರಿಕೆ

***● ಒಂದೊಂದು ಚಕ್ರ ಕೊಟ್ಟರಾಯಿತು !!***

★★★

'ಕ್ಯಾಪ್ಟನ್ ಕೂಲ್' ಎಂದು ಪ್ರಸಿದ್ಧರಾದ ದೋನಿಗೆ
ಅಪರಂಜಿಯ ವಿದಾಯ !!

★★★

ಪ್ರತಿ ಜಿಲ್ಲಾ ಕೇಂದ್ರದಲ್ಲೂ ಗಾಂಧೀ ಭವನ – ಸುದ್ದಿ

***● ಮಹಾತ್ಮರು ಮರುಗಿದರಂತೆ !!***

★★★

# ನಮ್ಮ ನಿಮ್ಮಲ್ಲಿ

**ಈ** ತಿಂಗಳ ಸಂಚಿಕೆ ಡಿಜಿಟಲ್ ಪ್ರಪಂಚದ ವಿವಿಧ ವಿನೋದ ಹಾವಳಿಗೆ ಮೀಸಲು. ಬೇಕಾಗಿಯೋ, ಬೇಡದೆಯೋ ನಾವೆಲ್ಲಾ ಇಂದು ನಮ್ಮ ಸುತ್ತ ಎಲ್ಲೆಲ್ಲೂ ಹರಡಿರುವ ಡಿಜಿಟಲ್ ಪ್ರಪಂಚದಲ್ಲಿ ಮುಳುಗಿ ಮೀಯುವಂತಾಗಿದೆ. ಐವತ್ತರ ದಶಕದವರೆಗೂ ರಾಮಾ ಕೃಷ್ಣಾ ಅಂತ ಹಾಯಾಗಿದ್ದ ಮಾನವ ಸಮಾಜದಲ್ಲಿ ಕ್ಯಾಲುಕುಲೇಟರ್ ಎಂಬ ಪುಟ್ಟ ಎಲೆಕ್ಟ್ರಾನಿಕ್ ಸಾಧನ ಅರುವತ್ತರ ದಶಕದಲ್ಲಿ ಹುಟ್ಟಿಕೊಂಡಿತು. ಇದರಿಂದ ಶುರುವಾದ ಡಿಜಿಟಲ್ ಕ್ರಾಂತಿ ಈಗ ಹೆಮ್ಮರವಾಗಿ ಬೆಳೆದು ನಮ್ಮ ಎಲ್ಲ ಚಟುವಟಿಕೆಗಳನ್ನೂ ಆಕ್ರಮಿಸಿಕೊಂಡುಬಿಟ್ಟಿದೆ. ಇದರ ಬಗ್ಗೆ ನಮ್ಮ ಲೇಖಕ ಲೇಖಕಿಯರ ಟೇಕ್ ಅನ್ನು ಓದುವ ಮುಂಚೆ ಡಿಜಿಟ್ ಅಂದರೇನು? ಅದಕ್ಕೇಕೆ ಇಷ್ಟು ಮಹತ್ವ? ಇದನ್ನೆಲ್ಲಾ ಪ್ರಾರಂಭಿಸಿದ ಮಹಾನುಭಾವನಾದರೂ ಯಾರು? ಎಂಬ ಹಿನ್ನಲೆ ಪ್ರಶ್ನೆಗಳಿಗೆ ಉತ್ತರಗಳು ತಿಳಿದಿದ್ದರೆ ಚೆನ್ನ ಅನ್ನಿಸಿದ್ದರಿಂದ ಇದನ್ನು ಬರೆಯುತ್ತಿರುವೆ.

ಕಂಪ್ಯೂಟರ್‌ನ ಕಾರ್ಯವಿಧಾನದ ಮೂಲ ತಳಹದಿ ಎಂದರೆ ಅಂಕಿಗಳು. ಅದೂ ಎಲ್ಲ ಅಂಕಿಗಳ ಬಳಕೆ ಕೂಡ ಅಲ್ಲ. ಕೇವಲ ಒಂದು ಮತ್ತು ಸೊನ್ನೆ. ಈ ಅಂಕಿಗಳನ್ನು ಹೇರಳವಾಗಿ ಬಳಸಿ ಕಂಪ್ಯೂಟರ್ ತನ್ನ ಕೆಲಸಕಾರ್ಯಗಳನ್ನು ಬಹು ಸುಲಭವಾಗಿ ಮಾಡಿಬಿಡುತ್ತದೆ. ಕಂಪ್ಯೂಟರಿನ ಇಂತಹ ಕಾರ್ಯ ವಿಧಾನಕ್ಕೆ ಮೊಟ್ಟಮೊದಲು ಬುನಾದಿ ಹಾಕಿದವನೆಂದರೆ ಇಂಗ್ಲೆಂಡಿನ ಅಲನ್ ಟ್ಯೂರಿಂಗ್. ಅಲನ್ ಒಬ್ಬ ಗಣಿತಜ್ಞ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಆತ ತನ್ನ ಅಪ್ರತಿಮ ಪ್ರತಿಭೆಯಿಂದ ಜರ್ಮನ್ ನೌಕಾಪಡೆಯ ಗುಪ್ತ ಸಂದೇಶಗಳನ್ನು ಬಿಡಿಸಿ ಅರ್ಥಮಾಡಿಕೊಳ್ಳುವ ಯತ್ನದಲ್ಲಿ ಸಫಲನಾಗಿದ್ದ.

ಟ್ಯೂರಿಂಗ್ ಒಬ್ಬ ನಂಬರ್ ಥಿಯರಿಸ್ಟ್. ಅಂಕಿ, ಸಂಖ್ಯೆಗಳೊಂದಿಗಿನ ಒಡನಾಟ ಆತನಿಗೆ ತುಂಬಾ ಅಪ್ಯಾಯಮಾನ. ಗಣಿತದ ಯಾವುದೇ ಸಮಸ್ಯೆಯನ್ನು ಬಿಡಿಸಬಲ್ಲ ''ಯೂನಿವರ್ಸಲ್ ಮೆಷೀನ್'' ನಿರ್ಮಿಸುವ ಕನಸು ಈತನನ್ನು ಬಹುವಾಗಿ ಕಾಡಿತ್ತು. ಕೊನೆಗೂ ಇಂತಹ ಮೆಷೀನಿನ ವಿನ್ಯಾಸವನ್ನು ಸಿದ್ಧಗೊಳಿಸುವುದರಲ್ಲಿ ಈತ ಯಶಸ್ಸನ್ನು ಗಳಿಸಿದ. ಈ ಯಂತ್ರ ಕೇವಲ ಸಂಖ್ಯೆಗಳನ್ನು ಬಳಸಿ ಗಣಿತದ ಯಾವುದೇ ಸಮಸ್ಯೆಯನ್ನು ಕ್ಷಣಾರ್ಧದಲ್ಲಿ ಬಿಡಿಸಿಬಿಡುತ್ತಿತ್ತು. ನಮ್ಮ ಇಂದಿನ ಕಂಪ್ಯೂಟರ್‌ಗಳು ವಿಕಸನ ಹೊಂದಿರುವುದು ಈ ಯೂನಿವರ್ಸಲ್ ಮೆಷೀನಿನ ವಿನ್ಯಾಸದ ಆಧಾರದ ಮೇಲೆ ಎನ್ನಬಹುದು.

ಅಂಕಿಗಳನ್ನು ಬಳಸುವ ಕಂಪ್ಯೂಟರುಗಳು, ಅತಿ ನಿಖರವಾಗಿ ಯಂತ್ರಗಳನ್ನು ನಿಯಂತ್ರಿಸುವ ಸಾಧನವನ್ನು ಸಿ.ಎನ್.ಸಿ ಸಾಧನ ಎನ್ನುತ್ತಾರೆ. (ಕಂಪ್ಯೂಟರ್ ನ್ಯೂಮೆರಿಕಲ್ ಕಂಟ್ರೋಲ್) ನಾನು ಈ ಯಂತ್ರಗಳ ಬಗ್ಗೆ ಕಲಿಯಲು ಮೊದಲ ಬಾರಿ ಇಂಗ್ಲೆಂಡಿಗೆ ಹೋದಾಗ ನಮ್ಮ ಪ್ರೊಫೆಸರ್ ಮೊದಲ ಲೆಕ್ಚರಿನಲ್ಲೇ ಸಂಖ್ಯೆಗಳ ಮಹತ್ವದ ಬಗ್ಗೆ ಒಂದು ಉದಾಹರಣೆ ಕೊಟ್ಟಿದ್ದರು. ನೀವು ಅಂಗಡಿಗೆ ಹೋಗಿ ನಾಲ್ಕು ತೆಂಗಿನ ಕಾಯಿ ಮತ್ತು ಒಂದು ಲೀಟರ್ ಎಣ್ಣೆ ಕೇಳುತ್ತೀರೆಂದು ಭಾವಿಸಿ. (ನಮ್ಮ ಪ್ರೊಫೆಸರ್ ಹಾಲು ಮತ್ತು ಬ್ರೆಡ್ ಅಂದಿದ್ದರು) ಅಂಗಡಿಯವ ಲೀಟರ್ ಅಳತೆ ಪಾತ್ರೆಯಿಂದ ಎಣ್ಣೆಯನ್ನು ಮೊಗೆದು ನಿಮ್ಮ ಡಬರಿಗೆ ಹಾಕಿ, ನಾಲ್ಕು ತೆಂಗಿನ ಕಾಯಿಗಳನ್ನು ನಿಮ್ಮ ಚೀಲಕ್ಕೆ ಹಾಕುತ್ತಾನೆ ಅಲ್ಲವೇ. ಈಗ ಒಂದು ಪ್ರಶ್ನೆ. ಅಂಗಡಿಯವ ನಿಮ್ಮ ಎರಡು ಕೋರಿಕೆಗಳಲ್ಲಿ (ಅಂದರೆ ಎಣ್ಣೆ ಹಾಗೂ

ತೆಂಗಿನಕಾಯಿ ಕೊಳ್ಳುವಿಕೆ), ಯಾವ ಕೋರಿಕೆಯನ್ನು ಅತಿ ನಿಖರವಾಗಿ ಪೂರೈಸಿದ? ನಾಲ್ಕು ತೆಂಗಿನ ಕಾಯಿಗಳು ನಾಲ್ಕೇ ವಿನಹ 3.999 ಅಥವಾ 4.001 ಆಗುವುದು ಸಾಧ್ಯವಿಲ್ಲ. ಆದರೆ ಒಂದು ಲೀಟರ್ ಎಣ್ಣೆ ಅಳತೆ ಪಾತ್ರೆಯ ನಿಖರತೆಯ ಕೊರತೆಯಿಂದಾಗಲೀ, ಪಾತ್ರೆಯಲ್ಲಿ ಅಂಟಿರುವ ಎಣ್ಣೆಯ ಲೇಪದಿಂದಾಗಲೀ ಒಂದು ಲೀಟರಿಗಿಂತ ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೆ ಆಶ್ಚರ್ಯವಿಲ್ಲ ಅಲ್ಲವೇ? ಅಂದರೆ ಡಿಜಿಟಲ್ ಅಳತೆಯಾದ ನಾಲ್ಕು, ಅನಲಾಗ್ ಅಳತೆಯಾದ ಒಂದು ಲೀಟರಿಗಿಂತ ಹೆಚ್ಚು ನಿಖರ ಎಂದಾಯಿತು. ಇದೇ ಡಿಜಿಟಲ್ ಮಹತ್ವ.

ಈ ಡಿಜಿಟಲ್ ತಳಹದಿಯ ಮೇಲೆ ನಿರ್ಮಾಣವಾಗಿರುವ ಡಿಜಿಟಲ್ ಜಗತ್ತು ಅಗಾಧ. ಕಂಪ್ಯೂಟರಿನಿಂದ ಮೊದಲುಗೊಂಡು, ಇಂಟರ್ನೆಟ್, ಈ ಮೇಯ್ಲ್, ಮೊಬೈಲ್, ಸ್ಮಾರ್ಟ್ ಫೋನ್, ಫೇಸ್ ಬುಕ್, ಟ್ವಿಟರ್, ಇನ್ಸ್ಟಾಗ್ರಾಮ್, ಯೂಟ್ಯೂಬ್ ಮುಂತಾದ ವೇದಿಕೆಗಳೇ ಅಲ್ಲದೇ, ಮೆಡಿಕಲ್ ಇಂಜಿನೀರಿಂಗ್ ಮೀಡಿಯಾ ಮುಂತಾದ ಅಸಂಖ್ಯಾತ ಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ ವೈವಿಧ್ಯಮಯವಾದ ಡಿಜಿಟಲ್ ಸಾಧನಗಳು ಇವೆಲ್ಲವನ್ನೂ ಈ ಜಗತ್ತಿನಲ್ಲಿ ಕಾಣಬಹುದು.

ಈ ಎಲ್ಲ ಸಾಧನಗಳ ಆಕ್ರಮಣದಿಂದ ಬೆದರಿ ಓಡಿಹೋಗುವ ಬದಲು ಇದನ್ನೆಲ್ಲಾ ವ್ಯಂಗ್ಯ ದೃಷ್ಟಿಯಿಂದ ನೋಡುವ ಉದ್ದೇಶ ಅಪರಂಜಿಯದು. ಮೊದಲಿಗೆ ಸಿ.ಆರ್ ಸತ್ಯ ಅವರು ಡಿಜಿಟಲ್ ಮದುವೆ ಬಗ್ಗೆ ಒಂದು ವಿನೂತನ ಬರಹವನ್ನು ನೀಡಿದ್ದಾರೆ. ಎನ್ ರಾಮನಾಥ್ ಅವರ ಸಿಂಟಾಕ್ಸ್ ಎರರ್ ಒಂದು ಚೇತೋಹಾರಿಯಾದ ಲೇಖನ. ಶ್ರೀಮತಿ ಸಹನಾ ಪ್ರಸಾದ್‌ರವರು ಸ್ಮಾರ್ಟ್ ಫೋನ್ ಬಳಕೆ ಪರಿಚಯವಿಲ್ಲದವರು, ಅದನ್ನು ಬಳಸುವಾಗ ಆಗುವ ಫಜೀತಿಯನ್ನು ಬಹು ಸ್ವಾರಸ್ಯವಾಗಿ ವರ್ಣಿಸಿದ್ದಾರೆ. ಈ ಆರ್ ರಾಮಚಂದ್ರನ್ ಅವರ ಎಲೆಕ್ಟ್ರಾನಿಕ್ ಅಜ್ಜಿಯ ಡಿಜಿಟಲ್ ಅಭಿಷೇಕದ ವೈಖರಿಯನ್ನು ಓದಿಯೇ ಸವಿಯಬೇಕು. ನಳಿನಿ ಸೂರ್ಯಪ್ರಕಾಶ್ ಅವರ ಈ-ಅಮ್ಮನ ಈ-ಪ್ರಲಾಪ ಎಲ್ಲ ತಾಯಿಯರಿಗೂ ಪರಿಚಯವಿರುವಂತಹದೇ. ದನಂಳ ಅವರ ತುಂತುರು ಈ ತಿಂಗಳು ಡಿಜಿಟಲ್ ವೇಷದಲ್ಲಿ ಬಂದಿದ್ದಾಳೆ. ಅಪರಂಜಿ ಕಿಡಿ ಬರೆಯುವ ಪ್ರಕಾಶ್ ಈ ಬಾರಿ ಬೇಂದ್ರೆಯವರ ಗಂಗಾವತರಣವನ್ನು ಅನುಕರಿಸಿ, ಗೂಗ್ಲಾವತರಣ ಎಂಬ ಅಣಕು ಕವನವನ್ನು ನೀಡಿದ್ದಾರೆ. ಡುಂಡಿರಾಜರ ಹನಿಗವನಗಳು ಈ ಬಾರಿ ಡಿಜಿಟಲ್ ಲವಲವಿಕೆಯಿಂದ ಕೂಡಿವೆ ಭಾಸ್ಕರರಾಯರ ಪೇಪರ್ ಲೆಸ್ ಆಫೀಸು ಹಾಗೂ ಆನಂದರ ಕಾರ್ಡೇ ಕಾಂಚಣ ಬರಹಗಳು ನಗೆಯನ್ನು ಉಕ್ಕಿಸುತ್ತದೆ. ಅಜ್ಜಿಯ ಡಿಜಿಟಲ್ ಪ್ರಪಂಚವನ್ನು ಬೇಲೂರರು ಬಹು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. ಎರಡು ದಶಕಗಳಿಗೂ ಹಿಂದೆ ಕಂಪ್ಯೂಟರ್ ಬಳಕೆ ಹೊಸದಾಗಿ ಪ್ರಾರಂಭವಾದ ದಿನಗಳಲ್ಲಿ, ನಾನು ''ಕಂಪ್ಯೂಟರ್ ಮುಂದೊಂದು ಕನಸು'' ಎಂಬ ಕವನವನ್ನು ಬರೆದಿದ್ದೆ. ಇಂದಿಗೂ ಅದು ಪ್ರಸ್ತುತವೆನಿಸಿ ಅದನ್ನು ಇಲ್ಲಿ ಅಳವಡಿಸಿರುವೆ. ಒಟ್ಟಿನಲ್ಲಿ ನಮ್ಮ ಸುತ್ತಣ ಡಿಜಿಟಲ್ ಜಗತ್ತು ನಮ್ಮ ಯಾರಿಗೂ ಹೊಸದೇನೂ ಅಲ್ಲ, ನಗು ನಗುತ್ತಾ ಅದನ್ನು ಸ್ವೀಕರಿಸುವುದಷ್ಟೇ ಅಲ್ಲದೆ, ಅದರ ಮೇಲೆ ಮೇಲುಗೈ ಪಡೆಯುತ್ತೇವೆಯೇ ಹೊರತು, ಎಂದಿಗೂ ಅದರ ದಾಸರಾಗೆವು ಎಂದು ಸಾರಿ ಹೇಳುತ್ತದೆ ಈ ತಿಂಗಳ ಅಪರಂಜಿ.

**- ಶಿವಕುಮಾರ್**

# ಹೀಗೊಂದು ಸಂಭ್ರಮ

**- ಶಿವಕುಮಾರ್**

**ನ**ಮ್ಮ ತಂದೆ ರಾ.ಶಿ.ಯವರ ''ತುಟಿ ಮೀರಿದುದು'' ಪುಸ್ತಕವನ್ನು ಮನೋಹರ ಗ್ರಂಥಮಾಲೆಯ ಜಿ.ಬಿ.ಜೋಶಿಯವರು ಪ್ರಕಟಿಸಿದ ಸಮಯದ (1939) ಆಸುಪಾಸಿನಲ್ಲಿ ಪ್ರಾರಂಭವಾದ ನಮ್ಮೆರಡು ಮನೆಗಳ ಸ್ನೇಹ, ಇಂದಿಗೂ ಅಂತೆಯೇ ಮುಂದುವರಿದು ಬಂದಿರುವುದು ಅತ್ಯಂತ ಸಂತಸದ ಸಂಗತಿ. ಹಾಗಾಗಿ, ಮೊನ್ನೆ ಸಮೀರ ಜೋಶಿ ನನ್ನನ್ನು ಧಾರವಾಡ ಸಾಹಿತ್ಯ ಸಮಾರಂಭಕ್ಕೆ ಬರುವಂತೆ ಆದರದ ಆಹ್ವಾನವನ್ನು ನೀಡಿದಾಗ ಅದನ್ನು ''ಒಲ್ಲೆ'' ಎನ್ನುವ ಸಂಭವವೇ ಇರಲಿಲ್ಲ. ಮೇಲಾಗಿ ವೈದ್ಯ ದಂಪತಿಗಳೂ ಆ ಸಮಾರಂಭಕ್ಕೆ ಹೊರಟಿದ್ದು ನನ್ನನ್ನೂ ತಮ್ಮ ಕಾರಿನಲ್ಲಿ ಕರೆದೊಯ್ಯುವ ಆಮಿಷ ತೋರಿದ ಮೇಲಂತೂ ಅಲ್ಲಿಗೆ ಹೊರಡುವ ಉತ್ಸಾಹ ಇಮ್ಮಡಿಯಾದದ್ದು ನಿಜ. ಶುಕ್ರವಾರ ಪ್ರಾರಂಭವಾಗುವ ಸಂಭ್ರಮಕ್ಕೆ ಗುರುವಾರ ಬೆಳಗ್ಗೆಯೇ ಬೆಂಗಳೂರಿನಿಂದ ಹೊರಟೆವು.

ನಾವು ಧಾರವಾಡ ಸೇರಿದಾಗ ಸಂಜೆಯಾಗಿತ್ತು. ಕರ್ನಾಟಕ ಭವನದಲ್ಲಿ ನಮ್ಮ ವಾಸ್ತವ್ಯ. ಹೋಟೆಲಿನ ಒಳಗೆ ಕಾಲಿಡುತ್ತಲೇ ಸುಮತೀಂದ್ರ ನಾಡಿಗರು ಸಿಕ್ಕರು. ಬಹು ಹಿಂದೆ ಅವರು ನನ್ನ ಪುಸ್ತಕ ''ಸೈಕಲ್‌ವಾಲಾ''ವನ್ನು ಮೆಚ್ಚಿ ಒಂದು ವಿಮರ್ಶೆ ಬರೆದಿದ್ದು ಜ್ಞಾಪಕ. ಬಹು ದಿನಗಳ ನಂತರದ ಭೇಟಿ ನಮ್ಮದು. ಮಾತನಾಡುತ್ತ ಕುಳಿತಾಗಲೇ ಗಿರಡ್ಡಿ ಗೋವಿಂದರಾಜರು ಪಟ್ಟಣ ಶೆಟ್ಟಿಯವರೊಡನೆ ಅಲ್ಲಿಗೆ ಬಂದರು. ಉಭಯಕುಶಲೋಪರಿ ಆತ್ಮೀಯವಾಗಿತ್ತು. ಸಂಭ್ರಮ ಹೇಗಾದರೂ ಆಗಲಿ ಇಂತಹ ಪರಿಚಿತ ಸಹೃದಯರನ್ನು ಭೇಟಿಮಾಡುವ ಅವಕಾಶವಾದರೂ ದೊರಕಿತಲ್ಲಾ ಅಂತ ಖುಷಿಯಾಯಿತು.

ಸಂಭ್ರಮದ ಅಂಗವಾಗಿ ಪುಸ್ತಕ ಮಳಿಗೆಗಳು ಹಾಗೂ ಸಾಹಿತಿಗಳಿಂದ ಸಾಹಿತಿಗಳಿಗೆ ಬಂದ ಪತ್ರಗಳ ಪ್ರದರ್ಶನ ಇವೆರಡನ್ನೂ ಆಯೋಜಕರು ಏರ್ಪಡಿಸಿದ್ದರು. ಪತ್ರಗಳ ಪ್ರದರ್ಶನದಲ್ಲಿ ಹಿಂದಿನ ತಲೆಮಾರಿನ ಖ್ಯಾತ ಸಾಹಿತಗಳ ಅನೇಕ ಪತ್ರಗಳು ಪ್ರದರ್ಶನಕ್ಕಿದ್ದವು. ರಾ.ಶಿ.ಯವರ, ವೈದ್ಯರ ಮತ್ತು ನನಗೆ ಬರೆದ ಅನೇಕ ಪತ್ರಗಳನ್ನು ಸ್ಕ್ಯಾನ್ ಮಾಡಿ ನಾನು ಈ ಪ್ರದರ್ಶನಕ್ಕೆ ಕಳಿಸಿದ್ದೆ. ಅದನ್ನೆಲ್ಲಾ ನೋಡುತ್ತಿದ್ದಾಗ, ಈಗಿನ ಈ ಮೇಲ್ ಸಂಸ್ಕೃತಿಯಲ್ಲಿ ಇಂತಹ ಪತ್ರಗಳನ್ನು ಬರೆಯುವ ಅವಕಾಶಗಳೇ ಮಾಯವಾಗಿರುವುದಲ್ಲಾ ಎಂಬ ವಿಷಾದವೂ ಆಯಿತೆನ್ನಿ.

ಮೂರು ದಿನಗಳ ಸಾಹಿತ್ಯ ಸಂಭ್ರಮ ಇದು. ಸಭಾಂಗಣವಾದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಭವನ ಸುಸಜ್ಜಿತವಾಗಿದ್ದು ಭವ್ಯವಾಗಿ ಕಾಣುತ್ತಿತ್ತು. ಪಕ್ಕದ ಷಾಮಿಯಾನಾದಲ್ಲಿ ಊಟೋಪಚಾರದ ವ್ಯವಸ್ಥೆ ಬಹು ಸಮರ್ಪಕವಾಗಿ ನಡೆದಿತ್ತು. ಒಟ್ಟು ಹದಿನೇಳು ಗೋಷ್ಠಿಗಳನ್ನು ಮೂರುದಿನಗಳಿಗೆ ಹಂಚಿದ್ದರು. ಗೋಷ್ಠಿಯ ಚರ್ಚೆ ಬೋರ್ ಆದಾಗ ಷಾಮಿಯಾನಾದಲ್ಲಿ ಕುಳಿತು ಸಾಹಿತಿ ಮಿತ್ರರೊಂದಿಗೆ ಹರಟುವುದೇ ಒಂದು ಮೋಜು. ಬೆಂಗಳೂರಿನವರೇ ಆದ ದಿವಾಕರ್, ವಿಜಯ ಶಂಕರ್, ಭಾರತಿ ಮತ್ತಿತರರನ್ನು ಅಲ್ಲಿ ಭೇಟಿ ಮಾಡಿ ಮಾತಾಡಿದ್ದಾಯಿತು. ಈ ಕಿರು ವರದಿಯಲ್ಲಿ ಎಲ್ಲ ಗೋಷ್ಠಿಗಳ ಬಗ್ಗೆ ವಿವರಿಸುವ ಬದಲಿಗೆ ನನಗೆ ಮುಖ್ಯವೆನಿಸಿದ ನಾಲ್ಕು ಗೋಷ್ಠಿಗಳ ಬಗ್ಗೆ ಹೇಳಬಯಸುವೆ.

ಮೊದಲದಿನದ ಗೋಷ್ಠಿಯೊಂದರಲ್ಲಿ ದೇವದತ್ತ ಪಾಟ್ನಾಯಕ್ ಅವರೊಂದಿಗೆ ಮಾತುಕತೆ ಇತ್ತು. ಅವರನ್ನು ಮಾತನಾಡಿಸಿದವರು ಜಿ.ಬಿ. ಹರೀಶ್. ಪಾಟ್ನಾಯಿಕ್ ಪುರಾಣಗಳ ತಜ್ಞ ಎನ್ನಬಹುದು. ಹಿಂದೂ ಪುರಾಣಗಳ ಬಗ್ಗೆ ಆಳವಾಗಿ ಅಭ್ಯಾಸಮಾಡಿ, ಅನೇಕ ವೈಚಾರಿಕ ಪುಸ್ತಕಗಳನ್ನು ಇವರು ಬರೆದಿದ್ದಾರೆ. ಹರೀಶ್ ಇವರೊಂದಿಗೆ ಫ್ರೀ ವ್ಹೀಲಿಂಗ್ ಎನ್ನುವ ರೀತಿಯ ಮುಕ್ತ ಸಂಭಾಷಣೆ ನಡೆಸಿದರು. ಹಿಂದೂ ಪುರಾಣಗಳ ಅಂತರಾರ್ಥ ತಿಳಿಯಬೇಕಾದರೆ ಇಲ್ಲಿನ ಸಂಸ್ಕೃತಿಯ ಪರಿಚಯವೂ ಆಳವಾಗಿಯೇ ಇರಬೇಕಾಗುತ್ತದೆ ಎನ್ನುತ್ತಾರೆ ಪಾಟ್ನಾಯಕ್. ಕ್ರಿಶ್ಚಿಯನ್ ಧರ್ಮದಲ್ಲಿ ಜಡ್ಜ್‌ಮೆಂಟ್ ಡೇ ಇರುವಂತೆ ಮುಸ್ಲಿಮರಲ್ಲಿ ಕಯಾಮತ್ ಕೇ ದಿನ್ ಇದೆ. ಈ ಧರ್ಮಗಳ ಪ್ರಕಾರ, ಆ ದಿನ ಮಾನವ ತನ್ನ ಜೀವಯಾತ್ರೆಯಲ್ಲಿ ಮಾಡಿದ ಸರಿ ತಪ್ಪುಗಳಿಗೆ ತಕ್ಕ ಶಿಕ್ಷೆ ಅಥವಾ ಪುರಸ್ಕಾರಗಳನ್ನು ಪಡೆಯುತ್ತಾನೆ. ನಮ್ಮ ಪುರಾಣಗಳಲ್ಲಿ ಈ ತಪ್ಪು ಸರಿಗಳ ಕಲ್ಪನೆಯೇ ಇಲ್ಲ. ಏಕೆಂದರೆ ಒಂದಾದ ಮೇಲೆ ಒಂದರಂತೆ ಜನ್ಮಗಳನ್ನು ತಳೆಯುವಾಗ ಆ ಜನ್ಮಾಂತರಕ್ಕೆ ಅಂತ್ಯವೆಂಬುದೇ ಇರದು. ಒಂದು ಜನ್ಮದಲ್ಲಿ ಮಾಡಿದ ತೋರಿಕೆಯ ತಪ್ಪು ಹಿಂದಿನ ಜನ್ಮದ ಫಲಶ್ರುತಿಯಾಗಿರಬಹುದು. ಎಂದೆಲ್ಲಾ ಹೇಳಿ ಪಾಟ್ನಾಯಕ್‌ರು ಒಂದು ಉದಾಹರಣೆಯನ್ನು ನೀಡಿದರು. ಸೂರ್ಯವಂಶದಲ್ಲಿ ಹುಟ್ಟಿದ ಶ್ರೀರಾಮಚಂದ್ರ, ಇಂದ್ರನ ಮಗನಾದ ವಾಲಿಯನ್ನು ಕೊಲ್ಲುವುದು ಎಲ್ಲರಿಗೂ ತಿಳಿದದ್ದೇ. ಮುಂದೆ ಮಹಾಭಾರತದಲ್ಲಿ ಇಂದ್ರನ ಮಗನಾದ ಅರ್ಜುನ, ಸೂರ್ಯನ ಮಗನಾದ ಕರ್ಣನನ್ನು ವಧಿಸುತ್ತಾನೆ. ಎರಡು ವಧೆಗಳೂ ಧರ್ಮಸಂಸ್ಥಾಪನೆಯ ಉದ್ದೇಶದಿಂದ ನೆರವೇರಿದ ದೈವನಿಯಾಮಕ ಘಟನೆಗಳೇ ಆಗಿರುವುದರಿಂದ ಅದರ ಪಾತ್ರಧಾರಿಗಳಿಗೆ ಶಿಕ್ಷೆ ಕೊಡುವ ಪ್ರಶ್ನೆಯೇ ಉದ್ಭವಿಸದು. ಇದೇ ರೀತಿಯಲ್ಲಿ, ಪುರಾಣಗಳ ಬಗ್ಗೆ ತಮಗಿರುವ ಆಳವಾದ ತಿಳಿವನ್ನು ನಮ್ಮೊಂದಿಗೆ ಅನೇಕ ನಿದರ್ಶನಗಳೊಂದಿಗೆ ಬಹು ರೋಚಕವಾಗಿ ಪಾಟ್ನಾಯಕ್ ಹಂಚಿಕೊಂಡರು.

ಎರಡನೆಯ ದಿನದ ಎಂಟನೆಯ ಗೋಷ್ಠಿ ನೀನಾಸಮ್ ಪ್ರತಿಷ್ಠಾನದ ಕೆ.ವಿ.ಶಿಶಿರ ಪ್ರಸ್ತುತ ಪಡಿಸಿದ ''ಕನ್ನಡ ಕಾವ್ಯ ಕನ್ನಡಿ''. ಶಿಶಿರ ಅವರು ಹೆಗ್ಗೋಡು ಖ್ಯಾತಿಯ ಕೆ.ವಿ.ಸುಬ್ಬಣ್ಣನವರ ಮೊಮ್ಮಗ. ಅವರು ಕನ್ನಡದ ಹಲವು ಜನಪ್ರಿಯ ಭಾವಗೀತೆಗಳನ್ನು ಆಧರಿಸಿ ಅವನ್ನು ದೃಶ್ಯಕಾವ್ಯದ ರೀತಿಯಲ್ಲಿ ಸಂಯೋಜಿಸಿದ್ದಾರೆ. ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಪು.ತಿ.ನ ಮತ್ತಿತರರ ಕಾವ್ಯಗಳು ಈ ಚೌಕಟ್ಟಿನಲ್ಲಿ ಬಹು ಮನೋಜ್ಞವಾಗಿ ಮೂಡಿಬಂದಿವೆ. ಈ ದೃಶ್ಯಕಾವ್ಯವನ್ನು ಯೂಟ್ಯೂಬಿನಲ್ಲೂ ಅಪ್‌ಲೋಡ್ ಮಾಡಿರುವುದರಿಂದ ನೀವು ಅದನ್ನು ನೋಡಿ ಖುಷಿಪಡಬಹುದು.

ಇದೇ ದಿನ ಸಂಜೆ ಟಿ.ಎಸ್ ನಾಗಾಭರಣ ನಿರ್ದೇಶಿಸಿದ ''ಅಲ್ಲಮ'' ಚಿತ್ರದ ಸಂಪೂರ್ಣ ಪ್ರೀವ್ಯೂ ನೋಡುವ ಸದವಕಾಶ ನಮ್ಮದಾಯಿತು.

ಹಿಂದೊಮ್ಮೆ ನಾನು ಒಂದು ಹಳೆಗನ್ನಡ ಕಾವ್ಯ ಕಮ್ಮಟದಲ್ಲಿ ಭಾಗವಹಿಸಿದ್ದಾಗ ಅಲ್ಲಿ ಪ್ರಭುಲಿಂಗ ಲೀಲೆಯ ಹಲವು ಭಾಗಗಳನ್ನು ಆಸ್ವಾದಿಸುವ ಅವಕಾಶ ಒದಗಿತ್ತು. ಅಲ್ಲಮ ಪ್ರಭು ಗೋರಕ್ಷನನ್ನು ಭೈಟಿಯಾಗುವ ಪ್ರಸಂಗ ಬಹು ಮನೋಜ್ಞವಾಗಿ ಮೂಡಿಬಂದದ್ದು ಇಂದಿಗೂ ನೆನಪಿನಲ್ಲಿ ಹಸಿರಾಗಿದೆ. ಈ ಚಿತ್ರವನ್ನು ನೋಡಿದಾಗ ಅದೆಲ್ಲಾ ನೆನಪುಗಳು ಮರುಕಳಿಸಿದವು. ಚಿತ್ರ ನಿಜಕ್ಕೂ ಚೆನ್ನಾಗಿದೆ. ಜನವರಿ 26ರಂದು ಸಾರ್ವಜನಿಕರಿಗೆ

ಪ್ರದರ್ಶನಕ್ಕೆ ಬಿಡುಗಡೆಯಾಗಲಿದೆ. ಇದನ್ನು ನೀವು ಓದುವ ಹೊತ್ತಿಗೂ ಅದು ಚಿತ್ರಮಂದಿರಗಳಲ್ಲಿ ನಡೆಯುತ್ತಿರಲಿ ಎಂಬುದೇ ನನ್ನ ಆಶಯ.

ಕೊನೆಯ ದಿನದ ಒಂದು ಗೋಷ್ಠಿಯನ್ನು ಸಾಹಿತ್ಯ ಮತ್ತು ತತ್ವಜ್ಞಾನ ಎಂದು ಹೆಸರಿಸಿದ್ದರು. ಈ ಹೆಸರೇ ನನ್ನನ್ನು ಗೊಂದಲಕ್ಕೆ ಸಿಲುಕಿಸಿತ್ತು. ಸಾಹಿತ್ಯಕ್ಕೂ ತತ್ವಜ್ಞಾನಕ್ಕೂ ಸಂಬಂಧ ಕಲ್ಪಿಸುವುದಾದರೂ ಹೇಗೆ ಎಂಬ ಪ್ರಶ್ನೆ ನನ್ನನ್ನು ಕಾಡಿತ್ತು. ಚರ್ಚೆಯಲ್ಲಿ ಭಾಗವಹಿಸಿದ ಒಬ್ಬರಾದ ಶ್ರೀಮತಿ ವೀಣಾ ಬನ್ನಂಜೆಯವರ ಮಾತು ಕೇಳಿದ ಮೇಲೆ ನನ್ನ ಸಂಶಯಗಳು ಹರಿದವು. ನಾನು ಅರ್ಥಮಾಡಿಕೊಂಡ ಹಾಗೆ ಅವರು ಹೇಳಿದ್ದು ಇಷ್ಟು. ಮೊದಲಿಗೆ ಅವರು ಹಿಂದಿನ ದಿನ ನೋಡಿದ್ದ ''ಅಲ್ಲಮ'' ಚಿತ್ರದ ಬಗ್ಗೆ ಪ್ರಸ್ತಾಪಿಸಿದರು. ''ಆ ಚಿತ್ರದ ಮೊದಲ ಭಾಗದಲ್ಲಿ ಅಲ್ಲಮರು ತಮ್ಮ ತಾಯಿಯನ್ನು ಸ್ವಂತ ಇಚ್ಛೆಯಿಂದ ತೊರೆದು ಹೋಗುವ ದೃಶ್ಯ ಮತ್ತು ಮುಂದುವರಿದು ಮಾಯೆ ಅವರನ್ನು ಕಾಡಿದಾಗ ಅವಳಿಂದ ದಿಟ್ಟತನದಿಂದ ದೂರವಾದ ದೃಶ್ಯ ಇವೆರಡೂ ತತ್ವಜ್ಞಾನದ ಹಾದಿಯನ್ನು ಅರಸುವವರಿಗೆ ಮಾರ್ಗದರ್ಶಕವಾಗಬಲ್ಲವು'' ಎಂದು ವೀಣಾ ಅವರು ಹೇಳಿದರು.

ಸಾಹಿತಿ ಮತ್ತು ತತ್ವಜ್ಞಾನಿ ಇವರುಗಳ ಬಗ್ಗೆ ಮಾತನಾಡುತ್ತಾ, ''ಸಾಹಿತಿಯು ಉತ್ತಮ ಸಾಹಿತಿಯಾಗುವ ನಿಟ್ಟಿನಲ್ಲಿ ತನ್ನ ಮೇಲೆ ತಾನೇ ಅನೇಕ ಕಟ್ಟುಪಾಡುಗಳನ್ನು ವಿಧಿಸಿಕೊಂಡಿರುತ್ತಾನೆ. ತತ್ವಜ್ಞಾನಿಯೂ ಈ ನಿಯಮಕ್ಕೆ ಹೊರತಲ್ಲ. ಅವನು ವಿಧಿಸಿಕೊಂಡಿರುವ ನಿಯಮಗಳು ಅವನ ಅಂತರಂಗದ ಸಂಗತಿಗಳಾದ್ದರಿಂದ ಹೊರಗಿನವರಿಗೆ ಅವು ಕಾಣವು. ಸಾಹಿತಿ ವ್ಯಾವಹಾರಿಕ ಜಗತ್ತಿನ ಸಂಗತಿಗಳೊಂದಿಗೆ ಸೆಣೆಸಾಡಿದರೆ, ತತ್ವಜ್ಞಾನದ ಹಾದಿಯಲ್ಲಿನ ಮುಮುಕ್ಷುವಿನ ಸೆಣೆಸಾಟ ಅವನ ಮನಸ್ಸಿನ ವೃತ್ತಿಗಳ ಮೇಲೆ ಪ್ರಭುತ್ವ ಸಾಧಿಸುವ ಸೆಣೆಸಾಟ. ಒಬ್ಬ ಉತ್ತಮ ಸೃಜನಶೀಲ ಸಾಹಿತಿ ತನ್ನ ಪ್ರಯತ್ನಗಳಿಂದ ಒಬ್ಬ ಉತ್ತಮ ಚಿಂತಕನಾಗುವುದು ಸಾಧ್ಯ. ಅದೇ ಅವನ ಮಿತಿಯೂ ಕೂಡ. ಒಬ್ಬ ತತ್ವಜ್ಞಾನಿಯಾದರೋ ತನ್ನ ಚಿಂತನಾ ಪ್ರಕ್ರಿಯೆಯನ್ನು ಅಧೀನದಲ್ಲಿರಿಸಿಕೊಂಡು ಅವುಗಳನ್ನು ದಾಟಿ, ಅವುಗಳ ಆಚಿನ ಮೌನವನ್ನು ಕಾಣುತ್ತಾನೆ.'' ಎಂದು ವೀಣಾ ಹೇಳಿದರು.

ಒಟ್ಟಿನಲ್ಲಿ ಮೂರು ದಿನಗಳ ಸಾಹಿತ್ಯ ಸಂಭ್ರಮ ಬಹು ಯಶಸ್ವಿಯಾಗಿ ನಡೆಯಿತು. ಇದಕ್ಕಾಗಿ ಸಂಬಂಧಪಟ್ಟ ಎಲ್ಲಾ ಸಂಘಟನಕಾರರಿಗೆ ಅಭಿನಂದನೆಗಳು. ಎಲ್ಲಾ ಮುಗಿಸಿ ಹೊರಡುವಾಗ ನನ್ನ ಸಾಹಿತಿ ಮಿತ್ರನೊಬ್ಬ ಮಾತನಾಡುತ್ತಾ, ''ಮುಂದಿನ ಸಂಭ್ರಮದಲ್ಲಿ ಹಲವು ಪದಗಳನ್ನು ನಿಷೇಧಿಸಿದರೆ ಸಂಭ್ರಮ ಸುಲಲಿತವಾಗಬಲ್ಲದು'' ಎಂದ. ''ಯಾವುವು ಆ ಪದಗಳು?'' ನಾನು ಕುತೂಹಲದಿಂದ ಕೇಳಿದೆ.

''ಉಪನಿಷತ್ತು, ಶಾಸ್ತ್ರ, ಪುರೋಹಿತಶಾಹಿ ಮತ್ತು ಭಗವದ್ಗೀತೆ. ಈ ಪದಗಳನ್ನು ಯಾರೂ ಬಳಸದಿದ್ದರೆ ಇಡೀ ವಿದ್ಯಮಾನಗಳು ಶಾಂತಿಯಿಂದ ನಡೆದು ಹೋಗುತ್ತವೆ ಎಂದು ನಸುನಗುತ್ತಾ ಹೇಳಿದ.

ಈ ಸಾಹಿತಿಗಳೇ ಹೀಗೆ. ಬರೀ ಒಗಟುಗಳಲ್ಲೇ ಇವರ ಮಾತು ! ಸಾಹಿತ್ಯ ಸಂಭ್ರಮದ ರಸನಿಮಿಷಗಳನ್ನೇ ಮೆಲಕು ಹಾಕುತ್ತಾ ಊರಿಗೆ ಹಿಂತಿರುಗಿದೆ.

❑

# ಕಂಪ್ಯೂಟರ್ ಮುಂದೊಂದು ಕನಸು

- ಶಿವು

''ಮಾನಿಟರ್'' ಕೇವಲ ತರಗತಿ ಖೂಳ
ನಾಯಿ ಕಚ್ಚಿದರೆ ''ಬೈಟ್'' ಎಂದರಚುವ
ದಿನಗಳು ನೆನಪಿದೆಯೇ ನಿನಗೆ?

''ವಿಂಡೋ'' ನೆರೆಮನೆ ನಳಿನಿಯ ನೋಟ
ರಾಮ್, ರಾಮ್, ಭಜನೆಯು ನಿತ್ಯದ ಪಾಠ
ನೆನಪಿದೆಯೇ ನಿನಗೆ?

''ಎನ್ನುವ'' ಬದಲು ಬಳಸುವ ''ಎಂಬೀ''
ಗ್ರಂಥಮಾಲೆಯಾ ಖ್ಯಾತರು ''ಜೀಬೀ''
ನೆನಪಿದೆಯೇ ನಿನಗೆ?

''ಅಪ್ಲಿಕೇಷನ್'' ಜೊತೆ ಕೆಲಸಕೆ ಅಲೆತ
ಸಂಜೆಗೆ ''ಪ್ರೋಗ್ರಾಂ'', ಜೊತೆಗೆ ಲಲಿತ
ನೆನಪಿದೆಯೇ ನಿನಗೆ?

''ಮೆಮೊರಿ''ಯಿಂದಲೇ ಚೆಸ್ಸಿನ ಗೇಮು
ಗಲ್ಲಿಯ ಹಿಂಬದಿ ''ಸೀಡೀ ರೋಮ್''ಉ
ನೆನಪಿದೆಯೇ ನಿನಗೆ?

''ಕೀಬೋರ್ಡ್'' ಇಲ್ಲದೆ ಟೈಪಿಂಗ್ ನಾಸ್ತಿ
''ಕರ್ಸರ್'' ಶಾಪವ ಹಾಕುವ ವ್ಯಕ್ತಿ
ನೆನಪಿದೆಯೇ ನಿನಗೆ?

ಬೊಮ್ಮನ ಹಳ್ಳಿಯ ''ಮೌಸಿ''ನ ಕಾಟ
''ಕಟ್'' ಮಾಡುವುದು ಕತ್ತರಿಯಾಟ
ನೆನಪಿದೆಯೇ ನಿನಗೆ?

ಸಭ್ಯರ ನಡುವೆ ''ಆನ್ ಜಿಪ್'' ಸಲ್ಲ
ಜೇಡನು ಇಲ್ಲದೆ ''ವೆಬ್ಬೇ'' ಇಲ್ಲ
ನೆನಪಿದೆಯೇ ನಿನಗೆ?

''ವೈರಸ್'' ಬಂದರೆ ಕರ್ಛೀಫ್ ಬೇಕು
''ಪೇಸ್ಟು'' ಮಾಡಲು ಅಂಟಿರೆ ಸಾಕು
ನೆನಪಿದೆಯೇ ನಿನಗೆ?

ಕಂಪ್ಯೂಟಾಕ್ ಅದು ಸೋಜಿಗಪೂರ್ಣ
ಎಷ್ಟೇ ಕಲಿತರು ಜ್ಞಾನ ಅಪೂರ್ಣ
ಚೆಂದದಿ ತಿಳಿದಿಹುದು ನನಗೆ

❑

# ಡಿಜಿಟಲ್ ಮದುವೆ

**– ಸಿ.ಆರ್. ಸತ್ಯ**

**ನ**ನ್ನ ಮೈದುನ ಕೋದಂಡು ನನ್ನ ಮುಂದೆ ಕೂತ್ಕೊಂಡು ಕಣ್ಣಲ್ಲಿ ನೀರು ಸುರಿಸುತ್ತಾ ಹೇಳಿದ ವೃತ್ತಾಂತವಿದು: ''ನೋಡು ಭಾವ. ಎಷ್ಟು ಹರ ಸಾಹಸ ಮಾಡಿದರೂ ಇದುವರೆಗೂ ನನಗೆ ಮ್ಯಾಚ್ ಆಗೋ ಹುಡುಗಿ ಇನ್ನೂ ಸಿಕ್ಕಿಲ್ಲ. ನನಗೂ, ನನ್ನ ಪರವಾಗಿ ಹೆಣ್ಣು ಹುಡುಕಿದ್ದ ನಿನಗೂ, ಹುಡುಗೀರನ್ನ ನೋಡಿ ನೋಡಿ ಸಾಕಾಗಿ ಹೋಗಿದೆ. ನನಗಂತೂ ಬ್ರಹ್ಮಚಾರಿಯಾಗೇ ಇದ್ದು ಬಿಡಲೇ ಅಂತ ಯೋಚನೆಗಳೂ ಬರ್ತಿತ್ತು. ಈ ಸ್ಥಿತಿಯಲ್ಲಿ ಮೊನ್ನೆ ಇಂಟರ್ನೆಟ್ ಜಾಲಾಡ್ತಿದ್ದೆ. ಒಂದು ವೆಬ್ ಸೈಟ್ ಕಾಣಿಸ್ತು. ನಿಮ್ಮ ಅಚ್ಚು ಮೆಚ್ಚಿನ ಜೀವನ ಸಂಗಾತಿಯನ್ನು ಹುಡುಕಾಡುತ್ತಿದ್ದೀರಾ? ನಿಮ್ಮದೇ ಜಾತಿ, ಕುಲ, ಮಾತೃಭಾಷೆ ಹುಡುಗೀನ ಎರಡೇ ದಿವಸಗಳಲ್ಲಿ ನಿಮಗೆ ಸಂಪರ್ಕ ಮಾಡಿಸ್ತೀವಿ. ನಮ್ಮ ವೆಬ್ ಸೈಟ್ ಒಳಗೆ ಬನ್ನಿ ಅಂತ ಇತ್ತು. ಮೊದಲು, ಆನ್ ಲೈನ್ ರೆಜಿಸ್ಟ್ರೇಶನ್ ಕೇವಲ 10,000 ರೂಪಾಯಿಗಳು. ಈಗಲೇ ದುಡ್ಡು ಪಾವತಿ ಮಾಡಿ ಅಂತು. ನನ್ನ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿ ಮಾಡಿದೆ. ತಕ್ಷಣ 'ವೆಲ್ಕಮ್ ಮಿಸ್ಟರ್ ಕೋದಂಡ್. ನಿನ್ನ ಪಾಸ್ ವರ್ಡ್ ಅನ್ನು ಆರಿಸಿಕೊಂಡು ಕನ್‌ಫರ್ಮ್ ಮಾಡು ಅಂತು. ಮಾಡಿದೆ. 'ಯಾವ ದೇಶದ ಯಾವ ರಾಜ್ಯದ ಯಾವ ಊರಿನ ಹುಡುಗಿ ನಿಮಗೆ ಇಷ್ಟ?' ಅಂತ ಕೇಳಿತು ನಾನು 'ಇಂಡಿಯಾ ದೇಶ, ಕರ್ನಾಟಕ ರಾಜ್ಯ, ಬೆಂಗಳೂರು ಉತ್ತರ, ನಾಗಾವಾರ, ಕಸಬ ಹೋಬ್ಳಿ ಅಂತ ಕುಟ್ಟಿದೆ – ಯಾಕೆ ಅಂದ್ರೆ ಭಾವ, ನಾನು ಅಲ್ಲೇ ಅಲ್ವ ಹೈಸ್ಕೂಲು ಓದಿದ್ದು.. ನನ್ನ ಕ್ಲಾಸ್‌ನಲ್ಲೇ ಇದ್ದ ಯಾವುದಾದರೂ ಬ್ಯೂಟಿ ನನ್ನ ಕಣ್ಣಿಗೆ ಬೀಳ್ತಾಳೇನೋ ಅನ್ನೋ ಆಸೆಯಿಂದ ಅಷ್ಟೆ. 'ಹುಡುಗೀದು ಯಾವ ಭಾಷೆ ಆಗಿರಬೇಕು?' ಅಂತ ಕೇಳಿತು.

> **ಕೋದಂಡು ಕೊನೆ ಕಂತು ಕಟ್ಟಿದ ಮೇಲೆ ಎಲ್ಲಾ ಬ್ಲಾಂಕ್...**

ನಾನು 'ಕನ್ನಡ' ಅಂದೆ. 'ಏನು ಓದಿರಬೇಕು, ವಯಸ್ಸು ಎಷ್ಟಿರಬೇಕು?' ಅಂತ ಇನ್ನೊಂದು ಪ್ರಶ್ನೆ ಬಂತು. 'ನಾನು ಪಿ.ಯು.ಸಿ. ಆದರೆ ಸಾಕು. ಯಾಕೇಂದ್ರೆ ನಾನೂ ಪಾಸ್ ಆಗಿಲ್ಲದೆ ಇದ್ದರೂ ಅಲ್ಲಿಯವರೆಗೆ ಓದಿರೋದು, ವಯಸ್ಸು 20–25 ವರುಷ ವ್ಯಾಪ್ತಿಯಲ್ಲಿದ್ದರೆ ಸಾಕು ಅಂದೆ. ಅದಕ್ಕೆ ಆ ವೆಬ್ ಸೈಟು, 'ಈಗ ಕನ್ನಡ ಹುಡಿಗೀರೆಲ್ಲ ಐ.ಟಿ. ಬಿ.ಟಿ. ಅಥವಾ ಫ್ಯಾಶನ್ ಡಿಸೈನ್ ಮಾಡ್ಕೊಂಡು ಇರುವವರೇ ಆಗಿದ್ದಾರೆ. ಮಾತೃ ಭಾಷೆ ಕನ್ನಡ ಆಗಿದ್ರೂ ಮಾತಾಡೋದು ಇಂಗ್ಲಿಷ್‌ನಲ್ಲೇ. ಜೊತೆಗೆ ನಿನಗೂ ವಿದ್ಯಾಭ್ಯಾಸ ಜಾಸ್ತಿ ಇಲ್ಲ, ಹಾಗಾಗಿ ನಿನಗೆ ಸೂಟ್ ಆಗೋ ಹುಡುಗಿ ಸಿಗೋದು ಕಷ್ಟ. ಸರ್ಚ್ ಚಾರ್ಜ್ ಜಾಸ್ತಿಯಾಗುತ್ತೆ. ಇನ್ನೊಂದು 10,000 ರೂ. ಈಗಲೇ ಪಾವತಿ ಮಾಡು ಅಂತು ಮಾಡಿದೆ. 'ಥ್ಯಾಂಕ್ಯೂ ಮಿಸ್ಟರ್ ಕೋದಂಡ್, ಕಾಂಟ್ಯಾಂಕ್ಟ್ ಮಿ ಆಫ್ಟರ್ 24 ಅವರ್ಸ್ ಅಂತ ವೆಬ್ ಸೈಟ್ ಮಾಯ ಆಯ್ತು.

ಬಕ ಪಕ್ಷಿ ತರಹ ಮಾರನೇ ದಿನದವರೆಗೂ ಕಾದು, ಮತ್ತೊಮ್ಮೆ ಅದರೊಳಗೆ ಹೋದೆ. 'ಗುಡ್ ನ್ಯೂಸ್, ಮಿಸ್ಟರ್ ಕೋದಂಡ್, ನಿಮಗೆ ಸೂಟ್ ಆಗೋ ಅಂತಹ ಹುಡುಗಿಯರು ನಮ್ಮ ಲಿಸ್ಟ್‌ಗೆ ಬಂದಿದ್ದಾರೆ. ಆದರೆ ಈಗ ನೀವು ನಿಮ್ಮ ಒಂದು ಚಾಯಿಸ್‌ನ ಕರ್ಮ್‌ಫರ್ಮ್ ಮಾಡಬೇಕು. ಅದು ನಿಮ್ಮ ಹುಡುಗಿಯ ಬಣ್ಣ ಹೇಗಿರಬೇಕು ಅಂತ. ನಮ್ಮಲ್ಲಿ ಇರೋ ಚಾಯಿಸ್‌ಗಳು ಹೀಗಿವೆ: ಚಾರ್ಕೋಲ್ ಬ್ಲ್ಯಾಕ್, ನಾರ್ಮಲ್ ಬ್ಲ್ಯಾಕ್, ವೀಟ್ ಬ್ರೌನ್, ಲೆಮನ್ ಯೆಲ್ಲೋ, ಲೈಮ್ ವೈಟ್, ಆಪಲ್ ರೆಡ್ – ಹೀಗೆ. ಆದರೆ ನೀವು ನಮಗೆ ಉತ್ತರ ಕೊಡೋದಕ್ಕೆ ಮುಂಚೆ ನಿಮ್ಮ ಬಣ್ಣ ಯಾವುದು ಅಂತ ನಿಮಗೇ ಗೊತ್ತೇ ಇರುತ್ತೆ. ಆ ಬಣ್ಣ ನಿಮ್ಮ ಚಾಯಿಸ್ ಬಣ್ಣಕ್ಕೆ ಮ್ಯಾಚ್ ಆಗುತ್ತಾ ಅಂತ ಯೋಚಿಸಿ. ಯಾಕೆ ಅಂದರೆ, ನಾಳೆ ನಿಮ್ಮಿಬ್ಬರ ಬಣ್ಣಗಳು ನೋಡುವವರಿಗೆ ಕಷ್ಟ ಆಗಬಾರದು. ಆಗ ನಮ್ಮ ವೆಬ್ ಸೈಟ್‌ಗೆ ಕೆಟ್ಟ ಹೆಸರು ಬರಬಾರದು ಅಂತು. ನಂದು ಚಾರ್ಕೋಲ್ ಬ್ಲ್ಯಾಕ್ ಬಣ್ಣ ಆದರೂ, ನನಗೆ ಆಸೇ ಅನ್ನೋದೇ ಇಲ್ಲವೆ ಭಾವ..? ಅದಕ್ಕೆ ಆಪಲ್ ರೆಡ್ ಅಂತ ಚಾಯಿಸ್ ಕೊಟ್ಟೆ. ತಕ್ಷಣ ವೆಬ್ ಸೈಟ್‌ನಲ್ಲಿ ಏನೇನೋ ಸಿಡಿಲು, ಮಿಂಚು ಹೊಡೆದ ಹಾಗೆ ಸ್ಕ್ರೀನ್ ಆಫ್ ಆಗಿ ತಾನಾಗೇ ಆನ್ ಆಯ್ತು. ಆಮೇಲೆ, 'ನೋಡಿ, ನಿಮಗೆ ಆಸೆ ಆದ ಆಪಲ್ ರೆಡ್ ಹುಡುಗೀನ ಒಪ್ಪಿಸೋದು ನಮ್ಮ ಸಿಸ್ಟಮ್‌ಗೆ ಬಹಳ ತೊಂದರೆ ಆಗ್ತಾ ಇದೆ. ಹಾಗಾಗಿ ನೀವು ಟ್ರಾನ್ಸಾಕ್ಷನ್ ಚಾರ್ಜ್ ಅಂತ ಈಗಲೇ ಆನ್ ಲೈನ್ 25,000 ಪಾವತಿ ಮಾಡಿ. ಇಲ್ಲದಿದ್ದರೆ ಈ ಘಟ್ಟದಲ್ಲಿ ನಿಮ್ಮ ಮೊದಲನೆ ಡಿಪಾಸಿಟ್ ನ ನಾವು ವಾಪಸ್ ಮಾಡೋದಕ್ಕೆ ಆಗಲ್ಲ ಅಂತು. ಸರಿ ಅದೂ ತೆತ್ತಿದೆ. ಇನ್ನೊಂದು ಸಲ ಸ್ಕ್ರೀನ್‌ನಲ್ಲಿ ಗುಡುಗು ಮಿಂಚು ಬಂದು ಆಫ್ ಆನ್ ಆದ ಮೇಲೆ, 'ಅಭಿನಂದನೆಗಳು, ಮಿಸ್ಟರ್ ಕೋದಂಡ್, ನಿಮ್ಮ ಪ್ರಿಲಿಮಿನೆರಿ ಚಾಯಿಸ್‌ನ ನಾವು ಮುಗಿಸಿದೀವಿ. ಕೊನೇ ಪ್ರಶ್ನೆ: ನಿಮ್ಮ ನಾಗಾವಾರದ ಹುಡುಗೀರೆಲ್ಲಾ ಐದು ಕಾಲು ಅಡಿಗಿಂತ ಎತ್ತರ ಇಲ್ಲ. ಅವರ ತೂಕ 70 ಕೇಜಿ ಇಂದ 105 ಕೇಜಿ ವರೆಗೆ ಇದೆ. ನಿಮ್ಮ ತೂಕಕ್ಕೆ ಮ್ಯಾಚ್ ಮಾಡಿ ಅಂತು. ನಾನು 'ಹುಡುಗಿ 100 ಕೇಜಿ ಮೇಲಿದ್ದರೆ ಸರಿ. ಯಾಕೆ ಅಂದರೆ ನಾನು 101 ಕೇಜಿ ಇದೀನಿ (ಎರಡು ಕೇಜಿ ಕಮ್ಮೀನೆ ಹೇಳಿದೆ ಮಾವ. ಮದುವೆ ಸಮಯಕ್ಕೆ ಹೇಗೋ ಕಮ್ಮಿ ಮಾಡಿಕೊಂಡರೆ ಆಯ್ತು ಅನ್ನೋ ಧೈರ್ಯದಿಂದ), ವರ ಸಾಮ್ಯ ಚೆನ್ನಾಗಿ ಆಗುತ್ತೆ ಅಂದೆ. ಅದಕ್ಕೆ ಆ ವೆಬ್ ಸೈಟ್, ನಿಜ ನಿಜ ಆದರೆ 100 ಕೇಜಿ ಮೇಲಿನ ಹುಡುಗೀನ ಹುಡುಕೋಕ್ಕೆ ನೀವು ಎಕ್ಸ್ಟ್ರಾ ಸರ್ವೀಸ್ ಚಾರ್ಜ್ ಕೊಡಬೇಕಾಗುತ್ತೆ. ದಯವಟ್ಟು ಇನ್ನೊಮ್ಮೆ 10,000 ರೂ ಆನ್ ಲೈನ್ ಪಾವತಿ ಮಾಡಿ ಅಂತು. ಯೋಚನೆ ಮಾಡಿದೆ ಭಾವ. ಎಷ್ಟಾದರೂ ಇದು ಜೀವ ಪರ್ಯಂತ ಹೆಂಡತಿ ಜೊತೆ ಬಾಳೋ ವಿಷಯ. ನಾನು ಯಾಕೆ ಕಾಂಪ್ರೊಮೈಸ್ ಮಾಡಲಿ ಅಂತ ಆ ಎಕ್ಸ್ಟ್ರಾ ಹಣಾನೂ ತೆತ್ತಿದೆ. ತಕ್ಷಣ ಆ ವೆಬ್ ಸೈಟ್‌ನಿಂದ ವಾಲಗ, ಡೋಲಿನ ಶಬ್ಧ ಬಂತು. ಭಾಗ್ಯದ ಲಕ್ಷ್ಮಿ ಬಾರಮ್ಮ ಕೃತಿ ತರಹ ಕೇಳಿಸ್ತು. ಸ್ಕ್ರೀನ್ ಮೇಲೆ 'ಕಂಗ್ರಾಟ್ಸ್ ಮಿಸ್ಟರ್ ಕೋದಂಡ್. ಯುವರ್ ಲೈಫ್ ಪಾರ್ಟ್ನರ್ ಈಸ್ ರೆಡಿ ಟು ಹೋಲ್ಡ್ ಯುವರ್ ಹ್ಯಾಂಡ್ಸ್! ಇಗೋ ನೋಡಿ ನಿಮ್ಮ ಬ್ರೈಡ್ ಟು ಬಿ ಫೋಟೋ! ಅಂತ ಹೇಳ್ತಾನೇ ಸ್ಕ್ರೀನ್ ಮೇಲೆ ಎಂತಹ ಸುಂದರ ಹುಡುಗಿ ಫೋಟೋ ಬಂತು

ಅಂತೀಯ ಭಾವಾ.. ನನಗೆ ಬೇಕಾದ ಹಾಗೇ ಇದ್ಲು. ಆಪಲ್ ರೆಡ್, 101 ಕೇಜಿ ತೂಕ, ಐದು ಕಾಲು ಅಡಿ ಎತ್ತರ... ನನಗೆ ಎಂತಹ ಮ್ಯಾಚ್ ಅಂತೀ ಭಾವ! ಥ್ಯಾಂಕ್ಯೂ ವೆಬ್ ಸೈಟ್, ಈಗಲೇ ನನಗೆ ಅವಳ ಹೆಸರು, ಅಡ್ರೆಸ್ ಮತ್ತು ಮೊಬೈಲ್ ನಂಬರ್ ಕೊಡಿ ಅಂದೆ. ಅದಕ್ಕೆ ಅದು, ಖಂಡಿತ, ಆದರೆ ಇದು ನಿಮ್ಮ ಮದುವೆ ತೀರ್ಮಾನದ ಅಂತಿಮ ಘಟ್ಟ, ಈಗ ನೀವು ನಿಮ್ಮ ನಿರ್ಧಾರ ಬದಲಾಯಿಸಿದರೆ ನಿಮಗೆ ಯಾವ ರೀಫಂಡ್ ಕೂಡ ಇಲ್ಲ. ನಿರ್ಧಾರ ಸರಿ ಅಂದರೆ, ದಯವಿಟ್ಟು ಈಗ ಇನ್ನೊಂದು 50,000 ರೂ. ಪಾವತಿ ಮಾಡಿ. ಹುಡುಗಿ ಸಂಪರ್ಕ ಮಾಹಿತಿ ಎಲ್ಲಾ ಕೊಡುತ್ತೀವಿ ಅಂತು. ಭಾವಾ, ಕೊನೇಗೂ ನಾನು ಇಂತಹ ಹುಡುಗಿ ಪಡೆಯೋಕ್ಕೆ ಏನು ಪುಣ್ಯ ಮಾಡಿದ್ದೆನೋ ಅಂದ್ಕೊಂಡು ಆ ದುಡ್ಡನ್ನೂ ಪಾವತಿ ಮಾಡಿದೆ. 'ಥ್ಯಾಂಕ್ಯೂ, ಇನ್ನೊಮ್ಮೆ ನಿಮ್ಮ ಪಾಸ್ ವರ್ಡ್ ಕನ್‌ಫರ್ಮ್ ಮಾಡಿ ತಕ್ಷಣ ಹುಡುಗಿಯ ಸಂಪರ್ಕ ಮಾಹಿತಿ ನಿಮಗೆ ಕಳಿಸ್ತೀವಿ. ನಂತರ ನಿಮಗೆ ಬೇಕೂ ಅಂದರೆ ಮದುವೆ ಛತ್ರ, ಈವೆಂಟ್ ಮ್ಯಾನೇಜರ್ ಪುರೋಹಿತ್ರೂಸ್ ಇವರನ್ನೆಲ್ಲಾ ನಾವೇ ಬುಕ್ ಮಾಡ್ತೀವಿ. ಸಧ್ಯಕ್ಕೆ ನಿಮಗೆ ಮತ್ತೊಮ್ಮೆ ಕಂಗ್ರಾಟ್ಸ್. ನಿಮ್ಮ ಜೀವನ ಸುಗಮವಾಗಿರಲಿ ಅಂತ ಹಾರೈಸ್ತೀವಿ ಅಂತ ಮೆಸೇಜ್ ಬಂತು. ನಾನು ಪಾಸ್ ವರ್ಡ್ ಕನ್ಫರ್ಮ್ ಮಾಡಿದೆ ಭಾವ. ಆದರೆ ಆದರೆ... (ಈ ಘಟ್ಟದಲ್ಲಿ ಯಾಕೋ ಕೋದಂಡೂಗೆ ಮಾತೇ ನಿಂತುಹೋಯಿತು. ಸುಧಾರಿಸಿಕೊಂಡು ಮತ್ತೆ ಶುರುಮಾಡಿದ) ತಕ್ಷಣ ಸ್ಕ್ರೀನ್ ಬ್ಲ್ಯಾಂಕ್ ಆಯ್ತು! ಆಮೇಲೆ ನೋಡಿದ್ರೆ, ಆ ವೆಬ್ ಸೈಟೇ ನಾಪತ್ತೆ ಆಗಿತ್ತು! ಹೀಗೇ ದುಡ್ಡೂ ನೆಗೆದು ಬಿತ್ತು. ಹುಡುಗೀನೂ ನೆಗೆದು ಬಿದ್ಲು ಮಾವ. ಆದರೂ ಮಾರನೇ ದಿನ ಒಂದು ಚಾನ್ಸ್ ನೋಡೋಣ ಅಂತ ನಾಗಾವಾರ ಎಲ್ಲಾ ಸುತ್ತು ಹಾಕಿದೆ. ಯಾರಾದರು 101 ಕೇಜಿ ಹುಡುಗಿ... ಆಪಲ್ ಬಣ್ಣದ ಹುಡುಗಿ, ಕಣ್ಣಿಗೆ ಬೀಳ್ತಾಳೇನೋ ಅಂತ... ಹಾಗೆ ಯಾರೂ ಕಾಣಿಸಲಿಲ್ಲ ಭಾವ.

ಏನಂದೆ? ಆಮೇಲೆ ಏನು ಮಾಡಿದೆ ಅಂದ್ಯಾ?'

ನನ್ನ ಸ್ನೇಹಿತನೊಬ್ಬ 'ಪೆದ್ದು ಮುಂಡೇದೆ, ಈ ಡಿಜಿಟಲ್ ಗಿಜಿಟಲ್ ಮದುವೇ ಅನ್ನೋದು ಬಿಟ್ಟು ಇಲ್ಲೇ ಇರೋ ಚೌಡೇಶ್ವರಿ ದೇವಸ್ಥಾನಕ್ಕೆ ಹೋಗು, ಅಲ್ಲಿ ವಧು ಪೂಜೆ ಅಂತ ಮಾಡ್ತಾರೆ, ಅದನ್ನು ಮಾಡಿಸು. ಒಳ್ಳೇ ಹುಡುಗಿ ಸಿಗ್ತಾಳೆ ಅಂತ ಹೇಳಿದ. ಈಗ ಅಲ್ಲಿಗೇ ಹೋಗ್ತಾ ಇದೀನಿ ಭಾವ... ನೀನು ನನ್ನ ಜೊತೆ ಬರ್ತೀಯಾ? ನಿನ್ನ ಮುಖಾನಾದರೂ ನೋಡಿ, ಆ ದೇವಿ ಒಲೀತಾಳೋ ಏನೋ? ಏನಂತಿ..? ಹೋಲ್ಡಾನ್ ಭಾವ. ಈ ನನ್ನ ಫ್ರೆಂಡ್ ದೇ ಕಾಲ್ ಬರ್ತಿದೆ. ಹಲೋ! ..ಓಕೆ, ಓಕೆ... ಏನಿಲ್ಲ ಭಾವ. ಈಗ ನನ್ನ ಫ್ರೆಂಡ್ ಹೇಳ್ತಿದಾನೆ, ದೇವಸ್ಥಾನಕ್ಕೆ, ನಾನು ಖುದ್ದಾಗಿ ಹೋಗೋದೇನೂ ಬೇಡ, ಅವರು ಆನ್ ಲೈನ್ ಪೂಜೆ ಮಾಡಿ ಆನ್ ಲೈನ್‌ನಲ್ಲೇ ಪ್ರಸಾದಾನೂ ಕೊಡ್ತಾರಂತೆ ಹಾಗೇ ಮಾಡ್ತೀನಿ, ಭಾವ!''

❑

# ಕಂಪ್ಯೂಟರ್ ಮೆಡಿಸನ್

**- ಡಾ|| ಪ್ರಕಾಶ್**

**ನಂ** ದೇಶದಲ್ಲಿ, ವೈದ್ಯರು ಕೆಲಸ ಮಾಡೋದು ಸಾಮಾನ್ಯವಾಗಿ ಸ್ಟಾಂಡರ್ಡೈಸ್ಡ್ ರೀತಿ. ರೋಗೀನ ಪ್ರಶ್ನೆ ಕೇಳೋದು, ಅವನ(ಳ) ಉತ್ತರಗಳನ್ನು ಕೇಳಿ, ಒಂದು ಸುಮಾರು ಡಯಾಗ್ನೋಸಿಸ್‌ಗೆ ಬರೋದು. ನಂತರ, ರೋಗೀನ ಪರೀಕ್ಷೆ ಮಾಡಿ, ಅವನನ್ನ ಲ್ಯಾಬ್/ ಎಕ್ಸರೇಗಳಿಗೆ ಕಳಿಸಿ, ಫೈನಲ್ ಡಯಾಗ್ನೋಸಿಸ್ ಮಾಡಿ, ಚಿಕಿತ್ಸೆ ಶುರು ಮಾಡೋದು. ಇದೇ ಬಹು ವರ್ಷಗಳಿಂದ ಬಂದಿರೋ ಪದ್ಧತಿ. ಮೊನ್ನೆ ನನ್ ಖಾಸಾ ಗೆಳೆಯ ಚಂದು ಅಮೆರಿಕಾದಿಂದ ಬಂದಿದ್ದ, ರಜಕ್ಕೆ. ಅವನು ಕಂಪ್ಯೂಟರ್ ಕಂಪೆನಿಯಲ್ಲಿ ಸಾಫ್ಟ್‌ವೇರ್ ತಜ್ಞ. ಮೈಸೂರಿನಲ್ಲಿ ಮೆಡಿಕಲ್ ಡಿಗ್ರಿ ಪಡೆದಿದ್ರೂ, ಅಮೆರಿಕಾದಲ್ಲಿ ತನ್ನ ವೃತ್ತೀನೆ ಬದಲಾಯಿಸಿಬಿಟ್ಟಿದ್ದ.

''ಇದೇನೋ, ನೀವಿನ್ನೂ ಕಂದಾಚಾರದ ಪದ್ಧತಿ ಉಪಯೋಗಿಸ್ತಾ ಇದೀರ? ನಾನೊಂದು ಸಿಸ್ಟಂ ತಯಾರು ಮಾಡಿದೀನಿ! ಅದು ಬಹಳ ಯೂಸರ್ ಫ್ರೆಂಡ್ಲಿ! ಒಂದು ನಿಮಿಷದಲ್ಲಿ ಡಯಾಗ್ನೋಸಿಸ್ ಗೊತ್ತಾಗುತ್ತೆ! ಒಂದು ಸ್ಯಾಂಪಲ್ ತಂದಿದೀನಿ, ಆದರೆ ಯಾರಿಗೂ ಹೇಳಬೇಡ; ಇದಿನ್ನೂ ಪೇಟೆಂಟ್ ಆಗಿಲ್ಲ'' ಅಂತ ಒಂದು ಮೂರುವರೆ ಅಂಗುಲದ ಫ್ಲಾಪಿನ ನನ್ ಪಾಪಿ ಕೈಗಳಿಗೆ ಕೊಟ್ಟ. ನನಗೋ ಸ್ವರ್ಗಕ್ಕೆ ಮೂರೇ ಫ್ಲಾಪಿ, ಅಲ್ಲ ಗೇಣು! 'ನಾಳೇನೇ ಇದನ್ನ ಉಪಯೋಗಿಸಿ ನೋಡ್ತೀನಿ ಕಣೋ! ರಿಸಲ್ಟು ನಿನಗೆ ಹೇಳ್ತೀನಿ' ಅಂದೆ. 'ಇಲ್ಲ ಕಣೋ, ನಾನೂ ನಿನ್ ಜತೇಲೇ ಕೂತ್ಕೊಂಡು, ಈ ಸಿಸ್ಟಂ ಹೇಗಿದೆ ಅಂತ ನೋಡ್ತೀನಿ!' ಅಂದ, ಚಂದು. 'ಸರಿ!' ಅಂದೆ.

ಮರುದಿನ ಸಂಜೆ, ನಾಲ್ಕು ಗಂಟೆ. ನಾನೂ, ಚಂದು ನನ್ ಆಫೀಸಲ್ಲಿ ಕೂತಿದ್ವಿ, ಕಂಪ್ಯೂಟರ್ ಜತೇಲಿ, ರೆಡಿಯಾಗಿ. ಮೊದಲ ಪೇಶೆಂಟು, ಭಾರೀ ಗಾತ್ರದ ಐವತ್ತು ವರ್ಷದ ಮಹಿಳೆ. ಡಯಟ್ ಅನ್ನೋ ಪದದ ಸ್ಪೆಲಿಂಗೂ ಪಾಪ ಅವರಿಗೆ ಗೊತ್ತಿರಲಿಲ್ಲ! ನಾನು, ರೋಗಿ ಹೆಸರು, ವಯಸ್ಸು, ಅಡ್ರೆಸ್ ಇತ್ಯಾದಿ ಎಂಟರ್‌ಮಾಡಿ, 'ನಿಮಗೇನು ತೊಂದರೆ?' ಅಂದೆ. ಆಕೆ ಮುಖದಲ್ಲಿ ವೇದನೆ ತೋರಿಸುತ್ತಾ, ಬಲಗೈಯಲ್ಲಿ ತನ್ನ ಉದರ(ಬಹು ಗಾತ್ರದ)ದ ಮೇಲೆಲ್ಲಾ ಕೈಯಾಡಿಸುತ್ತ, 'ಇಲ್ಲೆಲ್ಲ ಸಂಕಟ ಡಾಕ್ಟರೇ!' ಅಂದಳು. ನಾನು ತಬ್ಬಿಬ್ಬಾದೆ. ಸಂಕಟ ಅನ್ನೋ ಪದಕ್ಕೆ ಇಂಗ್ಲಿಷ್‌ನಲ್ಲಿ ಯಾರೂ (ಇನ್ನೂ) ಈಕ್ವಿಲೆಂಟ್ ತಯಾರಿಸಿಲ್ಲ! ನಾನು ಡೆಸ್ಪರೇಟಾಗಿ, 'ನೋವೇನಮ್ಮ?' ಅಂದೆ. 'ಇಲ್ಲ ಡಾಕ್ಟ್ರೆ, ನೋವು ನನಗೆ ಗೊತ್ತಿಲ್ವ, ಸಂಕಟ!' ಅಂದಳು. ನಾನು ಚಂದು ಕಡೆ ನೋಡಿ, ''ದಿಸ್ ಕಂಫೋರ್ಟ್'' ಅಂತ ಎಂಟರ್ ಮಾಡಲೇನೋ ಅಂದೆ. ರೋಗಿಯ ಮಗ, ಅಬ್ಜೆಕ್ಷನ್ ತೆಗೆದ. ಡಾಕ್ಟ್ರೇ, ನಂ ತಾಯಿ ಹೇಳ್ತಿರೋದು 'ಸಂಕಟ' ಅಂತ! ಸಿಂಪ್ಟಂ ರಾಂಗಾಗಿ ಅರ್ಥ ಮಾಡ್ಕೋಬಾರದಲ್ಲ!' ಅಂದ ಟೆಂಪೊರರಿಯಾಗಿ ಕಂಪ್ಯೂಟರ್ ಆರಿಸಿ, ರೋಗೀನ ನೋಡಿ, ಔಷಧಿ ಬರೆದು ಕಳಿಸಿದೆ.

ಮುಂದಿನ ಪೇಶೆಂಟು, ಹಳ್ಳಿಯ ಭಾರೀ ರೈತನ ಮಡದಿ. ಅವಳು ತನ್ನ ಹೆಸರು ಹೇಳಿದಳು. 'ವಯಸ್ಸು?' ಅಂದ ಕೂಡಲೆ, ಅವಳು ಪತಿಯ ಕಡೆ ನೋಡುತ್ತ, ಅದೆಲ್ಲ ಯಾರು ಬರೆದಿಟ್ಟವ್ರೆ ಬುಡಿ!' ಅಂತ ನಕ್ಕಳು, ಈ ಹಾಳು ಕಂಪ್ಯೂಟರ್ರೋ, ಏಜ್ ಎಂಟರ್ ಮಾಡೋತನಕ ಮುಂದುವರಿಯಕ್ಕೆ ಬಿಡಲ್ಲ ನಮ್ಮನ್ನ! ಅಂದಾಜು ವಯಸ್ಸು ಹಾಕಿದೆ!

ಮೂರನೇ ಪೇಶೆಂಟು ಬಂದು ಕುಳಿತ.

'ಡಾಕ್ಟರೆ, ನನ್ನ ತಲೇಲೆಲ್ಲ ಏನೋ ತುಂಬಿ, ತುಳುಕಾಡಿದ ಹಾಗಾಗುತ್ತೆ!' ಅಂದ. ಈ ತುಂಬದ ಕೊಡದ ಕತೆ ಕೇಳಿ ನಾನು ನಡುಗಿದೆ! ಸಿಂಪ್ಟಂನ ಹೇಗೆ ತರ್ಜುಮೆ ಮಾಡಲಿ? ಚಂದು ಕಡೆ ನೋಡಿದೆ. ಅವನು ತಲೆ (ತುಳುಕದಂತೆ) ಕೆಳಗೆ ಮಾಡಿಕೊಂಡು ಕುಳಿತಿದ್ದ. ಕಂಪ್ಯೂಟರ್ ಹಾಗೇ ಬಿಟ್ಟು ರೋಗೀನ ನೋಡಿ ಕಳಿಸಿದೆ.

ನಾಲ್ಕನೇ ಪೇಶೆಂಟು ಬರುಕ್ಕೆ ಮುಂಚೆ ಚಂದು 'ನಾನು ಕಾಫಿ ಕುಡಿದು ಬರ್ತೀನಿ ಅಂತ ಎದ್ದ. ನಾನು ಇಲ್ಲಿ, ಇದೊಂದು ನೋಡು, ಆಮೇಲೆ ಕಾಫಿ' ಅಂದೆ. ಒಬ್ಬ ಯುವಕ ಬಂದು ಕುಳಿತ. ಕಂಪ್ಯೂಟರ್‌ನ ನೋಡಿ ಚಕಿತನಾದ. 'ಏನ್ರೀ ನಿಮಗೆ ತೊಂದ್ರೆ?' ಅಂದೆ. 'ಡಾಕ್ಟ್ರೆ, ಒಂದು ತಿಂಗಳಿಂದ ಬೆಳಿಗ್ಗೆ ಎದ್ದ ಮೇಲೆ, ಮುಖ ಎಲ್ಲಾ ಚುಮ ಚುಮ ಅನ್ನತ್ತೆ, ಆಮೇಲೆ, ಮೈಯಲ್ಲೆಲ್ಲ ನರಗಳು ಜುಮಾ, ಜುಮಾ, ಅಂತ ಎಳೆಯುತ್ವೆ! ನನಗೆ ಹೊಟ್ಟೇಲಿ ಸಂಕಟ (ಚಂದು ಬೆಚ್ಚಿ, ಬೆವರಿದ!) ಆಗಿ, ಜೀವ ಹೋದ ಹಾಗೇ ಆಗುತ್ತೆ! ನಾನು (ಶಾಂತನಾಗಿ) ಕಂಪ್ಯೂಟರ್ ಎಂಟರ್ ಮಾಡಿದೆ. ''ಚುಮಾ ಚುಮಾ ಆನ್ ಫೇಸ್, ಆಲ್ ನರ್ವ್ಸ್ ಪುಲಿಂಗ್ - ಜುಮಾ ಜುಮಾ'' ಅಂತ ಬರೆದು ಎಂಟರ್ ಬಟನ್ ಒತ್ತಿದೆ! ಕಂಪ್ಯೂಟರ್ ಗರ್ಭದಿಂದ ಒಂದು ಆರ್ತನಾದ ಕೇಳಿಬಂತು. ಚಂದು ಹೌಹಾರಿದ. ಸ್ಕ್ರೀನ್ ಮೇಲೆ ಉತ್ತರ ಬಂತು. ''ಅನ್ ನೌನ್ ಡಿಸಿಸ್; ಟ್ರೈ ಜಪಾನಿಸ್ ವರ್ಶ್ಯನ್ ಆಫ್ ಸಾಫ್ಟ್‌ವೇರ್!'' ನಾನು ಚಂದು ಕಡೆ ನೋಡಿ, ''ಅಲ್ಲ ಕಣೋ, ಈ ಅಪದ್ಧಾನ ಜಪಾನ್‌ಗೂ ರವಾನಿಸ್ತಿದೀಯಲ್ಲೋ?'' ಅಂದೆ. ಜಪಾನಿನ ಡಾಕ್ಟರುಗಳು ಈ ಪ್ರೋಗ್ರಾಂ ಜತೆ ಸೆಣಸಾಡುವ ದಾರುಣ-ದೃಶ್ಯ ನನ್ನ ಮನಸ್ಸಿಗೆ ಬಂದು ನಾನು ಮಮ್ಮಲ ಮರುಗಿದೆ!

ಆ ಕ್ಷಣದಲ್ಲಿ ಎಂಟರ್ ಕೆ.ಇ.ಬಿ.! ಕರೆಂಟು ಹೊರಟುಹೋಯಿತು! ಚಂದು ಮುಖ ಅರಳಿತು! ''ಯುಪಿಎಸ್ ಇಲ್ಲವೇನೋ'' ಅಂದ. ನಾನು 'ಇಲ್ಲ, ಇಲ್ಲಿ ಬರೀ ಐಪಿಎಸ್!' ಅಂದೆ. ಅವನ ಹುಬ್ಬುಗಳೇರಿದವು. ಇಂಟರಪ್‌ಟೇಡ್ ಪವರ್ ಅಂತ ನಕ್ಕೆ!

ಆ ಪಾಪಿ ಫ್ಲಾಪಿ ತಗೊಂಡು ಚಂದು ಊರಿಗೆ ಹೋಗಿದಾನೆ, ಇದನ್ನೆಲ್ಲ ಯಾರಿಗೂ ಹೇಳಬೇಡ ಅಂತಿದಾನೆ. ಆದರೆ ನಾನು ದೇಶಪ್ರೇಮದಿಂದಾಗಿ ಇದನ್ನೆಲ್ಲ ಭಾರತದ ಓದುಗರಿಗೆ ಹೇಳಿದೀನಿ!

❑

# ನನ್ನ ಜಾಣ ದೂರವಾಣಿ

**- ಸಹನಾ ಪ್ರಸಾದ್**

''**ಬಾ**ರೋ ಬೇಗ. ಸ್ವಲ್ಪ ಬೇಗ ಬಾ ಇಲ್ಲಿ...''

ನನ್ನ ಕೂಗು ಮಗರಾಯನ ಮೇಲೆ ಏನೂ ಪರಿಣಾಮ ಬೀರಲಿಲ್ಲ.

''ಏನಾಯ್ತಮ್ಮ. ನಿನ್ನ ಜಾಣ ದೂರವಾಣಿ ಏನನ್ನುತ್ತೆ'' ನನ್ನನ್ನು ರೇಗಿಸುವಾಗ ಅವನ ಕನ್ನಡ ಬಳಿಕೆ ಜಾಸ್ತಿಯಾಗುತ್ತೆ.

**ಜಾಣತನವಿಲ್ಲದೆ ಮೊಬೈಲ್ ಉಪಯೋಗಿಸಿದರೆ ಆಗುವ ಅನಾಹುತಗಳು**

''ಇಲ್ನೋಡೋ, ನನ್ನ ದುಶ್ಮನ್ ಇದಾಳಲ್ಲ. ಅದೇ ಆ ಪುಣ್ಯಾತ್ಗಿತ್ತಿ, ಅವಳಿಗೆ ಮೆಸೇಜ್ಹೊರಟು ಹೋಯ್ತಲ್ಲೋ'' ಎಂಬ ನನ್ನ ಕುಯ್ ಕುಯ್ ಧ್ವನಿ ಅವನಿಗೆ ಸಿಟ್ಟು ಬರಿಸುತ್ತೆ.

''ಯಾರಮ್ಮ ಅದು. ಏನು ಮೆಸೇಜ್. ಎಲ್ಲಿ ತೋರಿಸು ನೋಡೋಣ'' ಎಂದಾಗ ಹೊಸದಾಗಿ ನಮ್ಮ ಮನೆಗೆ ಬಂದ ಲೇಟೆಸ್ಟ್ ಫೋನನ್ನು ಅವನ ಕೈಗಿತ್ತೆ. ಮೆಸೇಜ್ ಓದಿದವನೆ ನಗಲು ಷುರು ಮಾಡಿದ. ''ಅದೇ ಕಣೆ ಆ ಗೂಬೆ ಕವಿತಾ, ಅವಳ...'' ಕವಿತಳನ್ನು ಸಾಕಷ್ಟು ಬೈದು ಉದ್ದಕ್ಕೆ ಬರೆದ ಮೆಸೇಜ್ ಬೇರೆಯವರಿಗೆ ಬದಲಾಗಿ ಅವಳಿಗೇ ಹೋಗಿದೆ! ಒಂದಾನೊಂದು ಕಾಲದಲ್ಲಿ ನನ್ನ ಪ್ರೀತಿಯ ಗೆಳತಿಯಾದ ಕವಿತಾ ಎಸ್. ಬಗ್ಗೆ ಬರೆದ ಬೈಗುಳಗಳು ಇನ್ನೊಬ್ಬ (ಸದ್ಯದ) ಗೆಳತಿ ಕವಿತಾ ಎಸ್.ಜೀ.ಗೆ ಕಳಿಸುವಾಗ ಈ ಪ್ರಮಾದ ಆಗಿದೆ. ಹೊಸ ಮೊಬೈಲನ್ನು ಉಪಯೋಗಿಸಲು ಬರದೆ ನಡೆದ ಅಚಾತುರ್ಯಗಳಲ್ಲಿ ಇದೊ ಒಂದು. ಇದರ ಪರಿಣಾಮಗಳು ಈಗ ಅಪ್ರಸ್ತುತ ಸುಮಾರು ದಿನಗಳು ನಿದ್ದೆ ಕೆಡಿಸಿದಂತೂ ನಿಜ.

ಹೊಸ ಫೋನ್ ಬಂದ ತಕ್ಷಣ ಆದ ಪ್ರಮಾದಗಳಲ್ಲಿ ಮುಖ್ಯವಾದುದು ಪಾಸ್‌ವರ್ಡ್ ಹಾಕಿ ಮರೆತಿದ್ದು. ಅದನ್ನು ಅನ್ ಲಾಕ್ ಮಾಡಲಾಗದೆ, ಒಂದು ದಿನ ಪೂರ್ತಿ ಒದ್ದಾಡಿ ಆಮೇಲೆ ಪತಿದೇವರ ಕೈಲಿ ಅಂಗಡಿಗೆ ಕಳಿಸಿದ್ದು. ಅಲ್ಲಿ ಅವನು ಯದ್ವಾತದ್ವಾ ದುಡ್ಡು ಕಿತ್ತು ಎರಡು ಸಲ ಅಲೆಸಿ ಆಮೇಲೆ ಫೋನ್ ಕೊಟ್ಟಿದ್ದು. ಮತ್ತೊಂದು, ಸ್ಕ್ರೀನ್ ಲಾಕ್ ಆಗದೆ ಯಾವ್ಯಾವ ನಂಬರ್‌ಗೋ ಎಷ್ಟೊತ್ತಿಗೋ ಅದೇ ಕಾಲ್ ಮಾಡಿಕೊಂಡಿದ್ದು ನನ್ನ ಸೋದರತ್ತೆ ಮಗಳು ವಾಸಂತಿ ಹೊಸ ಸೀರೆ ಕೊಂಡದ್ದು, ನನಗೆ ಹೇಳದಿದ್ದು ಬಹಳ ಬೇಸರ ತರಿಸಿತ್ತು. ಅದೂ ಅಲ್ಲದೆ ಅವಳು ಆ ವಿಷಯವನ್ನು ನನ್ನ ತಂಗಿಗೆ ತಿಳಿಸಿದ್ದು ಇನ್ನೂ ಅಸಮಾಧಾನವಾಗಿತ್ತು. ಅವಳ ಬಗ್ಗೆ ನನ್ನ ಓರಗಿತ್ತಿಯ ಬಳಿ ಚರ್ಚಿಸುವಾಗ, ಅವಳ ಈ ಗುಟ್ಟು ಮಾಡುವ ಬುದ್ಧಿಯಿಂದ ನನಗಾಗಿರುವ ಮಾನಸಿಕ ವೇದನೆಯ ಬಗ್ಗೆ ವರ್ಣಿಸುವಾಗ ಅವಳೂ ಸಹ ಅದನ್ನು ಆಲಿಸುತ್ತಿದ್ದಾಳೆಂದು ನನಗೆ ಗೊತ್ತಾಗಲೇ ಇಲ್ಲ! ಅದಕ್ಕೆ ಕಾರಣ ಸ್ಕ್ರೀನ್ ಲಾಕ್ ಆಗದೆ ಅವಳ ನಂಬರಿಗೇ ಅದು ಡಯಲ್ ಮಾಡಿಕೊಂಡಿದ್ದು ಯಾವ ಭೂತ ಚೇಷ್ಟೆಯೋ ನಾಕಾಣೆ. ಇನ್ನೂ ಎರಡು ಸೀರೆ, ಒಂದು ಸರ, ಮೂರು ಬಳೆ ಕೊಂಡ ಮೇಲೆಯೇ ಅವಳು ನನ್ನನ್ನು ಮಾತಾಡಿಸಲು ಶುರು ಮಾಡಿದ್ದು ಖರೆ.

ಒಮ್ಮೆ ಗ್ರಂಥಾಲಯದಿಂದ ವಾಪಸ್ಸು ಬರುತ್ತಿದ್ದೆ. ಅಲ್ಲಿ ನಮ್ಮ ಬೀದಿಯ ಸುಬ್ಬಲಕ್ಷ್ಮಿ ಅರ್ಥಾತ್ ರೇಡಿಯೊ ಸುಬ್ಬಮ್ಮ ಸಿಕ್ಕಿದರು. ಅರ್ಥ ಆಯಿತಲ್ಲ. ರೇಡಿಯೊ ಅಂದರೆ ಬಿಟ್ಟಿಯಾಗಿ ಎಲ್ಲರಿಗೂ ಸುದ್ದಿ ಹಂಚುವುದು ಆಕೆಯ ಅತ್ಯಂತ ಪ್ರಿಯವಾದ ವಿಷಯ. ಅವರಿವರ ಮನೆವಾರ್ತೆ ಅವರಿಗೆ ಬಿಸಿಬಿಸಿ ಹೋಳಿಗೆ ತುಪ್ಪದಂತೆ ಮಕ್ಕಳಾದಿಯಾಗಿ ಎಲ್ಲರೂ ಆಕೆಯ ಬಾಯಿಗೆ ಹೆದರುವರೆ! ನನ್ನ ಹೊಸ ಜಾಣ ಫೋನಿನಲ್ಲಿ ಆಕೆಯ ನಂಬರ್ ಹಾಕಿ ಅವರಿಗೆ ಮಿಸ್ಸ್ಡ್ ಕಾಲ್ ಮಾಡಿದ್ದಾಯಿತು. ಮನೆಗೆ ಹೊರಟವಳಿಗೆ ಆಕೆ ಹೇಳಿದ ಮೂಲೆ ಮನೆ ಸದಾನಂದ ರಾಯರ ಅಳಿಯನ ತಂಗಿಯ ಗಂಡನ ಸ್ನೇಹಿತನ ಪತ್ನಿಯ ಆಫೀಸಿನ ಜಗಳದ ಬಗ್ಗೆ ಪಕ್ಕದ ಮನೆ ಶೀಲಾಳ ಬಳಿ ಅರ್ಜೆಂಟ್ ಹೇಳಬೇಕೆನಿಸಿತು. ಯಾಕೆಂದರೆ ಮನೆ ತಲುಪಿದ ಮೇಲೆ ಇಂತಹ ರಸವತ್ತಾದ ವಿಷಯಗಳನ್ನು ಮನೆ ದೇವರ ಎದುರು ಮಾತಾಡಿದರೆ ನನಗೆ ಸಾಂಗೋಪಾಂಗ ಪೂಜೆ ಆಗುವುದರಲ್ಲಿ ಸಂಶಯವೇ ಇಲ್ಲ. ಅವರಿಗೆ ಏನಿದ್ದರೂ ವಾರ್ತಾ ವಾಹಿನಿಗಳ ಅರಚಾಟವೇ ಪ್ರಿಯ. ಹೀಗಾಗಿ ಕಾಲ್ ಮಾಡಿ ಷುರು ಮಾಡಿದೆ. ''ಅದೇ ಕಣೆ, ಆ ಮನೆಹಾಳಿ ಸುಬ್ಬಮ್ಮ, ಎಲ್ಲರ ಮನೆ ಇಣುಕಿ ನೋಡುವ ಕೆಲಸವಿಲ್ಲದಾಕೆ...'' ನಲ್ಲಿ ಬಿಟ್ಟಂತೆ ನಾನು ಮಾತಾಡುತ್ತಲೇ ಇದ್ದೀನಿ, ಇವಳು ಯಾಕೆ ಸುಮ್ಮನಿದ್ದಾಳೆ ಎಂದು ನೋಡಿದರೆ ಆಗಷ್ಟೆ ಡಾಯಲ್ ಮಾಡಿದ ಸುಬ್ಬಲಕ್ಷ್ಮಿಗೆ ಫೋನಾಯಿಸಿದ್ದೆ! ಎದೆ ಬಡಿತ ನಿಂತು ಹೋಗದಿದ್ದು ನನ್ನ ಪುಣ್ಯ! ತಕ್ಷಣ ಕಾಲ್ ಕಟ್ ಮಾಡಿ ಮನೆಯತ್ತ ಬರುತ್ತಿದ್ದ ಹಾಗೆ ನಮ್ಮ ಮನೆಯ ಸುತ್ತ ಮುತ್ತ ಹೆಂಗಸರ ನೋಟದಲ್ಲೇ ಗೊತ್ತಾಯಿತು. ರೇಡಿಯೊ ಚೆನ್ನಾಗಿ ಕೆಲಸ ಮಾಡಿದೆಯೆಂದು! ಮನೆ ತಲುಪಲು ತೆಗೆದುಕೊಂಡ 5 ನಿಮಿಷದ ಒಳಗೆ ನನ್ನ ಬಗ್ಗೆ ಚಾಡಿ ಬಿತ್ತರಿಸಿದ ಆಕೆಯ ಬಾಯಿ ಚಳಕ ನನ್ನಲ್ಲಿ ಛಳುಕು ಹುಟ್ಟಿಸಿತು.

ಯಜಮಾನರ ಬಳಿ ಹೇಳಲು ಧೈರ್ಯ ಸಾಲದೆ ಮಗಳ ಬಳಿ ದುಃಖ ತೋಡಿಕೊಂಡೆ.

''ಅಮ್ಮಾ, ಕಾಲ್ ಮಾಡುವ ಮುನ್ನ ನಂಬರ್ ನೋಡಿಕೊ. ಸ್ಕ್ರೀನ್ ಲಾಕ್ ಮಾಡಿಕೊಂಡೇ ಇರು. ನೋಡು, ದಿನಾ ನನ್ನ ಬಳಿ ಟ್ಯೂಷನ್ ತೊಗೊ, ಇದನ್ನೆಲ್ಲಾ ಉಪಯೋಗಿಸಲು ಬೇಕಾದ್ದು ಜಾಣತನ. ಅಷ್ಟಿಲ್ಲದೆ ಇದನ್ನು ಜಾಣ ದೂರವಾಣಿ ಎನ್ನುತ್ತಾರೆಯೆ?'' ಅವಳ ಪ್ರಶ್ನೆಗೆ ನಾನು ಗಪ್ ಚುಪ್!!

❑

---

## ಮಾಯವಾದ ಬ್ರಹ್ಮ

ಆತ ಉಗ್ರ ತಪಸ್ಸಿಗೆ ಕೂತು ಬಿಟ್ಟ. ಎಷ್ಟೇ ಆದರೂ ಕಲಿಯುಗದವನು ತಾನೆ? ಹಿಡಿದದ್ದೇ ಹಟ. ಇತ್ತ ಬ್ರಹ್ಮ ನಡುಗಿ ಹೋದ. ಭಕ್ತನ ಕರೆಗೆ ಬಾರದೇ ದಾರಿಯೇ ಇಲ್ಲದಾಗ ಪ್ರತ್ಯಕ್ಷನಾಗಿಬಿಟ್ಟ. 'ಭಕ್ತ ಏನು ಬೇಕು?' ಎಂದ. 'ನನಗೆ ಕೈಯಲ್ಲಿ ಮೊಬೈಲ್ ಹಿಡಿದು ಹಿಡಿದು ಅರ್ಧ ಗಂಟೆಯಲ್ಲೇ ನೋವು ಬರುತ್ತಿದೆ. ಏನಿಲ್ಲ ಎಂದರೂ ಕನಿಷ್ಠ 20 ಗಂಟೆ ಸ್ಮಾರ್ಟ್ ಫೋನ್ ಬಳಸುತ್ತೇನೆ. ಕೈನೋವು ತಲೆನೋವು ಬಾಧಿಸದಿರಲಿ ನನ್ನೊಡೆಯ. ಹಾಗೆ ಚಾರ್ಜರ್ ಕೂಡ ದೀರ್ಘ ಕಾಲ ಬರುವಂತಿರಲಿ' ಎಂದ.

ಬ್ರಹ್ಮ ಗಲಿಬಿಲಿಗೊಂಡು ಮಾಯವಾದ.

# ಗೂಗ್ಲಾವತರಣ

**- ಪ್ರಕಾಶ್**

ಇಳಿದು ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ ಇಳಿದು ಬಾ ||

ಲ್ಯಾರಿ ಪೇಜೆಂಬ, ಸರ್ಜಿ ಬ್ರೆನ್ನೆಂಬ
ನಿನ್ನ ಜನಕರಿಗೆ ನಮಿಸಿ ಬಾ
ಜಗದ ಆದ್ಯಂತ ಹರಡು ಬಾ
ಕಾದಿಹೆವು ನಿನಗಾಗಿ ಬಾ ||ಪ||

ತೆರೆಯ ಮರೆಯಿಂದ, ಗೂಗ್ಲ ಮಿದಿಳಿಂದ
ಅರೆ ಕ್ಷಣದಲಿ ತಣಿಸು ಬಾ
ಬಾಹ್ಯಾಕಾಶದಿಂದಿಳಿದು ಬಾ
ವೈ ಫೈ ಸೇತುವೆಯ ದಾಟಿ ಬಾ
ಬಾ ತಾಯಿ ಬಾ ||ಪ||

ನಿನ್ನ ಭಕ್ತರನು ಹರಸು ಬಾ
ಜ್ಞಾನ ದಾಹವನು ತಣಿಸು ಬಾ
ಪೀಸಿ ತೆರೆಯನ್ನು ತುಂಬು ಬಾ
ಬಾ ತಾಯಿ ಬಾ ||ಪ||

ಅಂತರಿಕ್ಷದಿಂದಿಳಿದು ಬಾ
ಸೋಲಾರ್ ಪ್ಯಾನೆಲನು ನುಸುಳಿ ಬಾ
ಮನೆ ಮನೆಗು ಬಾ, ಮನಮನಕು ಬಾ
ಬಾ ತಾಯಿ ಬಾ ||ಪ||

ಸರ್ವರಿನ ಗರ್ಭದಿಂ ಹೊರಗೆ ಬಾ
ಸರ್ವರಿಗು ಎಂಬಿಗಳ ಹಂಚು ಬಾ
ಕೋಟಿ ಶಿಷ್ಯರಿಗೆ ಮುದವ ತಾ
ಬಾ ತಾಯಿ ಬಾ ||ಪ||

ಜಗದ ವಿಖ್ಯಾತೆ ಗೂಗಲ್ ಮಾತೆ
ಇಲ್ಲಿಲ್ಲಿ ಅಲ್ಲಲ್ಲಿ ನಿನ್ನ ಮಾತೆ
ಏಳಿಗೆಯ ಮಂತ್ರವನೆ ಜಪಿಸುತ್ತ ಬಾ
ಹರಡು ಬಾ ತಾಯಿ ಇಳಿದು ಬಾ ||ಪ||

❑

# ಆಪ್ಸೇ ಜೀವನ, ಕಾರ್ಡೇ ಸಂಗಾತಿ

**- ಇ.ಆರ್. ರಾಮಚಂದ್ರನ್**

**ಮ**ಹಾತ್ಮ ಗಾಂಧಿಯವರು ಎಲ್ಲರಿಗೂ ಚರಕ ಉಪಯೋಗಿಸಿ ಎಂದು ಪ್ರೋತ್ಸಾಹಿಸಿದರೆ, ಅದೇ ಗುಜರಾತಿನಿಂದ ಬಂದ ಮೋದಿ ಕಾರ್ಡನ್ನೇ ಬಳಕೆ ಮಾಡಿ ಎಂಬ ಕಹಳೆಯನ್ನು ಪ್ರತಿ ದಿನ ಹಗಲು ರಾತ್ರಿ ಬಿಡದೆ ಎಲ್ಲಿದ್ದಾರೋ ಅಲ್ಲಿಂದಲೇ ಊದುತ್ತಿದ್ದಾರೆ.

**ಎಲೆಕ್ಟ್ರಾನಿಕ್ ಅಜ್ಜಿಯ ಡಿಜಿಟಲ್ ವರದಿ ಇಲ್ಲಿದೆ....**

ನಮ್ಮ ಮನೆಗೂ ಅದರ ಗಾಳಿ ತಟ್ಟಿದೆ. ಅಜ್ಜಿ ಮತ್ತು ಅವರ ಗ್ಯಾಂಗ್ ಇದರಲ್ಲಿ ತರಬೇತಿ ಪಡೆದು ಪ್ರವೀಣರಾಗಿ, ಕೆಲವುಸಲ ಅವರು ಹ್ಯಾಕರ್ಸ್ ಆಗಿಬಿಟ್ಟಿದ್ದಾರೋ ಎಂದು ಭಯವಾಗುತ್ತಿದೆ. ದಿನ ಬೆಳಗಾದರೆ, ವಿಷ್ಣು ಸಹಸ್ರನಾಮ, ಲಲಿತಾ ಸಹಸ್ರನಾಮ, ಹನುಮಾನ್ ಚಾಲೀಸ, ಏಕಾದಶಿ ಅಂತ ದೇವಸ್ಥಾನಗಳಿಗೆ ಓಡಾಡುತ್ತಿದ್ದವರು, ಈಗ ಏಕಾಏಕಿ ದಿನಾ ಬ್ಯಾಂಕು, ಏಟಿಯಮ್ ಮತ್ತು ಸಾಫ್ಟ್‌ವೇರ್ ಇಂಜಿನಿಯರ್ಸ್ ಅವರ ಜೊತೆ ಮೀಟಿಂಗ್ ಮಾಡ್ತಿದಾರೆ. ಅಜ್ಜಿ ಕೈಗೆ ಸಿಗುವುದೇ ಕಷ್ಟವಾಗಿದೆ, ಅಗೋ ಬಂದ್ರು ಅಜ್ಜಿ....

ಅಜ್ಜಿ! ನಿನ್ನ ಮನೆಯಲ್ಲಿ ನೋಡೋದೇ ಅಪರೂಪ, ಕಾಲಿಗೆ ರೆಕ್ಕೆ ಹಾಕಿಕೊಂಡು ಹಾರ್‍ತಿರ್‍ತೀಯ! ಕೈಗೇ ಸಿಗಲ್ಲ, ಯಾವಾಗ್ಲೂ ಬ್ಯುಸಿ.

ಅಜ್ಜಿ ತನ್ನ ವ್ಯಾನಿಟಿ ಬ್ಯಾಗಲ್ಲಿರುವ ಲ್ಯಾಪ್ ಟಾಪ್ ಮತ್ತು ಮೊಬೈಲ್ ಫೋನನ್ನು ಸೋಫಾ ಮೇಲೆ ಎಸೆದು ಉಸ್ಸಪ್ಪಾ.. ಎಂದು ಕುಸಿದರು.

ಆ ತರಹ ಏನಿಲ್ಲ ಕಣೊ... ಬಾಣಸ್ವಾಡಿ ವೆಂಕಟಾಚಲಪತಿ ದೇವಸ್ಥಾನದಿಂದ ಬರ್‍ತಿದೀವಿ.. ಏನು ಜನಜಂಗುಳಿಯಪ್ಪಾ.... ರಾಮ ರಾಮ..

ನೀನು ವಾಟ್ಸಪ್ಪು, ಪೇಟಿಯಮ್ ಅಂತ ಓಡಾಡ್ತಿದ್ದೋಳು ಮತ್ತೆ ದೇವಸ್ಥಾನಕ್ಕೆ ಹೇಗೆ ಬಂದೆ ಅಜ್ಜಿ?

ನಮ್ಮ ಹಾರ್ಡ್ವೇರ್ ಹರಿಣಿ ಹರಕೆ ಹೊತ್ಕೊಂಡಿದ್ರು. ಕ್ಷೀರ, ಮೊಸರು, ತುಪ್ಪದಿಂದ ಅಭಿಷೇಕ ಮಾಡಬೇಕೂಂತ... ಅದಕ್ಕೆ ನಾವೇ ಒಂದು ಆಪ್ ರೆಡಿಮಾಡಿದ್ವಿ. ಅಲ್ಲಿಯ ಪ್ರಧಾನ ಅರ್ಚಕರು ಹರಿಣಿಯ ಮಗನ ಜೊತೆ ಸೇರಿ 'ಎಲೆಕ್ಟ್ರಾನಿಕ್ ಅಭಿಷೇಕ' ಯಂತ್ರ ಮಾಡಿದ್ದಾರೆ. ಅದನ್ನು ನೋಡುವುದಕ್ಕೆ ಎರಡು ಕಣ್ಣು ಸಾಲದು ಕಣೋ!

ಹರಿಣಿ ಗಂಡ ಹಾರ್ಡ್‌ವೇರ್ ಅಂದ್ರೆ, ಬಿವಿಕೆ ಐಯ್ಯಂಗಾರ್ ರೋಡಿನ ಅಂಗಡೀನಲ್ಲಿ ಕೊಳಾಯಿ, ಪೈಪು, ನಲ್ಲಿ ಮಾರೋವ್ರಲ್ಲವಾ?

ಹೌದೊ! ಅವರ ಮಗ ಎಲೆಕ್ಟ್ರಾನಿಕ್ ಸಿಟಿನಲ್ಲಿ ಕಂಪ್ಯೂಟರ್ ಹಾರ್ಡ್‌ವೇರ್ ಶಾಪ್ ತೆಗೆದಿದ್ದಾನೆ! ಈಗ ಅಭಿಷೇಕ ಮಾಡೋದಕ್ಕೆ ಎಲೆಕ್ಟ್ರಾನಿಕ್ ಮಶೀನ್ ಕಂಡು ಹಿಡಿದಿದ್ದಾನೆ.

ಎಲೆಕ್ಟ್ರಾನಿಕ್ ಅಭಿಷೇಕನಾ? ಅಜ್ಜಿ ಯುವರ್ ಗ್ರೂಪ್ ಇಸ್ ಗ್ರೇಟ್ ಐ ಸೇ! ಏನದು?

ದೇವರ ಮೇಲೆ ಕ್ಷೀರ, ಬೆಣ್ಣೆ, ತುಪ್ಪ, ಜೇನುತುಪ್ಪ, ಕುಂಕುಮ ಇತ್ಯಾದಿ ಫೈಬರ್‌ಗ್ಲಾಸ್ ಜಾಡಿಗಳಲ್ಲಿ ತುಂಬಿಸಿ ಎಲೆಕ್ಟ್ರಾನಿಕ್ ಸರ್ಕೀಟ್‌ಗೆ ಸೇರಿಸಿ ಇಟ್ಟಿರ್‍ತಾರೆ. ನಾವು ಯಾವುದರಲ್ಲಿ ಅಭಿಷೇಕ ಮಾಡಬೇಕೂಂತ ಮುಂಚೆಯೇ ತಿಳಿಸಿದರೆ, ಅದನ್ನು ಪ್ರೋಗ್ರಾಮ್ ಮಾಡಿಡುತ್ತಾರೆ ಅರ್ಚಕರು. ಹರಿಣಿ ಇವತ್ತು ವೆಂಕಟರಮಣ ಸ್ವಾಮಿಗೆ ಕ್ಷೀರ, ಮೊಸರು ಮತ್ತು ತುಪ್ಪದಲ್ಲಿ ಅಭಿಷೇಕ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿದ್ರು... ನಾವು ಅಲ್ಲಿಗೆ ನಿಯಮಿತ ಸಮಯಕ್ಕೆ ಹೋದಾಗ, ಅವರ ಮೊಬೈಲ್ ಆಪ್‌ಗಳಿಂದ ಒಂದೊಂದಾಗಿ ಅವುಗಳ ಚಿತ್ರದ ಬಟನ್ ಒತ್ತಿದರು. ದೇವ್ರಿಗೆ ಹಾಲು, ಮೊಸರು ಮತ್ತು ತುಪ್ಪದ ಅಭಿಷೇಕವಾಯಿತು. ಜೊತೆಗೆ ಕೊನೆಗೆ ಬಿಲ್ ಕೂಡ ಬಂತು. ಹರಿಣಿ ತನ್ನ ಮೊಬೈಲಿನಿಂದಲೇ ಪೇಟಿಯಂ ಮೂಲಕ ಹಣ ಪಾವತಿ ಮಾಡಿದ್ರು. ಹತ್ತು ನಿಮಿಷದಲ್ಲಿ ಎಲ್ಲಾ ಮುಗಿದುಹೋಯ್ತು. ಅವರ ಮಗನೇ ಮಾಡಿದ್ದ ಹೊಸ ಹಾರ್ಡ್ವೇರ್ ಹ್ಯಾಗಿದಿಯೆಂದು ನೋಡಲು ಹೋಗಿದ್ವಿ.

ಅಜ್ಜಿ! ಟೆಕ್ನಿಕಲೀ ನೀನು ಮತ್ತು ನಿನ್ನ ಗ್ಯಾಂಗ್ ಮುಂದಿನ ಶತಮಾನಕ್ಕೆ ಕಾಲಿಟ್ಟಿದೀರ!

ಅಷ್ಟೇ ಅಲ್ವೋ ಪೆದ್ದೆ! ಅರ್ಚಕರು ದೂರ ನಿಂತು ಮಹಾ ಮಂಗಳಾರತಿ ಮಾಡುತ್ತಾ ಅವರ ಫೋನ್ ಒತ್ತಿದಾಗ ನಮ್ಮೆಲ್ಲರ ಸ್ಮಾರ್ಟ್ ಫೋನಲ್ಲಿ ಮಂಗಳಾರತಿ ಮಾಡುವ ಚಿತ್ರ, ಆರತಿ ಹಾಡು ಎರಡೂ ಬಂತು. ನಾವು ನಿಂತಲ್ಲೇ ಅದನ್ನು ಮುಟ್ಟಿ ಕಣ್ಣಿಗೆ ಒತ್ಕೊಂಡ್ವಿ! ಅಲ್ಲಿ ಹೋಗಿದ್ದಕ್ಕೆ ಸಕ್ಕರೆ ಪೊಂಗಲ್ ತಂದಿದೀನಿ.

ನನಗೆ ತಂದಿದೀಯಾ?

ನಮ್ಮ ಮನೆ ಬಕಾಸುರನನ್ನು ಯಾವತ್ತಾದರೂ ನಾನು ಮರೀತೀನಾ?! ಮುಂಚೆ ಕೈ ತೊಳಕೊ, ಆಮೇಲೆ ನಿಧಾನವಾಗಿ ಪೊಂಗಲ್ ಮುಕ್ಕುವಂತೆ!

ಅದರ ಮುಂದಿನವಾರ ಅಜ್ಜಿಯ ಗ್ಯಾಂಗಿನ ಒಬ್ಬರ ಮೊಮ್ಮಗ ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದವನ ಮದುವೆಗೆ ನನ್ನೂ ಕರೆದುಕೊಂಡು ಹೋಗಿದ್ದರು. ಹುಡುಗನ ಆಫೀಸಿನವರೇ ಮದುವೆ ಎಲ್ಲಾ ಆಯೋಜಿಸಿದ್ದರು.

ಅಜ್ಜಿಯ ಫ್ರೆಂಡ್, ಸಾಫ್ಟ್‌ವೇರ್ ಸೀತಮ್ಮ – ಅಂದ್ರೆ, ಅವರ ಮೊಮ್ಮಕ್ಕಳಿಬ್ಬರೂ ಸಾಫ್ಟ್‌ವೇರ್ ಹೆಣ್ಣು ಹುಲಿಗಳು – ಅದಕ್ಕೆ ಸೀತಮ್ಮನಿಗೆ ಆ ಅಡ್ಡ ಹೆಸರು. ಆ ಹುಡುಗಿಯರದೇ ಮದುವೆ ಏರ್ಪಾಡೆಲ್ಲ!

ನಾವು ಛತ್ರಕ್ಕೆ ಹೊದಾಗ ನನ್ನ ಮೊಬೈಲು ಒಂದೇ ಸಮನೆ ಕುಯ್ಗುಟ್ಟಲಾರಂಭಿಸಿತು.

ಮೊದಲ ಸಲ ಅದು ಕುಯ್‌ಗುಟ್ಟಿದಾಗ, ಮೊಬೈಲ್ ನೋಡಿದೆ. ಬಫೆ ಊಟದ ಮೆನು ಬಂದಿತ್ತು ಚಿತ್ರದ ಸಮೇತ. ಆಲು ಪರಾಟ, ಪಾಲಕ್ ಪನೀರ್, ಬಿರಿಯಾನಿ, ರಾಯತ, ಸಂಡಿಗೆ, ಬೂಂದಿ ಲಾಡು, ಮೈಸೂರ್ ಪಾಕ್, ಬೀಡ. ಮುಂದಿನ ಪುಟದಲ್ಲಿ ಅಲ್ಲಿ ಸಿಕ್ಕುವ ತಿಂಡಿ ಚಿತ್ರದ ಸಮೇತ ಬಂದಿತ್ತು; ಮಸಾಲ್ ದೋಸೆ, ಸೆಟ್ ದೋಸೆ, ಪಾನಿ ಪೂರಿ, ಗೋಬಿ ಮಂಚೂರಿಯನ್, ಕ್ಯಾರೆಟ್ ಹಲ್ವ, ಬಾದಾಮಿ ಬರ್ಫಿ, ಐಸ್ಕ್ರೀಮ್.

ಯಾರ ಕೈಲೂ ಪ್ರೆಸೆಂಟೇಷನ್ ಇರಲಿಲ್ಲ. ಎಲ್ಲಾ ಕೈ ಬೀಸಿಕೊಂಡು ಬಂದಿದ್ದಾರೆ ಅಂತ ಅನ್ನಿಸ್ತು. ಇಂತಹ ಊಟ ಕೊಡುವಾಗ ಯಾಕೆ ಯಾರೂ ಪ್ರೆಸೆಂಟ್ ಮಾಡ್ತಿಲ್ಲ ಅಂತ ಅಜ್ಜಿಯ ಹತ್ರ ಪಿಸುಗುಟ್ಟಿದೆ. 'ಬಾಯ್ಮುಚ್ಚಿಕೊಂಡು ಸುತ್ತಮುತ್ತ ಏನಾಗ್ತಿದೆ ನೋಡು' ಅಂದ್ರು. ಅಜ್ಜಿ ತನ್ನ ಮೊಬೈಲ್‌ನಲ್ಲಿ ಏನೋ ಒತ್ತಿದರು. ಅಲ್ಲಿ ಹುಡುಗ, ಹುಡುಗಿ ಕೂತಿದ್ದ ಕಡೆ ಎರಡು ಬದಿಯಲ್ಲೂ ಅವರ ಕಡೆಯವರು ಅವರವರ ಮೊಬೈಲು ಕುಯ್‌ಗುಟ್ಟಿದಾಗ ತೆಗೆದು ನೋಡಿ ಖುಶಿ ಪಡ್ತಿದ್ರು. ಎಲ್ಲರೂ ಪೇಟಿಯಂ ಮೂಲಕ ದುಡ್ಡು ವಧು ವರರಿಗೆ ರವಾನಿಸುತ್ತಿದ್ದರು. ದುಡ್ಡಿನ ರಾಶಿ ಮೊಬೈಲಿನಲ್ಲಿ ಸೇರುತ್ತಿತ್ತು. ಅವರು ಅಲ್ಲಿಂದ ಬ್ಯಾಂಕಿಗೆ ಸೀದ ರವಾನಿಸುತ್ತಿದ್ದರು.

ಮಹೂರ್ತಕ್ಕೆ ಮುಂಚೆ ಎಲ್ಲಾ ಅತಿಥಿಗಳು, ಪ್ರತ್ಯಕ್ಷ ಹಾಗೂ, ಎಲೆಕ್ಟ್ರಾನಿಕ್ ಮಾಧ್ಯಮದಿಂದ ಪರೋಕ್ಷವಾಗಿ, ಅಲ್ಲಿ ಸೇರಿದ್ದರು. ಪ್ರಧಾನಿ ಮೋದಿಯವರು ಕೊರಿಯಾ ಏರ್ಪೋರ್ಟಿನಿಂದ ಸಿಂಗಪುರಕ್ಕೆ ಹೊರಡುವ ಮುಂಚೆ ವಧು ವರರಿಬ್ಬರಿಗೂ ಸಟಿಲೈಟು ಮೂಲಕ ಅಭಿನಂದನೆಯನ್ನು ಸಲ್ಲಿಸಿದರು. ಇನ್ನಿಷ್ಟು ಹುಡುಗರು, ನೋಡಲು ಒಂದೇ ತರಹ – ಅಂದ್ರೆ ಮುಖ ಮುಚ್ಚುವ ಗಡ್ಡ ಮತ್ತು ಕಪ್ಪು ಕನ್ನಡಕ ಹಾಕಿಕೊಂಡು ಕೈ ಬೀಸಿ ದಂಪತಿಗೆ ಶುಭವನ್ನು ಕೋರಿ ಹಾಗೂ ಫ್ಲೈಯಿಂಗ್ ಕಿಸ್ ಕಳಿಸಿದರು. ಅದೆಲ್ಲಾ ದೊಡ್ಡ ಸ್ಕ್ರೀನಿನಲ್ಲಿ ಬಂತು. ಅವರೇ ಭಾರತದ ಕ್ರಿಕೆಟ್ ಟೀಮಿನ ಆಟಗಾರರು ಎಂದು ಸೀತಮ್ಮನ ಮೊಮ್ಮಗಳು ತೋರಿಸಿದಳು. ಮತ್ತೊಬ್ಬ ರಾಜಕಾರಿಣಿ ಅವರಿದ್ದ ಗೋಪ್ಯ ರಿಸಾರ್ಟನಿಂದಲೇ ಅಭಿನಂದನೆ ಕಳಿಸಿದರು, ಆತನ ಫೋಟೊ ಸ್ಕ್ರೀನಿನ ಮೇಲೆ ಬರಲಿಲ್ಲ!

ಮದುವೆ ಮಹೂರ್ತದ ವೇಳೆಗೆ ಎಲ್ಲರೂ ಅವರವರ ಮೊಬೈಲ್ ಒತ್ತಿದಾಗ ದೊಡ್ಡ ಟೆಲಿವಿಷನ್ ಸ್ಕ್ರೀನಿನಲ್ಲಿ ವಧು ವರನ ಮೇಲೆ ಅಕ್ಷತೆ ಕಾಳು ಬಿತ್ತು. ಅವರಿಬ್ಬರ ಫೋಟೊ ಎಲ್ಲರ ಮೊಬೈಲಿಗೂ ಬಂದು ಸೇರಿತು. ನಾವೂ ಬಟನ್ ಒತ್ತಿ ಅವರಿಬ್ಬರಿಗೂ ಮಲ್ಲಿಗೆ, ಗುಲಾಬಿ, ಮೈಸೂರಿನ ಶ್ರೀಗಂಧ ಹೀಗೆ ವಿವಿಧ ಚಿತ್ರದ ಹೂವಿನ ಮಾಲಾರ್ಪಣೆ ಮಾಡಿದೆವು!

ಊಟ ಮುಗಿಸಿಕೊಂಡು ಮನೆಗೆ ಬರುವ ವೇಳೆಗೆ ಅಜ್ಜಿಗೆ ಅಡಿಕೆ ಬೇಕಾಗಿತ್ತು. ಊಟವಾದ ಮೇಲೆ ಬಾಯಿಗೆ ಅಡಿಕೆ ಬೀಳದಿದ್ದರೆ ನಮಗೆಲ್ಲಾ ಬೆಳಿಗ್ಗೆ ಕಾಫಿ ಇಲ್ಲದಿದ್ದರೆ ಹೇಗೋ ಹಾಗೆ ಆಗುತ್ತಿತ್ತು ಅಜ್ಜಿಗೆ. ಹಾಳಾದ್ದು ಅಡಿಕೆ ತೊಗೋಳ್ಳೋದು ಮರ್ತು ಹೋಯಿತು ಮನೆಯಲ್ಲೂ ಇಲ್ಲ ಅಂತ ಗೊಣಗುಟ್ಟಿದರು. ಕೈಲೂ ದುಡ್ಡು ತಂದಿಲ್ಲ ಅಂತ ಗೋಳಾಡಿದರು. ಮನೆಯ ಹತ್ರ ನಾನು ಆಟೋದಿಂದ ಇಳಿದು ಮೂಲೆ ಶೆಟ್ರ ಅಂಗಡಿಯಿಂದ ಒಂದು ರೂಪಾಯಿಗೆ ಅಡಿಕೆ ಹೋಳುಗಳನ್ನು ಕೊಂಡು ಅಜ್ಜಿಯ ಮುಂದಿಟ್ಟೆ. ಬಾಯಲ್ಲಿ ಹೋಳು ಬಿದ್ದಿದ್ದೇ ಎಲೆಕ್ಟ್ರಾನಿಕ್ ಅಜ್ಜಿ ಒಂದೇ ನಿಮಿಷಕ್ಕೆ ನಾರ್ಮಲ್ ಅಜ್ಜಿಯಾಗಿ ಅವರ ಕೃತಜ್ಞತೆಯನ್ನು ತಮ್ಮ ಕಣ್ಣಿನಿಂದ ತೋರಿಸಿದರು.

❑

# ಲಂಕೆಯ ಲಿಂಕ್

**- ವೈ.ವಿ. ಗುಂಡೂರಾವ್**

ಅರ್ಧ ತುಂಬಿದ ಲೋಟದ ಪ್ರಯೋಗ ಗೊತ್ತು ತಾನೆ? ಅರ್ಧ ತುಂಬಿದ ಲೋಟ ನಿಮ್ಮ ಮುಂದೆ ಇಟ್ಟರೆ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ? ಅರ್ಧ ಖಾಲಿ ಎನ್ನುತ್ತೀರ ಅಥವಾ ಅರ್ಧ ತುಂಬಿದೆ ಎನ್ನುತ್ತೀರ? ಹೌದೆ? ಅಂದರೆ ನಮ್ಮ ಮನೋಭಾವದಲ್ಲಿ ಎರಡು ರೀತಿ. ಒಂದು ಸಕಾರಾತ್ಮಕ, ಇನ್ನೊಂದು ನಕಾರಾತ್ಮಕ. ಅರ್ಧ ತುಂಬಿದೆ ಎಂದರೆ ಸಕಾರಾತ್ಮಕ ಅರ್ಧ ಖಾಲಿ ಎಂದರೆ ನಕಾರಾತ್ಮಕ.

ಅಷ್ಟೇನೆ? ಮೂರನೆಯ ಪ್ರತಿಕ್ರಿಯೆ ಇಲ್ಲವೆ?

ಮೊನ್ನೆ ನಾನು ನಡೆಸುವ ತರಗತಿಯೊಂದರಲ್ಲಿ ಇದೇ ಪ್ರಯೋಗ ಮಾಡಿದೆ. ತೂಕಡಿಸುತ್ತಿದ್ದ ಹುಡುಗನನ್ನು ಎಬ್ಬಿಸಿ ನಿನ್ನ ಮುಂದೆ ಅರ್ಧ ತುಂಬಿದ ಗ್ಲಾಸ್ ತಂದಿಟ್ಟರೆ, ಅದರಲ್ಲಿ ಅರ್ಧ ನೀರಿದೆ ಅಂತ ಸಮಾಧಾನ ಅನ್ನಿಸುತ್ತೋ, ಇಲ್ಲ ಅರ್ಧ ಖಾಲಿ ಇದೆ ಅಂತ ಬೇಜಾರಾಗುತ್ತೋ? ಎಂದು ಕೇಳಿದೆ.

ಅವನೇನಂದ ಊಹಿಸಿ!

**ರಾವಣ ಮತ್ತು ಕುಂಭಕರ್ಣ ಇವರಿಬ್ಬರಲ್ಲಿ ಯಾರು ಉತ್ತಮ?**

ನಾನು ಕೇಳದೆ ಇದ್ದರೂ ನನ್ನ ಮುಂದೆ ಯಾಕೆ ತಂದಿಟ್ಟರು ಅಂತ ಸಿಟ್ಟು ಬರುತ್ತೆ ಸಾರ್ ಅಂದುಬಿಡೋದೇ!!

ಈಗ, ಏನಂತೀರಾ ನೀವು? ಇದು ಸಕಾರಾತ್ಮಕ ಧೋರಣೇನೋ, ಇಲ್ಲ ನಕಾರಾತ್ಮಕಾನೋ? ಸಕಾರಾತ್ಮಕ ಅನ್ನೋಣ ಅಂದರೆ, ಅವನು ನೀರಿನ ಕುರಿತು ಒಳ್ಳೆ ಮಾತಾಡಲಿಲ್ಲ. ನಕಾರಾತ್ಮಕ ಅನ್ನೋಣ ಅಂದರೆ, ಅವನು ನೀರನ್ನು ಕುರಿತು ಕಂಪ್ಲೇಂಟ್ ಮಾಡಲಿಲ್ಲ. ಇದು ಯಾವ ಆತ್ಮಕ? ಅದುವರೆಗೂ ಎರಡೇ ಧೋರಣೆ ಅಂದುಕೊಂಡಿದ್ದ ನನಗೆ ಆಘಾತವಾಯಿತು. ಧೋರಣೆಗಳು ಎರಡಲ್ಲ, ಮೂರಿವೆ - ಸಕಾರಾತ್ಮಕ, ನಕಾರಾತ್ಮಕ ಮತ್ತು ತಟಸ್ಥ ಅಥವಾ ವಿಕಾರಾತ್ಮಕ ಅನ್ನಬಹುದಾ? ಅಂದರೆ ವಿಥೌಟ್ ಸಕಾರ ಮತ್ತು ನಕಾರ.

ಈಗ ಸ್ವಲ್ಪ ವಿಷಯಾಂತರ ಮಾಡೋಣ.

ರಾಮಾಯಣ ನಿಮಗೆಲ್ಲಾ ಚೆನ್ನಾಗಿ ಗೊತ್ತು. ಅದರಲ್ಲಿ ಮೂವರು ಸೋದರರು - ವಿಭೀಷಣ, ರಾವಣ, ಕುಂಭಕರ್ಣ - ಮೂರು ರೀತಿಯ ಮನೋಭಾವವನ್ನು ಪ್ರತಿನಿಧಿಸುವವರು. ವಿಭೀಷಣ - ಸಕಾರಾತ್ಮಕ, ರಾವಣ - ನಕಾರಾತ್ಮಕ (ಕೆಲವರು, ಇಲ್ಲ, ರಾವಣನೇ ಸಕಾರಾತ್ಮಕ ಎನ್ನುವ ರಾವಣನ ಭಕ್ತರೂ ಇದ್ದಾರೆ, ಅದು ಬೇರೆ ವಿಷಯ.) ಮತ್ತು ಕುಂಭಕರ್ಣ - ತಟಸ್ಥ.

ರಾವಣ ಮತ್ತು ಕುಂಭಕರ್ಣ ಇವರಿಬ್ಬರಲ್ಲಿ ಯಾರು ಉತ್ತಮ?

ರಾವಣನಾ? ಯಾಕೆ? ಓ! ಏನೂ ಮಾಡದೆ ನಿದ್ದೆ ಮಾಡ್ತಾ ಇರೋದಕ್ಕಿಂತ ಏನಾದರೂ ಮಾಡ್ತಾ ಇರೋದು ಉತ್ತಮ ಅಂತೀರಾ? ರಾವಣನ ಕಲ್ಯಾಣ ಗುಣಗಳನ್ನ ಒಮ್ಮೆ ನೆನಪು ಮಾಡಿಕೊಳ್ಳಿ. ಆ (ದುರ್)ಗುಣಗಳನ್ನ ಪಟ್ಟಿ ಮಾಡ್ಲೋದಕ್ಕೆ ಇನ್ನೊಂದು ಲೇಖನ ಬರೀಬೇಕಾಗತ್ತೆ. ಸದ್ಯಕ್ಕೆ ಇಷ್ಟು ಸಾಕು. ಜಗತ್ತೆಲ್ಲಾ ಒಪ್ಪಿರೋ ಹಾಗೆ ರಾವಣ ನಕಾರಾತ್ಮಕ ಮತ್ತು ಅಪಾಯಕಾರಿ. ಸರಿ.

ನೆಕ್ಸ್ಟ್... ಕುಂಭಕರ್ಣ ಪರವಾಗಿಲ್ಲ ಅಂತೀರಾ? ಯಾಕೆ? ಏನಾದರೂ ಕೆಟ್ಟದ್ದನ್ನ ಮಾಡ್ತಾ ಇರೋದಕ್ಕಿಂತ ಸುಮ್ಮನೆ ನಿದ್ದೆ ಮಾಡ್ತಾ ಇರೋದೇ ಉತ್ತಮ, ಅಂತೀರಾ? ಆದರೆ ಅವನು ಸದಾ ನಿದ್ದೆ ಮಾಡ್ಲೋನಲ್ಲ –ಆರು ತಿಂಗಳು ನಿದ್ದೆ, ಆರು ತಿಂಗಳು ಎಚ್ಚರ. ಅವನು ನಿದ್ದೆಯಲ್ಲಿದ್ದಾಗ, ನಿರಪಾಯಕಾರಿ. ಆದರೆ ನಿದ್ದೆಯಿಂದ ಎದ್ದ ಮೇಲೆ ಅವನು ಯಾರ ಸಹವಾಸ ಜಾಸ್ತಿ ಮಾಡ್ತಾ ಇದ್ದ, ಯಾರ ಬಗ್ಗೆ ಅವನಿಗೆ ಹೆಚ್ಚು ಒಲವಿತ್ತು? ರಾವಣ ತಾನೇ ಅವನಿಗೆ ಹತ್ತಿರದವ. ಈಗ ಹೇಳಿ. ನಕಾರಾತ್ಮಕರ ಸಹವಾಸ ಮಾಡುವವ ಹೇಗೆ ಉತ್ತಮ ಆಗ್ತಾನೆ? ಹೇಗೆ ಪರವಾಗಿಲ್ಲ ಅನ್ನಿಸಿಕೊಳ್ತಾನೆ. ತಟಸ್ಥ ಅಂದರೆ ಮಲಗಿರುವ ನಕಾರಾತ್ಮಕ ಮನೋಭಾವ ಅಂತ... ಸಕಾರಾತ್ಮಕ ಮನೋಭಾವಾನೂ ಆಗಬಹುದು. ಯಾವ ವಾತಾವರಣದಲ್ಲಿ ಅಂಥವರಿರುತ್ತಾರೋ, ಯಾರ ಪ್ರಭಾವ ಅವರ ಮೇಲಿರುತ್ತದೋ ಆ ಗುಣ, ಆ ಸ್ವಭಾವ ಹೊರಬರುತ್ತದೆ. ಒಳ್ಳಿದರ ಒಡನಿರ್ದು ಕಳ್ಳ ಒಳ್ಳಿದನಕ್ಕು, ಒಳ್ಳಿದನು ಕಳ್ಳನೊಡಗೂಡೆ, ಅವ ಶುದ್ಧ ಕಳ್ಳನೇ ಅಕ್ಕು ಸರ್ವಜ್ಞ!

ಕುಂಭಕರ್ಣನಿಗೆ ರಾವಣನ ಪ್ರಭಾವ ಹೆಚ್ಚಿತ್ತು, ವಿಭೀಷಣನಿಗಿಂತ.

ಆ ಮೂವರು ಸತ್ತಿಲ್ಲ. ನಮ್ಮ ನಿಮ್ಮಲ್ಲೇ ಬೇರೂರಿದ್ದಾರೆ. ನಮ್ಮ ನಿಮ್ಮ ಸ್ವಭಾವಗಳೇ ಆಗಿದ್ದಾರೆ. ಆ ಮೂರೂ ಗುಣಗಳು ನಮ್ಮ ನಿಮ್ಮಲ್ಲೇ ಅಡಗಿವೆ. ನಮ್ಮ ಮುಂದೆ ಇರುವ ಸವಾಲು ಇದೇ. ಸಕಾರಾತ್ಮಕ ಗುಣಗಳನ್ನು ಹೊರತೆಗೆಯಬೇಕು. ಹೇಗೆ? ಅದಕ್ಕೆ ರಾಮನಿಗೆ ಶರಣು ಹೋಗಬೇಕು. ರಾಮ ಅನ್ನುವುದು ಸಾಂಕೇತಿಕ. ವಿವೇಕ, ವಿವೇಚನೆ, ವಿಶ್ಲೇಷಣೆಯಿಂದ ನಮ್ಮ ನಮ್ಮ ಸ್ವಭಾವವನ್ನು ಪರೀಕ್ಷಿಸಿಕೊಳ್ಳಬೇಕು. ಅದೇ ರಾಮ. ಅದರಿಂದಾನೇ ನಮಗೆ ಆ..ರಾ..ಮ. ಅದಕ್ಕೆ ಸಹಾಯವಾಗವುದು ನಮ್ಮ ಮನಸ್ಸು... ಪ್ರಶಾಂತ ಮನಸ್ಸು... ಮನಸ್ಸಿನ ಮೂಲಕ ಅದನ್ನು ಸಾಧಿಸಬೇಕು. ಅದನ್ನು ಪ್ರತಿನಿಧಿಸುವವನೇ ಮಾರುತಿ... ಇದೆಲ್ಲಾ ಸಾಂಕೇತಿಕ...ಅದಕ್ಕೆ ಒಂದು ಮೂರ್ತರೂಪ ಕೊಟ್ಟು, ರೂಪಕದ ರೀತಿಯಲ್ಲಿ ತಿಳಿಸಿ ಹೇಳಿದರು ನಮ್ಮ ಹಿಂದಿನವರು, ಹಿರಿಯರು. ಅದನ್ನು ಧರ್ಮ, ಜಾತಿ, ಭಾಷೆಯಲ್ಲಿ ಸೀಮಿತಗೊಳಿಸಿ, ನಿರಾಕರಿಸುವುದೇ ನಕಾರಾತ್ಮಕ ಧೋರಣೆ. ಅದರ ಬಗ್ಗೆ ತಲೇನೇ ಕೆಡೆಸಿಕೊಳ್ಳದೆ ಇರುವುದೇ ತಟಸ್ಥ ಧೋರಣೆ. ಸರಿಯಾಗಿ ವಿಚಾರ ಮಾಡಿ, ಸ್ವಭಾವವನ್ನು ಬದಲಾಯಿಸಿಕೊಳ್ಳುವುದೇ ಸಕಾರಾತ್ಮಕ ಧೋರಣೆ. ಆಯ್ಕೆ ನಮ್ಮದೆ.

ಹಾಡೇ ಇದೆಯಲ್ಲಾ ಎಲ್ಲಾ ಗುಣಗಳು ನಿನ್ನಲೆ ಅಡಗಿ ಕಾಳಗ ಮಾಡುತಿವೇಏಏಏ... ಮನತುಂಬಿರುವ ಶಾಂತಿಯ ನುಂಗಿ, ಕುಣಿಯಲು ನೋಡುತಿವೇ ಏಏ..ರೋಷವಾ... ಬಿಡುವೆಯಾ, ದ್ವೇಷವಾ... ಮರೆವೆಯಾ? ರಕ್ಕಸನಾ ವಿಷಗಾಳಿಯ ನುಂಗದೆ, ಬದುಕಿ ಎಲ್ಲರ ಉಳಿಸುವೆಯಾ?

ಆಯ್ಕೆ ನಮ್ಮದೆ.

❑

# ಸಿಂಟಾಕ್ಸ್ ಎರರ್

- ಎನ್. ರಾಮನಾಥ್

‘‘ಜಸ್ಟಿಫೈ ಯುವರ್ ಸ್ಟೇಟ್‌ಮೆಂಟ್’ ಅಂದ ಸುಬ್ಬು.

ಸೀನು ದೊಡ್ಡದೊಂದು ಭಾಷಣ ಬಿಗಿದು ತನ್ನ ಹೇಳಿಕೆಯನ್ನ ಸಮರ್ಥಿಸಿಕೊಳ್ತಾನೆ ಅಂತ ಕೊರೆತಕ್ಕೆ ಕಿವಿ ರೆಡಿ ಮಾಡ್ಕೊಳ್ಳೋ ಅಷ್ಟರಲ್ಲೇ ‘‘ಓ.ಕೆ. ಆಯಿತು’’ ಅಂದ ಸೀನು.

ಅಸ್ತವ್ಯಸ್ತವಾಗಿರುವ ಸಾಲುಗಳನ್ನ ಕಂಟ್ರೋಲ್+ಜೆ ಹೊಡೆದು ಒಂದು ಹದಕ್ಕೆ ತರೋದೇ ಜಸ್ಟಿಫೈ ಮಾಡೋದಂತೆ.

ಈ ಕಂಪ್ಯೂಟರ್ ಮಂದಿ ಭಾಷೇನೇ ವಿಚಿತ್ರ. ‘‘ವಿಂಡೋಸ್ ಈಸ್ ಶಟಿಂಗ್ ಡೌನ್’’ ಅಂತಾರೆ. ವಿಂಡೋಸ್ ಬಂದ್ರೆ ಆರ್ ಬರ್ಬೇಕು, ಈಸ್ ಅಲ್ಲ. ದಟ್ ಈಸ್ ಗ್ರಮಾಟಿಕಲೀ ರಾಂಗ್. ಈಸ್‌ನೇ ಬರೀಬೇಕೂಂದ್ರೆ ವಿಂಡೋ ಈಸ್ ಅಂತ ಬರೀರೀಂದ್ರೆ ಕೇಳಲ್ಲ. ಹಳೆಕಾಲದಲ್ಲಿ ಬಿಲ ಕೊರ್ಕೊಂಡು, ಬೆಕ್ಕುಗಳು ಸ್ಲಿಮ್ ಆಗಿರಲಿ ಅನ್ನೋ ಉದ್ದೇಶದಿಂದ ಅವುಗಳಿಗೆ ಜೂಟಾಟ ಆಡಿಸಿಕೊಂಡು, ಅಡಿಗೆಮನೆಯಲ್ಲಿನ ಡಬ್ಬಿ ಉರುಳಿಸಿ ಓಡ್ತಿದ್ದ ಹೆಗ್ಗಣದ ಅನುಜರಾದ ಇಲಿಗಳೆಲ್ಲಿ, ಕೈಹಿಡಿದು ನಡೆಸದೆ ಇದ್ರೆ ಬಿದ್ದ ಜಾಗದಲ್ಲೇ ಬಿದ್ದಿರೋ ಮೌಸ್ ಎಲ್ಲಿ!

ಮೌಸ್‌ದು ಆ ಕಥೆ ಆದ್ರೆ, ಅಲ್ಲಾಡದೆ ಕೂತಿದ್ದು ನಮ್ಮ ಕೈಗೊಂಬೆ ಆಗೋ ಮೊದ್ದು ಸ್ಕ್ರೀನ್‌ಗೆ ಮಾನೀಟರ್ ಅಂತಾರೆ. ಸ್ಕೇಲ್ ತುದೀಲೇ ಕ್ಲಾಸ್‌ನ ಹುಡುಗರನ್ನೆಲ್ಲ ಕಂಟ್ರೋಲ್ ಮಾಡ್ತಿದ್ದ ಆ ಮಾನೀಟರ್ ಎಲ್ಲಿ, ಮೌಸ್ ಅಲ್ಲಾಡದೆಯಿದ್ರೆ ಕೋಮಾದಲ್ಲಿರೋ ವ್ಯಕ್ತಿ ತರಹ ನಿಷ್ಕ್ರಿಯವಾಗಿರೋ ಈ ಮಾನೀಟರ್ ಎಲ್ಲಿ! ಈ ಇಬ್ಬರು ಮಾನೀಟರ್ರಲ್ಲೂ ಒಂದೇ ಸಾಮ್ಯ ನೋಡಿ - ಎರಡು ಮಾನೀಟರ್‌ಗೂ ವೈರಸ್ ಅಟ್ಯಾಕ್ ಆದರೆ ಮಂಕೋ ಮಂಕು. ಸಾಫ್ಟ್‌ವೇರ್ ಫೇಮಸ್ ಆದ್ಮೇಲೆ ಡ್ರಿಂಕ್ಸ್ ತೊಗೊಳ್ಳೋವ್ರು ಜಾಸ್ತಿ ಆದ್ರಂತೆ. ಆಗಾಗ್ಗೆ ಟೂಲ್-ಬಾರ್; ಸ್ಪೇಸ್-ಬಾರ್; ಸ್ಕ್ರಾಲ್-ಬಾರ್; ಟೈಮ್-ಬಾರ್ ಅಂತ ಮಾತಾಡೋದ್ರಿಂದ ಬಾರ್ ಬಗ್ಗೆ ಗಮನ ಹೆಚ್ಚಾಯ್ತೂಂತ ಕಂಪ್ಯೂಟರ್ ಜ್ಯೋತಿಷಿ ಗಣಕೇಶ್ ಸುಳ್ಳೇಶ್ ಹೇಳಿರೋದು ಸುಳ್ಳಲ್ವಂತೆ.

‘‘ಹೇಗಿದಾಳೋ ನಿನ್ನ ಗರ್ಲ್ ಫ್ರೆಂಡು?’’ ಸುಬ್ಬು ಕೇಳಿದ.

‘‘ವಾವ್! ಅವಳು ಲೇಟೆಸ್ಟ್ ಇನ್‌ಫೋಸಿಸ್ ರಿಸೆಪ್ಷನ್ ಕೌಂಟರ್‌ನಷ್ಟು ಬ್ಯೂಟಿಫುಲ್ಲಾಗಿದಾಳೆ’’ ಎಂದ ಸೀನು.

‘‘ಕಮಾನ್, ವಿವರವಾಗಿ ಹೇಳು’’

‘‘ಅವಳ ಫೇಸ್ 12’’ ಮಾನೀಟರ್‌ನಷ್ಟು ಸೈಜ್ ಇದೆ ಕಣೊ; ಬ್ಯೂಟಿಫುಲ್ ಫೀಚರ್ಸ್; ಅವಳ ಐಸ್ ನೋಡ್ಬೇಕು. ಕ್ಲಿಯರ್ ಐಸ್; ಒಳ್ಳೆ 20 ಮೆಗಾ ಪಿಕ್ಸೆಲ್ ಕ್ಯಾಮರಾ ಕ್ಲಾರಿಟಿಯಷ್ಟು ಕ್ಲಾರಿಟಿ ಇದೆ ಅವಳ ದೃಷ್ಟಿಯಲ್ಲಿ.’’

‘‘ಧ್ವನಿ’’

‘‘ಸರೌಂಡ್ ಸೌಂಡ್. ಎಸ್ಪೆಷಲಿ ಅವಳ ಅಕ್ಕ, ಅಮ್ಮ ಹಿಂದಿನ ಸೀಟಲ್ಲಿ, ಇವಳು ಪಕ್ಕದ ಸೀಟಲ್ಲಿ ಕೂತಾಗಂತೂ ಕಾರ್‌ನಲ್ಲಿ ಸರೌಂಡ್ ಸೌಂಡ್ ವಿತ್ ಡಾಲ್ಬಿ ಎಫೆಕ್ಟ್’’

‘‘ಅವಳಿಗೊಂದು ಡ್ಯುಯಟ್ ಹಾಡಿದ್ದೀಯಾ?’’

''ಶೂರ್''

''ಹೇಳು ಕೇಳ್ಳೋಣ''

''ಮೌಸು ಕರ್ಸರ್ ಒಂದಾದ ಹಾಗೆ ನನ್ನ ನಿನ್ನ ಜೀವನ

ನೀ ಡೆಸ್ಕ್‌ಟಾಪಲಿ ಫೋಲ್ಡರಾಗಿರೆ ಡಿಲೀಟಾಗದೆ ಜೊತೆಯಾಗಿರೆ

ಲೈಫೇ ಸವಿಗಾನ''

''ಗುಡ್ ಸಾಂಗ್. ಈಸ್ ಷಿ ಇಂಟೆಲಿಜೆಂಟ್?''

''ಶೂರ್. ಇಂಟೆಲ್ ಇನ್‌ಸೈಡ್. 64 ಎಂ.ಬಿ. ರಾಮ್''

''ಅಂದ್ರೆ?''

''ಒಂದು ಸರತಿ ನೋಡಿದ್ದನ್ನ 64 ವರ್ಷವಾದರೂ ಮರೆಯದಿರುವಂತಹ ಮೆಮೊರಿ.''

''ಹೇಗೆ ಗೊತ್ತು?''

''ಅವರಮ್ಮ 32 ಎಂ.ಬಿ. ರಾಮ್. ಮೊನ್ನೆ ಮೀಟ್ ಮಾಡಿದ್ದಾಗ 32 ಇಯರ್ಸ್ ಎಗೋ ಅವರ ಹಸ್ಬೆಂಡ್ ಮಾಡಿದ ತಪ್ಪನ್ನ ತಮ್ಮ ಮೆಮೊರಿ ಫೋಲ್ಡರ್‌ನಿಂದ ತೆಗೆದಿಟ್ಟು ಹಸ್ಬೆಂಡ್ ಫೈಲ್ಸ್‌ನಲ್ಲಿರೋ ಎರರ್ಸ್ ಎಲ್ಲ ಹೈಲೈಟ್ ಮಾಡಿದರು. ಅಮ್ಮ 32 ಎಂ.ಬಿ. ರಾಮ್. ಮಗಳು ಇಂಪ್ರೂವ್ಡ್ ವರ್ಷನ್ ಆದ್ದರಿಂದ 64 ಎಂ.ಬಿ. ರಾಮ್.''

''ಕಂಪಾಟಿಬಲಿಟಿ?''

''ನನಗೆ ಫುಲ್ಲೀ ಕಂಪಾಟಿಬಲ್ಲು. ಪ್ರಾಬ್ಲಮ್ ಈಸಿ ವಿತ್ ದ ಮದರ್ ಬೋರ್ಡ್. ಮದರ್ ಬೋರ್ಡ್‌ನಲ್ಲಿ ಅವಳನ್ನು ಅಕಾಮಡೇಟ್ ಮಾಡೋದು ಕಷ್ಟ.''

''ಅಂದರೆ?''

''ನನ್ನ ಮಮ್ಮೀನೋ... ಅವಳ ಜೊತೆ ಇವಳು ಹೊಂದೋದು ಕಷ್ಟ. ಈ ಫೋಲ್ಡರ್ ಅಪ್‌ಲೋಡ್ ಆಗ್ತಿದ್ದಾಗೇ – ಐ ಮೀನ್ ಮನೆಗೆ ಬರ್ತಿದ್ದಾಗೇ – ಸಿಸ್ಟಮ್ ಎರರ್ ಅಂತ ಆರಂಭವಾಗಿ, 404 ಎರರ್ ಅಂತ ತೋರಿಸಿ, ಮದರ್ ಬೋರ್ಡ್ ಕರಪ್ಟ್ ಆಗ್ಬಿಡತ್ತೆ. ಒಂದ್ವೇಳೆ ಮದರ್ ಬೋರ್ಡ್ ಸರಿಯಿದ್ರೆ ಈ ಫೋಲ್ಡರ್ ಓಪನ್ ಆಗ್ತಿದ್ದಾಗೇ ಇಡೀ ಮನೇ ಸಿಸ್ಟಮ್ಮೇ ಹ್ಯಾಂಗ್ ಆಗ್ಬಿಡತ್ತೆ.''

''ಏನ್ಮಾಡ್ತೀಯಾ?''

''ಈ ಫೋಲ್ಡರ್‌ಗೋಸ್ಕರಾನೇ ಒಂದು ಎಕ್ಸ್‌ಟರ್ನಲ್ ಹಾರ್ಡ್ ಡಿಸ್ಕ್ ತೊಗೊಳ್ಳೋಣಾಂತಿದೀನಿ – ಐ ಮೀನ್ ಎ ಸೆಪರೇಟ್ ಹೌಸ್.''

''ನಿನ್ನ ಮಮ್ಮಿ ಡ್ಯಾಡಿ?''

''ಸ್ಕ್ರ್ಯಾಪ್‌ಯಾರ್ಡ್‌ಗೆ ಕಳಿಸೋಣಾಂತ. ಐ ಮೀನ್ ವೃದ್ಧಾಶ್ರಮ.''

ಇವರಿಬ್ಬರ ಮಾತುಗಳನ್ನು ಇನ್ನು ಕೇಳಲಾರದೆ ಹೊರಡಲು ಎದ್ದೆ.

''ಏನಾಯಿತು ಅಂಕಲ್?'' ಒಕ್ಕೊರಲಿನ ಪ್ರಶ್ನೆ ಬಂತು.

''ಸಿನ್‌ಟ್ಯಾಕ್ಸ್ ಎರರ್'' ಎನ್ನುತ್ತಾ ಎಕ್ಸಿಟ್ ಬಟನ್ ಒತ್ತಿಕೊಂಡೆ.

❑

# ಈ ಅಮ್ಮನ ಇ-ಪ್ರಲಾಪ

**- ನಳಿನಿ ಸೂರ್ಯಪ್ರಕಾಶ್**

ನಿತ್ಯ ಫೇಸ್ ತೊಳೀತಾನೊ ಇಲ್ವೋ, ಫೇಸ್‌ಬುಕ್ ನಲ್ಲಂತೂ ಇರ್ತಾನೆ ನೋಡ್ರಿ, ನನ್ನ ಹತ್ತನೇ ಕ್ಲಾಸಿನ ಮಗ. ಇವನು ಸ್ಮಾರ್ಟಫೋನೆಂಬ ಅಂಗೈ ಗಾತ್ರದ ಯಂತ್ರದಲ್ಲಿ ಎಷ್ಟೆಲ್ಲಾ ತಂತ್ರಗಳ ಮೇಲೆ ಲೀಲಾಜಾಲವಾಗಿ ಬೆರಳಾಡ್ಸೋ ಸ್ಮಾರ್ಟ ಬಾಯ್! ನೋಟ್ಸ್ ವಿನಿಮಯಕ್ಕೆ ಪುಸ್ತಕದ ಪುಟಗಳನ್ನೇ ಕ್ಲಿಕ್ಕಿಸಿ, ವಾಟ್ಸ್ಯಾಪಿನಲ್ಲಿ ಹರಿಬಿಡುವ ಚಾಣಾಕ್ಷ! ಈ ಎಡಬಿಡಂಗಿ ವಯಸ್ಸಿನಲ್ಲಿ ಚಿತ್ತ ಚಾಂಚಲ್ಯಕ್ಕೆ ಫೇಸ್‌ಬುಕ್ಕು, ವಿಡಿಯೋ ಗೇಮ್ಸು, ಎಂತೆಲ್ಲಾ ದಾರಿಗಳಿರುವಾಗ, ಎಸ್ಸೆಸ್ಸೆಲ್ಸಿ ಎಂಬ ನದಿಯನ್ನು ಇವ ಈಸಿ, ಜಯಿಸಿ, ದಡ ಸೇರಿದರೆ ಸಾಕಪ್ಪಾ ಎಂಬಂತಾಗಿದೆ ನನಗೆ.

> **ತಮ್ಮ ಹತ್ತಿರವೇ ಇರುವವರಿಂದ ದೂರವಾಗಿ, ಎಲ್ಲೋ ದೂರದಲ್ಲಿರುವವರಿಗೆ ಹತ್ತಿರವಾಗಿರ್ತಾರಲ್ಲ ಈ ಇ-ಮಂದಿ!**

ಗಂಟೆಗಟ್ಟಲೆ ವಾಟ್ಸ್ಯಾಪು, ವೀಡಿಯೋ ಗೇಮುಗಳಲ್ಲಿ ಇವನ ಸಮಯ ಸೋರಿಹೋಗ್ತಿದ್ರೆ, ನನ್ನ ಬೀಪಿಯ ಏರಿಳಿತಗಳೂ ಹೆಚ್ಚಾಗ್ತವೆ. ಹಾಳು ಮೊಬೈಲನ್ನು ಇವನ ಕೈಯಿಂದ ಕಿತ್ಗೊಂಡು, ಈಡುಗಾಯಿಯಂತೆ ಒಡೆದುಬಿಡಲೇ ಎನ್ನುವಷ್ಟು ರೊಚ್ಚಿಗೇಳುತ್ತೇನೆ. ಮರುಕ್ಷಣವೇ, ಇದಕ್ಕೆ ನನ್ನದೇ 12 ಸಾವಿರ ಸುರಿದದ್ದು ನೆನಪಾಗಿ, ತಣ್ಣಗಾಗಿ, ಇವನಿಗೆ, ಮೊಬೈಲು ತೆಗೆಸಿಕೊಟ್ಟ ನನ್ನ ಮೂರ್ಖತನಕ್ಕೆ ಹಣೆಚಚ್ಚಿಗೋತೀನಿ!

ಇಂತಿರ್ಪ ನಾನು, ಮೊಬೈಲು ಇಟ್ಟುಕೊಳ್ಳದ ಕಾರಣ, ಅವಶ್ಯಕತೆಯಿದ್ದಾಗ ಯಜಮಾನರ ನಂಬರ್ರು/ಮೊಬೈಲನ್ನು ಬಳಸಿಕೊಂಡು, ದಿನ ದೂಡ್ತಿದ್ದೀನಿ. ಇರಲಿ, ಹಾಗಂತ ಈ ಲೋಕದಲ್ಲಿದ್ಗೊಂಡು, ಇ-ಲೋಕದಿಂದ ಸಂಪೂರ್ಣ ದೂರವಿರುವ ಮಡಿವಂತಿಕೆಯೇನು ನನ್ನಲ್ಲಿಲ್ಲ. ಟ್ವಿಟರ್ರು, ಫೇಸ್ಬುಕ್ಕು ಇಲ್ಲದಿದ್ರೂ, ನನ್ನದೇ ಇ-ಮೇಲ್ ಅಂತೂ ಇದೆ. ಮೊನ್ನೆ, ನನ್ನ ಸ್ಮಾರ್ಟಬಾಯ್‌ಗೆ ತನ್ನ ಸ್ಮಾರ್ಟ್ ಫೋನ್ನಲ್ಲಿ ನನ್ನ ಇ-ಮೇಲ್ ತೆರೆಯೋದು ಇನ್ನೊಂದು ಸಲ ಹೇಳ್ಕೊಡು ಅಂತ ಬಿನ್ನವಿಸಿಕೊಂಡೆ. ''ಎಷ್ಟು ಸಲ ಹೇಳ್ಕೊಡೋದಮ್ಮ...'' ಅಂತ ಅಲವತ್ತುಕೊಂಡ ! ''ಎಲಾ ಇವನ ! ಗರುಡಗಂಭದಂತೆ ಬೆಳೆದಿರೋ ಇವನಿಗೆ, ಇವನ ಎಳೆವಯಸ್ಸಿನಲ್ಲಿ ಅಕ್ಷರಾಭ್ಯಾಸ ಮಾಡಿಸಿ, ಸಿಹಿಯೂಟ ಹಾಕಿಸಿದ ಮೇಲೆ, ಇವನ ಪುಟ್ಟ ಅಂಗೈಹಿಡಿದು, ಕಪ್ಪು ಸ್ಲೇಟಿನ ಮೇಲೆ ಲೆಕ್ಕವಿಲ್ಲದಷ್ಟು ಬಾರಿ ತಾಳ್ಮೆಯಿಂದ ಅ-ಆ-ಇ-ಈ ತಿದ್ದಿಸುವುದರಲ್ಲೇ ಅದೆಷ್ಟು ಸಂತೋಷ-ಸಂಭ್ರಮ ಕಂಡಿದ್ದೆ ! ಇನ್ನೊಂದು ಬಾರಿ ಹೇಳಿಕೊಡುವ ತಾಳ್ಮೆ ಇಲ್ಲದ ಇವನ ಮುಂದೆ, ಮೊಬೈಲಿನಲ್ಲಿ ಗೂಗಲಿಸಲು ಗೊತ್ತಿಲ್ಲದ ಗುಗ್ಗು ಆದೆನಾ? ಎಂದು ಕಸಿವಿಸಿಗೊಂಡೆ. ಪೀಳಿಗೆಯ ಅಂತರದ ಅರಿವಾಗಿತ್ತು !

ಸ್ನೇಹಿತೆಯರ ಒತ್ತಾಯದ ಮೇರೆಗೆ ನಾನೂ ಅವರ ವಾಟ್ಸ್ಯಾಪ್ ಗುಂಪಿಗೆ ಸೇರ್ಪಡೆಗೊಂಡೆ. ಒಮ್ಮೆ ಗೆಳತಿಯೊಡನೆ ವಾಟ್ಸ್ಯಾಪಿನಲ್ಲಿ ಸಂಭಾಷಿಸುತ್ತಿದ್ದ ಕಂಡ ನನ್ನ

ಸ್ಮಾರ್ಟ್‌ಬಾಯ್, ''ಅಯ್ಯೋ ! ನಿಂಗೆ ವಾಟ್ಸ್ಯಾಪಿನಲ್ಲಿ ಮಾತಾಡಕ್ಕೇ ಬರಲ್ಲ ! ಶಾರ್ಟ್ ಆಗಿರ್ಬೇಕು ಗೊತ್ತಾ? ನಿನ್ನ ಫ್ರೆಂಡ್ ನೋಡು, ಚಿಕ್ಕದಾಗಿ ಉತ್ತರ ಕೊಡ್ತಿದಾರೆ..'' ಅಂದ. ನಾನು ಆ ಕಡೆಯ ನನ್ನ ಗೆಳತಿಗೆ, ಮಗರಾಯ ಹೇಳಿದ್ದ ಕುರಿತು, '' ಹೀಗಂತೆ. . .ಹೀಗೀಗಂತೆ. . . ಹೌದಾ?'' ಎಂದೆ. ಅದಕ್ಕವಳು, ಚುಟುಕಾಗಿ, ''ಯಸ್, ಟ್ರೂ'' ಎಂದಷ್ಟೇ ಟೈಪಿಸಿದಳು ! ಹೀಗೆ ಒಂದಂಕಿ ಪ್ರಶ್ನೆಗಳಿಗೆ ಉತ್ತರ ಕೊಟ್ಟಂಗೆ ಸಂಭಾಷಿಸುವ ಶೈಲಿ ನಮ್ಮ ತಾತನಾಣೆ ನನಗೆ ಬರದು ಎಂದ್ಕೊಂಡೆ.

ಇ-ಲೋಕದ ಮಂದಿ ಮೂರು ಹೊತ್ತೂ ದೂರದಲ್ಲಿರುವ ಯಾರೊಂದಿಗೋ ಮಾತಾಡ್ತಲೋ, ವಾಟ್ಸ್ಯಾಪಿಸುತ್ತಲೋ ತಮ್ಮದೇ ಲೋಕದಲ್ಲಿರುವಾಗ ತಮ್ಮ ಹತ್ತಿರವೇ ಇರುವವರಿಂದ ದೂರವಾಗಿ, ಎಲ್ಲೋ ದೂರದಲ್ಲಿರುವವರಿಗೆ ಹತ್ತಿರವಾಗಿರ್ತಾರಲ್ಲ! ಇದೊಂದು ವಿಪರ್ಯಾಸವೇ ಸರಿ ಅಂತ ನನಗೆ ಹಲವು ಬಾರಿ ಅನ್ನಿಸಿದ್ದುಂಟು. ಹೀಗಿರುವಾಗ ಇನ್ನು ನಮ್ಮೊಂದಿಗೆ ನಾವು ಕಾಲ ಕಳೆಯುವುದಾದರೂ ಎಂದು!

ಮೊನ್ನೆ ನನ್ನ ಪುತ್ರರತ್ನ, ''ಪರೀಕ್ಷೇಲಿ ತೊಂಭತ್ತು ಪರ್ಸೆಂಟ್‌ಗಿಂತ ಹೆಚ್ಚು ತೊಗೊಂಡ್ರೆ ಏನು ಕೊಡಿಸ್ತೀಯ? ಅಂತ ಬಾಂಬೆಸೆದ! ಇದ್ಯಾವುದಕ್ಕೆ ಪೀಠಿಕೆಯೋ ಎಂದುಕೊಳ್ತಾ, ''ನಾನೇನು ನಿನ್ನ ಏಟಿಎಂ ಮೆಷಿನ್ನಾ?'' ಅಂತ ಹೌಹಾರಿದೆ. ''ನೀನಿನ್ನೂ ಏಟಿಎಂ ಕಾಲದಲ್ಲಿದ್ದೀಯ ! ಇದು ಪೇಟಿಎಂ ಕಾಲ ''ಅಂತ ಅಣಕವಾಡಿದ.

ಐನೂರು-ಸಾವಿರದ ನೋಟುಗಳು ರದ್ದಾಗಿ, ಅವು ರದ್ದಿಯಾಗಿದೆ. ಜೊತೆಗೆ, ಎಲ್ಲೆಡೆ ಕ್ಯಾಷ್ ಲೆಸ್, ಲೆಸ್ ಕ್ಯಾಷ್ ಅಂತ ಬೊಬ್ಬಿಡುತ್ತಿರುವಾಗ, ಇವನ ಮಾತು ನಿಜವೆನಿಸಿ, ಕೋಲೆಬಸವನ ಹಾಗೆ ಗೋಣಾಡಿಸಿದೆ ! ಮರುಕ್ಷಣವೇ ತಪ್ಪಿನ ಅರಿವಾಗಿ, ತಲೆಯನ್ನು ಅಡ್ಡಡ್ಡ ಆಡಿಸುವುದನ್ನು ಮಾತ್ರ ಮರೆಯಲಿಲ್ಲ ಅನ್ನಿ!

❑

## ಗ್ಯಾಜೆಟ್ ವ್ಯಸನಿಯ ಲಕ್ಷಣಗಳು

- ಮನೆಯಲ್ಲೇ ಇದ್ದರೂ ಊಟ ತಯಾರಾಗಿದೆ ಎಂಬ ಸಂದೇಶ ವಾಟ್ಸ್‌ಅಪ್‌ನಲ್ಲಿ ಹಾಕಿದರೆ ಮಾತ್ರ ಊಟಕ್ಕೆ ಬರುತ್ತಾನೆ.
- ಮನುಷ್ಯರ ಜತೆ ಪಠ್ಯ ಸಂದೇಶಗಳಲ್ಲೇ ವ್ಯವಹರಿಸುತ್ತಾನೆ.
- ಮನೆಯ ವಿಳಾಸ ಕೇಳಿದರೆ ಗೂಗಲ್ ಮ್ಯಾಪ್ ಅಕ್ಷಾಂಶ ರೇಖಾಂಶ ಕಳುಹಿಸುತ್ತಾನೆ.
- ಹೊಸ ಪುಸ್ತಕ ಖರೀದಿಸಿ ಅದನ್ನು ಸ್ಕ್ಯಾನ್ ಮಾಡಿ ಪಿಡಿಎಫ್ ಕಡತವನ್ನಾಗಿಸಿ ಮೊಬೈಲ್‌ಗೆ ವರ್ಗಾಯಿಸಿ ಓದುತ್ತಾನೆ.

**– ಯು.ಬಿ. ಪವನಜ**

# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

~1~

ಫೇಸ್ ಬುಕ್ಕಲ್ಲಿ ಲೈಕ್ ಮಾಡಿ
ವಾಟ್ಸಾಪ್‌ನಲ್ಲಿ ಚಾಟ್ ಮಾಡಿ
ಮದುವೆಯಾದ ಸುಬ್ಬಯ್ಯ
ಅವನಿಗೆ ಈಗ
ಎರಡು ಮಕ್ಕಳು
ನೆಟ್ ರಾಜ, ವೆಬ್ಬಯ್ಯ!

~2~

ಡಿಜಿಟಲ್ ಯುಗದಲ್ಲಿ
ವ್ಯವಹಾರ ಕ್ಯಾಶ್ ಲೆಸ್
ಜೀವನ ರೆಸ್ಟ್ ಲೆಸ್
ಪ್ರೀತಿ ಪ್ರೇಮಕ್ಕೂ
ಪುರಸತ್ತಿಲ್ಲ
ಮೊಬೈಲಿಗೇ ಕಿಸ್!

~3~

ಪ್ರೇಮ ಕುರುಡು
ಅಷ್ಟೇ ಅಲ್ಲ
ಆಗಿದೆ ಅದು ಮೂಕ
ಪ್ರೇಮಿಗಳು ಈಗ
ಐ ಲವ್ ಯೂ ಅನ್ನುವುದು
ಚಾಟಿಂಗ್ ಮೂಲಕ!

~4~

ಪರ್ಸಿನಲ್ಲಿ ಹಣ ಇದ್ದರೆ
ಕೆಲವರಿಗೆ ಅದೇ ಸಲೀಸು
ಪರ್ಸು ಖಾಲಿ ಇದ್ದರೂ
ಖಾತೆಯಲ್ಲಿ ದುಡ್ಡಿದ್ದರೆ
ಮಾಡಬಹುದು ವ್ಯವಹಾರ
ಕ್ಯಾಶ್ ಲೆಸ್ಸು
ಎರಡೂ ಕಡೆ ಇಲ್ದಿದ್ರೆ
ಯೂಸ್ ಲೆಸ್ಸು!

~5~

ಕೊನೆಗೂ ಸಿಕ್ಕಿತು ಆಹಾ
ಹೊಸ ಐನೂರರ ನೋಟು
ಬೇಕಾದ ಮುಖ ಬೆಲೆಯ
ಗರಿ ಗರಿ ನೋಟು
ಈಗ ನಾನು ನಿಜವಾಗಿಯೂ
ನೋಟೆಡ್ ಪೊಯೆಟ್ಟು!

❑

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– **ದಂನಆ**

- 2ಜಿ ಗೆ ಹೋದ ಮಾನ 4ಜಿ ಕೊಟ್ಟರೆ ಬರುವುದೆ?
- **ವಿಕಿಪೀಡಿಯ:** ನನಗೆ ಎಲ್ಲವೂ ಗೊತ್ತು. **ಗೂಗಲ್:** ನನ್ನ ಬಳಿ ಎಲ್ಲವೂ ಇದೆ. **ಫೇಸ್‌ಬುಕ್:** ನನಗೆ ಎಲ್ಲರೂ ಗೊತ್ತು. **ಇಂಟರ್‌ನೆಟ್:** ನಾನಿಲ್ಲದೆ ನೀವೇನೂ ಅಲ್ಲ. **ವಿದ್ಯುತ್:** ನೀವೆಲ್ಲ ಎಷ್ಟು ಬೇಕಾದರೂ ಬಡಾಯಿ ಕೊಚ್ಚಿಕೊಳ್ಳಿ.
- ಬ್ರೇನ್ ಸಹ ಒಂದು ಆಪ್ ಎಂದರೆ ಜನ ಉಪಯೋಗಿಸಲು ಪ್ರಾರಂಭಿಸಬಹುದು.
- 'ಒಟ್ಟು ಮುನ್ನೂರು ಸೆಕೆಂಡ್‌ಗಳಷ್ಟು ದೀರ್ಘ ಸಮಯದಲ್ಲಿ ಮನೆಯಲ್ಲಿ ಇಂಟರ್‌ನೆಟ್ ಇಲ್ಲದಾಗ ನೀವು ನನಗೆ ನೀಡಿದ ಧೈರ್ಯಕ್ಕೆ ನಾನು ನಿಮಗೆಲ್ಲ ಆಭಾರಿ' ಎಂದೊಬ್ಬ ನಂತರ ಎಲ್ಲರಿಗೂ ಮೆಸೇಜ್ ಮಾಡಿದನಂತೆ.
- **ಕ್ಲಿನಿಕ್‌ನಲ್ಲಿ ಕಂಡು ಬಂದ ಫಲಕ:** ಪೇಷಂಟ್ಸ್, ಪ್ಲೀಸ್ ಡೋಂಟ್ ಕಂಪೇರ್ ಯುವರ್ ಗೂಗಲ್ ಸರ್ಚ್ ವಿತ್ ಮೈ ಮೆಡಿಕಲ್ ಡಿಗ್ರೀ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಾವು ಹೇಳಿದಂತೆ ಮೊಬೈಲ್ ಕೇಳುತ್ತಿಲ್ಲ. ಮೊಬೈಲ್ ಹೇಳಿದಂತೆ ನಾವು ಕೇಳುತ್ತಿದ್ದೇವೆ.
- ಬುದ್ಧ ಈಗಿದ್ದಿದ್ದರೆ ಕಿಸಾ ಗೋತಮಿಗೆ ಏನು ಹೇಳುತ್ತಿದ್ದ: ಮೊಬೈಲ್ ಇಲ್ಲದ ಮನೆಯಿಂದ ಸಾಸುವೆ ತಾ...
- ಎಲ್ಲರೂ ಕ್ಯಾಶ್‌ಲೆಸ್ ಆದರೆ ಪಿಕ್‌ಪಾಕೆಟ್‌ಗಳ ಗತಿ?
- ಈಗ ಕಾಲ ಬದಲಾಗಿದೆ. ಕಥನ ಬದಲಾಗಿದೆ. 'ಒಂದಾನೊಂದು ಕಾಲದಲ್ಲಿ ...' ಎಂದು ಕತೆ ಆರಂಭವಾಗುತ್ತಿತ್ತು. ಈಗ 'ಮುಂದಾನೊಂದು ಕಾಲದಲ್ಲಿ ...' ಎಂದು ಕತೆ ಶುರುವಾಗುತ್ತದೆ.
- 'ನಾನು ಜಿಮ್ ಹೋಗಿದ್ದೆ' ಎಂದು ಫೇಸ್‌ಬುಕ್‌ನಲ್ಲಿ ಹಾಕಲು ಮರೆತೇ ಬಿಟ್ಟಿದ್ದೆ. ನಂತರ ಹಾಕಿದೆ.ಇಲ್ಲದಿದ್ದರೆ ಜಿಮ್ ಹೋಗಿದ್ದೆಲ್ಲ ವೇಸ್ಟ್ ಆಗುತ್ತಿತ್ತು.
- **ಫೋನಿನಲ್ಲಿ ಪ್ರಶ್ನೆ :** ನನ್ನ ಟ್ವಿಟರ್ ಸಂಪರ್ಕ ಕಡಿದಿದೆ. ನೀವು ಬ್ರೇಕ್‌ಫಾಸ್ಟ್ ಏನು ತಿಂದಿರಿ?
- ನನ್ನ ಫೋನಿಗಿಂತಲೂ ನನಗೆ ಹೆಚ್ಚು ಗೊತ್ತಿದ್ದ ದಿನಗಳೂ ಇದ್ದವು ಎಂದು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತೇನೆ.
- ಕಂಪ್ಯೂಟರ್‌ಗಳು ತುಂಬಾ ವೇಗವಾಗಿ ಮತ್ತು ಕರಾರುವಾಕ್ಕಾಗಿ ತಪ್ಪುಗಳನ್ನು ಮಾಡುತ್ತವೆ.
- ಇ-ಕಲಿಕೆ ಅಂದರೆ ನಾಳಿನ ಕೌಶಲಗಳನ್ನು ಇಂದೇ ಮತ್ತು ಈಗಲೇ ಕಲಿಸುವುದು.

❑

# ಓದುಗರ ಪತ್ರ

ಸಂಪಾದಕರು
ಅಪರಂಜಿ ಮಾಸಪತ್ರಿಕೆ
ಬೆಂಗಳೂರು

ಮಾನ್ಯರೇ,

ಈ ಜನವರಿ ಅಪರಂಜಿ ಸಂಚಿಕೆ ಎಲ್ಲಾ ದೃಷ್ಟಿಯಲ್ಲೂ (ವಿಟ್, ಹ್ಯೂಮರ್ ಮತ್ತು ಸಟೈರ್) ಬಹಳ ಚೆನ್ನಾಗಿದೆ. ಮುಖಪುಟದ ವ್ಯಂಗ್ಯಚಿತ್ರವೇ ಒಳ್ಳೆ ಪಂಚ್.

ವತ್ಸನ ಅವರ ಶ್ರೀ ಮಾರುತಿ ಭಜನಾ ಮಂದಿರ ಪ್ರಕರಣ – ಹಾಸ್ಯದ ಜೊತೆಗೆ ಷರ್ಲಾಕ್ ಹೋಮ್ಸ್, ವಾಟ್ಸನ್, ಜೆರೋಮ್‌ರ ನೆನಪು ತರುತ್ತ ಮುದ ನೀಡುತ್ತದೆ.

ದನಂಆ ರ ತುಂತುರು – ಎಲ್ಲ ಉಕ್ತಿಗಳೂ ಚತುರವಾಗಿವೆ. ತಿಳಿನಗೆ ಚಿಮ್ಮುತ್ತದೆ. ಎಚ್. ಡುಂಡಿರಾಜ್‌ರ ಸಂಕ್ರಾಂತಿ ಚುಟುಕ, ಜೀನ್ಸ್ ಪ್ಯಾಂಟ್ ಧರಿಸಿ ಎಳ್ಳು ಬೀರೋದು, ಸನ್ ಕ್ರಾಂತಿ, ಗಂಡುಬೀರಿ (ಗುಂಡು ಹೀರಿ), 5ನೇ ಚುಟುಕದ (ಪಂಚ) ಪಂಚ್ ಬಹಳ ಚೆನ್ನಾಗಿದೆ. ಕ್ಲೈಮಾಕ್ಸ್.

ಆರತಿ ಘಟಿಕಾರ್‌ರ ''ಕಪಾಟಿಗೆ ಬಂತು ಕ್ಲೀನಿಂಗ್ ಭಾಗ್ಯ'', ಬೇಲೂರು ರಾಮ ಮೂರ್ತಿಯವರ ''ನಾನಾ ರೂಪದ ನಗೆಯಾನಂದ – ನಾಲ್ಕೂ ಬಿಟ್ಸ್ ಬಹು ಚೆನ್ನಾಗಿವೆ'', – ನಕ್ಕೂ ನಕ್ಕೂ ನಲಿದೆ.

ಒಟ್ಟಿನಲ್ಲಿ ಈ ಸಂಚಿಕೆ ''ಹಾಸ್ಯ ವಿಶೇಷ''ವಾಗಿ ಮನ ಸೆಳೆಯುತ್ತದೆ. ಲೇಖಕರಿಗೆ ಮತ್ತು ಸಂಪಾದಕರಿಗೆ ಅಭಿವಂದನೆ ಮತ್ತು ಧನ್ಯವಾದಗಳು.

ಈ ಹಿಂದಿನ ಸಂಚಿಕಗಳಲ್ಲಿ ಹಾಸ್ಯಕ್ಕಿಂತ ಗಂಭೀರ ಚಿಂತನೆ ಹೆಚ್ಚಾಗಿರುತ್ತಿತ್ತು. ನಾವು ಬಯಸುವುದು ಹಾಸ್ಯದ ಜೊತೆಗೆ ಚಿಂತನೆ (ಗಾಢ ಅಲ್ಲ, ಲಘು). ಈ ಸಂಚಿಕೆಯ ವಿಶೇಷತೆಯನ್ನೇ ಮುಂದುವರಿಸಿರಿ.

ಇವು ನನ್ನ ಅನಿಸಿಕೆಯ ಮಾತುಗಳು – ಕ್ಷಮಿಸಿ.

ನಿಮ್ಮ ವಿಶ್ವಾಸದ,

**ಪ್ರಭು ಪ್ರಸಾದ್**
ಮೈಸೂರು

❑

# ಅಜ್ಜಿಯ ಡಿಜಿಟಲ್ ಪ್ರಪಂಚ

- ಬೇಲೂರು ರಾಮಮೂರ್ತಿ

**ಮೊ**ಬೈಲ್ ಹಿಡ್ಕೊಂಡು ಓಡಾಡ್ತಿದ್ದ ಮೊಮ್ಮಗನನ್ನು ಕರೆದ ಅಜ್ಜಿ ''ಏಯ್, ಮೂರು ಹೊತ್ತೂ ಮೊಬೈಲ್ ಹಿಡ್ಕೊಂಡೇ ಇರ್ತೀಯಲ್ಲ ಅದು ಬಿಟ್ಟರೆ ನಿನಗೆ ಬೇರೇನೂ ಇಲ್ವ'' ಅಂತ ರೇಗಿದಳು. ಅದಕ್ಕೆ ಮೊಮ್ಮಗ, ''ಅಜ್ಜಿ ಇದು ಬರೀ ಮೊಬೈಲ್ ಅಂದ್ಕೊಬೇಡ ಇದರಲ್ಲಿ ಕೊಂಡ್ಕೊಬಹುದು,. ಮಾರಬಹುದು, ಮಾತಾಡಬಹುದು, ಲೈಟ್ ಬಿಲ್ ಕಟ್ಟಬಹುದು, ತರಕಾರಿ ಕೊಂಡ್ಕೊಬಹುದು ಇನ್ನೂ ಏನೇನೋ ಮಾಡಬಹುದು, ಇದು ಡಿಟಿಜಲ್ ಪ್ರಪಂಚ ಅಜ್ಜಿ ಡಿಟಿಜಲ್ ಪ್ರಪಂಚ, ನಿಮ್ಮ ಕಾಲದ ತರಹ ಅಲ್ಲ'' ಅಂದ. ಅಜ್ಜಿಗೆ ಅವಳ ಕಾಲದ ಬಗೆಗೆ ಹಗುರವಾಗಿ ಮಾತಾಡಿದ್ದಕ್ಕೆ ಕೋಪ ಬಂತು. ಮೊಮ್ಮಗನ ಷರಟು ಹಿಡಿದೆಳೆದು ಮುಂದೆ ಕೂರಿಸಿಕೊಂಡು ''ನಮ್ಮ ಕಾಲದಲ್ಲೂ ಡಿಟಿಜಲ್ ಯುಗ ಇತ್ತಪ್ಪ. ಆದರೆ ಮೊಬೈಲ್ ಇರಲಿಲ್ಲ, ಬೇರೆ ತರಹ ಇತ್ತು. ಅದು ಎಲ್ಲರಿಗೂ ಗೊತ್ತಿತ್ತು. ಈಗ ನಾನೊಂದು ವಿಚಾರ ಹೇಳ್ತೀನಿ ನೀನು ಅದನ್ನು ಬಿಡಿಸು ನೋಡೋಣ'' ಅಂದ ಅಜ್ಜಿ ಒಂದು ಅಂದರೆ ಊಟ ಷುರು ಹತ್ತು ಅಂದರೆ ಊಟ ಮುಗಿಯಿತು. ಅದೇನು ಹೇಳು ನೋಡೋಣ ಅಂದಳು. ಮೊಮ್ಮಗ ತಲೆ ಕೆರ್ಕೊಂಡ. ಅಜ್ಜಿ ಮೊಮ್ಮಗನ ಬೆನ್ನ ಮೇಲೆ ಒಂದೇಟು ಹಾಕಿ ''ಹೇಳ್ತೀನಿ ಕೇಳು. ನಮ್ಮ ಕಾಲದಲ್ಲಿ ಒಂದು ಲೆಕ್ಕದ ಆಟ ಆಡ್ತಿದ್ವು. ಒಂದು ಎರಡು ಬಾಳೆಲೆ ಹರಡು, ಮೂರು ನಾಲ್ಕು ಅನ್ನ ಹಾಕು, ಐದು ಆರು ಅನ್ನಕೆ ಸಾರು, ಏಳು ಎಂಟು ಪಲ್ಯಕೆ ದಂಟು ಒಂಭತ್ತು ಹತ್ತು ಎಲೆ ಮುದುರೆತ್ತು ಊಟದ ಆಟವು ಮುಗಿದಿತ್ತು'' ಅಜ್ಜಿಯ ಮಾತು ಕೇಳಿ ಮೊಮ್ಮಗ ದೊಡ್ಡದಾಗಿ ಕಣ್ಣು ಬಿಟ್ಟ. ಅಜ್ಜಿ ಮೊಮ್ಮಗನ ಕಿವಿ ಹಿಂಡಿ, ''ಇಲ್ಲಿ ಕೇಳು, ಇಡೀ ಮನುಷ್ಯನ ಜೀವನಾನೆ ಡಿಜಿಟಲ್ ಆಗಿ ಹೋಗಿ ಯಾವುದೋ ಕಾಲ ಆಗಿದೆ. ಜನ ಆ ಕಡೆ ಗಮನ ಕೊಟ್ಟಿಲ್ಲ ಅಷ್ಟೆ. ಆರೋಗ್ಯವಾಗಿರಬೇಕಾದರೆ ಹೇಗಿರಬೇಕು ಎನ್ನೋದಕ್ಕೆ ಒಪ್ಪತ್ತುಂಡವ ಯೋಗಿ, ಎರಡೊತ್ತುಂಡವ ಭೋಗಿ, ಮೂರೊತ್ತು ಉಂಡವನನ್ನು ಹೊತ್ಕೊಂಡು ಹೋಗಿ ಅನ್ನುತ್ತಿದ್ದರು. ಆಮೇಲೆ ನಿನಗೆ ಒಂದು ಲೆಕ್ಕ ಕೇಳ್ತೀನಿ, ಅದಕ್ಕೆ ಸರಿಯಾಗಿ ಉತ್ತರ ಕೊಡು. ಒಂದು ಒಂದು ಎಷ್ಟು ಅಂತ ಕೇಳಿ ಅಜ್ಜಿ ಕಣ್ಣು ಮಿಟುಕಿಸಿದಳು. ಮೊಮ್ಮಗ ಖುಷಿಯಿಂದ ''ಎರಡು ಅಜ್ಜಿ'' ಅಂದ. ''ಅದು ಲೆಕ್ಕದಲ್ಲಿ ಅಲ್ವಾ, ಆದರೆ ಬದುಕಿನಲ್ಲಿ ಒಂದು ಒಂದು ಮೂರು ಆಗುತ್ತೆ. ನಮ್ಮ ಕಾಲದಲ್ಲಿ ಒಂದು ಒಂದು ಆರು, ಏಳು ಎಂಟು, ಒಂಭತ್ತು, ಹತ್ತು, ಹೀಗೆಲ್ಲಾ ಆಗುತ್ತಿತ್ತು. ಈಗಿನ ಕಾಲದಲ್ಲಿ ಒಂದು ಒಂದು ಮೂರು ಮಾತ್ರ'' ಮೊಮ್ಮಗನಿಗೆ ಅಜ್ಜಿಯ ಮಾತಿಂದ ತಲೆ ಕೆರೆದುಕೊಳ್ಳೊ ಹಾಗಾಯಿತು ''ಅಜ್ಜಿ ಈ ಲೆಕ್ಕ ಹೇಗಜ್ಜೀ ಅಲ್ಲ ಒಂದು ಒಂದು ಯಾವತ್ತಿದ್ದರೂ ಎರಡೇ ಅಲ್ವಾ, ನಿಮ್ಮ ಕಾಲದಲ್ಲಿ ಅದು ಹೇಗೆ ಅಷ್ಟೊಂದು ಆಗ್ತಿತ್ತು'' ಅಂತ ಕೇಳಿದ. ಅಜ್ಜಿ ಬಾಯಿ ತೆರೆದು ಒಂಚೂರು ಅಡಿಕೆ ಹಾಕಿಕೊಂಡು ''ನೋಡು, ನಮ್ಮ ಬದುಕಿನಲ್ಲಿ ಒಬ್ಬರಿಗೆ ಒಂದು ಅನ್ತೀವಿ. ನಾನು ಹೇಳಿದ್ದು ಒಂದು ಅಂದರೆ ಗಂಡ, ಒಂದು ಅಂದರೆ ಹೆಂಡತಿ, ಹೌದಾ. ಅವರಿಬ್ಬರೂ ಕೂಡಿ ಸಂಸಾರ ಮಾಡಿದ ಮೇಲೆ ಮಗು ಹುಟ್ಟುತ್ತೆ. ಅದೇ ಮೂರನೆಯದು. ಅಲ್ಲಿಗೆ ಒಂದು ಒಂದು

ಮೂರು ಆಯ್ತಲ್ವ. ಅಪ್ಪಿ ತಪ್ಪಿ ಇನ್ನೊಂದು ಮಗು ಆದರೆ ಒಂದು ಒಂದು ನಾಲ್ಕು ಆಗುತ್ತೆ. ಈಗಿನ ಕಾಲದಲ್ಲಿ ಎಲ್ಲರಿಗೂ ಒಂದೇ ಮಗು. ಹೀಗಾಗಿ ಈಗ ಒಂದು ಒಂದು ಮೂರೇ. ಆದರೆ ನಮ್ಮ ಕಾಲದಲ್ಲಿ ಒಂದು ಒಂದು ಸೇರಿದರೆ ಆರು, ಏಳು, ಎಂಟು, ಒಟ್ಟು ಮಕ್ಕಳು ಎಷ್ಟೋ ಅಷ್ಟು. ಅದಕ್ಕೇ ಆಗಿನ ಲೆಕ್ಕ ಒಂದು ಒಂದು ಆರು, ಏಳು, ಎಂಟು ಹತ್ತು ಅಂತ ಆಗುತ್ತಿತ್ತು. ಕೆಲವರಿಗೆ ಮಕ್ಕಳು ಆಗಲೇ ಇಲ್ಲ ಅಂದ್ಕೊ ಆಗ ಒಂದು ಒಂದು ಎರಡೇ. ಅಲ್ಲಿ ಗಣಿತದ ಲೆಕ್ಕ ಬಾಳಿನ ಲೆಕ್ಕ ಎರಡೂ ಒಂದೇ ಅಂತ ಆಯ್ತು. ''ಅಜ್ಜಿಯ ಕುತೂಹಲಕಾರಿ ಮಾತುಗಳನ್ನು ಕೇಳಿ ಮೊಮ್ಮಗ ಖುಷಿಗೊಂಡ.'' ಅಜ್ಜಿ ಇನ್ನೂ ಏನಾದರೂ ಹೇಳಜ್ಜೀ ಅಂದ.

ಮೊಮ್ಮಗನ ಕುತೂಹಲ ತಣಿಸೋಕೆ ಅಜ್ಜಿ ನಗುತ್ತಾ ''ಇಲ್ಲಿ ಕೇಳು. ಮನುಷ್ಯನ ಜೀವನಕ್ಕೆ ಅನ್ವಯ ಆಗೊ ಹಾಗೆ ಒಂದು ಪದ್ಯ ಹೇಳೋರು. ಅದು ಈಗಿನ ಕಾಲದ ಹುಡುಗರಿಗೆ ಗೊತ್ತೇ ಇಲ್ಲ. ಏನು ಗೊತ್ತಾ. ಏರು ಹೊತ್ತು ನಾಗಾಲಿ, ನಡು ಹೊತ್ತು ಇಗ್ಗಾಲಿ, ಇಳಿ ಹೊತ್ತು ಮೂಗಾಲಿ ಇದು ಏನು ಹೇಳಪ್ಪಾ'' ಅಂತ ಕೇಳಿದಳು. ಮೊಮ್ಮಗ ಅಜ್ಜಿಯ ಗುಳಿಬಿದ್ದ ಕೆನ್ನೆ ಸವರಿ ''ನೀನು ಆಗಲೇ ಹೇಳಿದ್ಯಲ್ಲ ನಮಗೆ ಏನೂ ಗೊತ್ತಿಲ್ಲ ಅಂತ ನೀನೇ ಹೇಳಜ್ಜಿ'' ಅಂದ. ಅಜ್ಜಿ ನಗುತ್ತ ''ಏರು ಹೊತ್ತು ಎಂದರೆ ಬೆಳಗಿನ ಹೊತ್ತು ಅಂತ. ಮನುಷ್ಯನ ಜೀವನದ ಬೆಳಗಿನ ಹೊತ್ತು ಯಾವುದು ಹೇಳು, ಬಾಲ್ಯ, ಬಾಲ್ಯದಲ್ಲಿ ಮಗು ನಾಲ್ಕು ಕಾಲಿಂದ ನಡೆಯುತ್ತೆ. ಅದಕ್ಕೇ ಏರು ಹೊತ್ತು ನಾಗಾಲಿ. ಇನ್ನು ಮನುಷ್ಯನ ನಡು ಹೊತ್ತು ಅಂದರೆ ನಂತರದ ದಿನಗಳು. ಅದು ಏರು ಹೊತ್ತು. ಏರು ಹೊತ್ತು ಇಗ್ಗಾಲಿ ಅಂದರೆ ಏರು ಹೊತ್ತಿನಲ್ಲಿ ಮನುಷ್ಯ ಎರಡು ಕಾಲಿಂದ ನಡೆಯುತ್ತಾನೆ. ಮನುಷ್ಯನ ಇಳಿ ಹೊತ್ತು ಅಂದ್ರೆ ವೃದ್ಧಾಪ್ಯ. ಆಗ ಕೈಗೊಂದು ಕೋಲು ಬರುತ್ತೆ. ಅಲ್ಲಿ ಎರಡು ಕಾಲಿನ ಜೊತೆ ಒಂದು ಕೋಲು. ಅದು ಇಳಿ ಹೊತ್ತು ಮೂಗಾಲಿ'' ಅಂದಳು. ಮೊಮ್ಮಗ ಮತ್ತೆ ಅಜ್ಜಿಯ ಕೆನ್ನೆ ಸವರಿ ಚಪ್ಪಾಳೆ ತಟ್ಟಿದ.

ಅಜ್ಜಿ ಮೊಮ್ಮಗನಿಗೆ ತನ್ನ ಕೈ ಚೀಲದಲ್ಲಿದ್ದ ಕಲ್ಲು ಸಕ್ಕರೆ ಕೊಟ್ಟು ''ಬಾಯಿಗೆ ಹಾಕ್ಕೊ'' ಅಂದು ''ಇಲ್ನೋಡು, ನಮ್ಮ ಜೀವನದಲ್ಲಿ ಕೆಲವು ಅಂಕೆ ಸಂಖ್ಯೆಗಳು ಬಹಳ ಮಹತ್ವದ್ದಾಗಿರುತ್ತೆ. ಅದೇನೋ ಈಗೀಗ ಸಂಖ್ಯಾಶಾಸ್ತ್ರ ಅಂತ ಬೇರೆ ಷುರು ಹಚ್ಕೊಂಡಿದಾರೆ. ನಿನ್ನ ಹೆಸರಿನ ಅಕ್ಷರಗಳ ಒಟ್ಟು ಸಂಖ್ಯೆ ಇಷ್ಟೇ ಇರಬೇಕು. ಹೆಚ್ಚಿದ್ದರೆ ಕಷ್ಟ, ಕಮ್ಮಿ ಇದ್ದರೆ ನಷ್ಟ ಅಂತ ಅಪ್ಪ ಅಮ್ಮ ಇಟ್ಟ ಹೆಸರಿನ ಇನಿಷಿಯಲ್‌ನೇ ಬದಲು ಮಾಡ್ತಾರೆ. ಉದಾಹರಣೆಗೆ ನಾವೆಲ್ಲಾ ಮಾತಾಡುವಾಗ ಮನುಷ್ಯ ಬದುಕಿದ್ದರೆ ನಾಲ್ಕು ಜನಕ್ಕೆ ಸಹಾಯ ಆಗೋ ಹಾಗೆ ಬದುಕಬೇಕು ಎನ್ನುತ್ತಿದ್ದೆವು. ಯಾಕೆ ನಾಲ್ಕು, ಯಾಕೆ ಎಂಟಲ್ಲ ಎನ್ನೋ ಪ್ರಶ್ನೆ ಬಂದರೆ, ಕಡೆಗಾಲದಲ್ಲಿ ಚಟ್ಟ ಕಟ್ಟಿ ಹೊತ್ಕೊಂಡು ಹೋಗ್ತಾ ಇದ್ದಿದ್ದು ನಾಲ್ಕೇ ಜನ. ಯಾರಿಗೆ ನೀನು ಸಹಾಯ ಮಾಡಿರದಿದ್ದರೂ ನಾಲ್ಕು ಜನಕ್ಕಾದರೂ ಸಹಾಯ ಮಾಡಿದ್ದರೆ ಅವರು ನೀನು ಸತ್ತಾಗ ಬಂದು ಹೊತ್ಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡ್ತಾರೆ ಅಂತ.

ಇನ್ನು ನಾಲ್ಕರ ಜೊತೆಗೆ ಮೂರು ಏಳು ಇವು ಕೂಡಾ ಬಹಳ ಮುಖ್ಯ. ನೋಡು ಈಗ ನೀನು ಚಿಕ್ಕವನು ನಾಳೆ ದೊಡ್ಡೋನಾದ ಮೇಲೆ ಮದುವೆ ಆಗುತ್ತೆ. ಆಗ ನೀನು ನಿನ್ನ ಹೆಂಡತಿಗೆ ಹಾಕೋದು ಮೂರು ಗಂಟು ಅದೂ ನಾಲ್ಕು ಜನರ ಸಮ್ಮುಖದಲ್ಲಿ, ನಾಲ್ಕು ಜನ

ಯಾರು ಎಂದರೆ ನಿಮ್ಮಪ್ಪ ಅಮ್ಮ, ಹುಡುಗಿ ಅಪ್ಪ ಅಮ್ಮ. ಆರೀತಿ ಈ ಮೂರೂ ಮತ್ತು ನಾಲ್ಕು ಸೇರಿ ಏಳು ಆಗುತ್ತಲ್ವ. ಅದೇನು ಅಂದ್ರೆ ನೀನು ನಿನ್ನ ಹೆಂಡಿತಿ ಕೈ ಹಿಡ್ಕೊಂಡು ನಡೆಸೋದು ಏಳು ಹೆಜ್ಜೆ ಸಪ್ತಪದಿ. ಅಲ್ಲಿಗೆ ನಾಲ್ಕು ಮೂರು ಏಳು ಆಯ್ತಲ್ವಾ ಇದೇ ಮಹತ್ವ ನೋಡು'' ಅಂದಳು.

ಮೊಮ್ಮಗನಿಗೆ ಅಜ್ಜಿಯಿಂದ ಒಂದು ದೊಡ್ಡ ಪ್ರಪಂಚವೇ ತೆರೆದುಕೊಂಡಂತಾಯಿತು. ಅಜ್ಜಿ ಮೊಮ್ಮಗನ ಬೆನ್ನು ಸವರಿ ''ನಿನಗೆಷ್ಟು ಕಣ್ಣಿದೆ ಅಂತ ಕೇಳಿದಳು. ಮೊಮ್ಮಗ ಇದೇನಜ್ಜಿ ಹೀಗೆ ಕೇಳಿತೀಯ. ಎಲ್ಲರಿಗೂ ಇರೋ ಹಾಗೆ ನನಗೂ ಎರಡೇ ಕಣ್ಣು ತಾನೇ'' ಅಂದ. ''ಸರಿ ಎರಡು ಕಣ್ಣಿದೆ ಆದರೆ ಎರಡೂ ಕಣ್ಣಿಂದ ನೀನು ಬೇರೆ ಬೇರೆ ದೃಶ್ಯಗಳನ್ನು ನೋಡ್ತೀಯಾ'' ಅಂತ ಕೇಳಿದಾಗ ಮೊಮ್ಮಗ ತಬ್ಬಿಬ್ಬು. ''ಇಲ್ಲ ಅಜ್ಜಿ, ಕಣ್ಣು ಎರಡು ಇದ್ದರೂ ನೋಟ, ದೃಶ್ಯ ಒಂದೇ'' ಅಂದ. ಅಜ್ಜಿ ನಗುತ್ತಾ, ''ನೋಡು ಇದೇ ಭಗವಂತನ ಡಿಟಿಜಲ್ ಯುಕ್ತಿ. ಕಣ್ಣು ಎರಡು ನೋಟ ಒಂದೇ, ಕಿವಿ ಎರಡು ಶಬ್ದ ಒಂದೇ. ಮೂಗಿನ ಹೊಳ್ಳೆ ಎರಡು ಆದರೆ ಘಮ ಒಂದೇ. ಎಲ್ಲಾ ಎರಡೆರಡು ಕೊಟ್ಟ ಭಗವಂತ ನಾಲಿಗೇನ ಯಾಕೆ ಒಂದೇ ಕೊಟ್ಟ.'' ಅಂತ ಕೇಳಿದಳು. ಮೊಮ್ಮಗನ ಬಳಿ ಉತ್ತರ ಇರಲಿಲ್ಲ. ಅಜ್ಜಿ ''ನೋಡು ನಾವು ಯಾವಾಗಲೂ ಆಡಿದಂತೆ ನಡ್ಕೊಬೇಕು, ನಡ್ಕೊಂಡಂತೆ ಆಡಬೇಕು. ಅದಿಕ್ಕೇ ಒಂದು ನಾಲಿಗೆ ಅನ್ನೋದು. ಇವತ್ತು ಆಡಿದ ಮಾತನ್ನು ಹಾಗೇ ಉಳಿಸಿಕೊಳ್ಳಬೇಕು. ಇವತ್ತೊಂದು ಮಾತು ನಾಳೆಗೊಂದು ಮಾತು ಅಂದರೆ ಅವನಿಗೆ ನಾಲಿಗೆ ಒಂದಿಲ್ಲ ಎರಡು ಅಂತ ಬಯ್ತಾರೆ ಗೊತ್ತಾ'' ಅಂದಳು.

ಮೊಮ್ಮಗ ಒಳಗೆ ಹೋಗಿ ಡಬ್ಬ ತೆಗೆದು ಒಂದಿಷ್ಟು ಕೋಡುಬಳೆ ತಗೊಂಡು ಬಂದು ಅಜ್ಜಿಯ ಮುಂದಿಟ್ಟು ''ಅಜ್ಜಿ ನಿನ್ನ ಡಿಟಿಜಲ್ ಪ್ರಪಂಚದ ಬಗ್ಗೆ ಇನ್ನಷ್ಟು ಹೇಳಜ್ಜೀ'' ಅಂದ. ಅಜ್ಜಿ ಕೋಡುಬಳೆ ಕೈಯಲ್ಲಿ ಹಿಡಿದು ಅದುಮಿದಾಗ ಅದು ನಾಲ್ಕು ತುಂಡಾಯಿತು. ಒಂದು ತುಂಡು ಬಾಯಲ್ಲಿ ಹಾಕ್ಕೊಂಡು ''ಹೇಳೋಕೆ ಹೊರಟರೆ ಕೊನೆ ಮೊದಲಿರೋಲ್ಲ ಗೊತ್ತಾ. ಹೋಗ್ತಾ ಹೋಗ್ತಾ ಎಲ್ಲಾ ನಿಂಗೇ ಗೊತ್ತಾಗುತ್ತೆ. ಇಷ್ಟು ಸಾಕು, ಹೋಗು ಓದ್ಕೊ'' ಅಂದಳು. ಮೊಮ್ಮಗ ಅಜ್ಜಿ ಜೊತೆ ಕೂತು ಕೋಡುಬಳೆ ತಿಂದು ಅಜ್ಜಿ ಹೇಳಿದ್ದನ್ನೆಲ್ಲಾ ಮೆಲುಕು ಹಾಕುತ್ತಾ ಹೊರಟ.

❑

---



ಡಾಕ್ಟ್ರೇ, ಗಂಡೋ, ಹೆಣ್ಣೋ ಬೇಗ ಹೇಳಿ
ಫೇಸ್ ಬುಕ್ ನಲ್ಲಿ ಅಪ್‌ಲೋಡ್ ಮಾಡ್ಬೇಕು!

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

ವ್ಯಂಗ್ಯಚಿತ್ರಕಾರರು ಸೆಲೂನಿಗೆ ಹೋದರೂ ಅವರ ತಲೆ ಸುಮ್ಮನಿರುವುದಿಲ್ಲ ಎಂಬುದನ್ನು ಸುಬ್ರಮಣ್ಯ, ಪ್ರಸನ್ನ, ಕೆ.ಆರ್.ಸ್ವಾಮಿ ಮತ್ತು ವಿ.ಗೋಪಾಲ್ ಸಾಬೀತು ಪಡಿಸಿ ಬಹಳ ವರ್ಷಗಳಾಗಿವೆ.




ತುಂಬಾ ಚಳಿ...ಈ ತೆಳು ಬಟ್ಟೆಗೆ ಬದಲಾಗಿ ದಪ್ಪ ರಗ್ಗು ಇಲ್ವೇನಯ್ಯಾ?







ನಮಗೆಲ್ಲಾ ಇದ್ದಕಿದ್ದ ಹಾಗೆ ಉದ್ಯೋಗಕ್ಕೆ ಕರೆ ಬಂದುಬಿಡಬಹುದು!



ನೀವು ಹೀಗೆ ಕ್ಯಾಲೆಂಡರನ್ನೇ ನೋಡುತ್ತಾ ಕೂತ್ರೆ ನಾನು ಹೇಗೆ ಕಟ್ಟಿಂಗ್ ಮಾಡ್ಲಿ ?

# ಪೇಪರ್ ಆಫೀಸ್ ಪೇಪರ್ ಲೆಸ್ ಆದಾಗ

**- ಎಂ.ಕೆ. ಭಾಸ್ಕರ ರಾವ್**

ನೀವೇನಂತೀರೋ ಗೊತ್ತಿಲ್ಲ, ಪೇಪರ್‌ಲೆಸ್ ಪೇಪರ್ ಆಫೀಸು ಎನ್ನುವುದೇ ನನ್ನ ಮಟ್ಟಿಗೆ ಅರ್ಥವಾಗದ ಪದಪುಂಜ. ಪೇಪರ್ ಆಫೀಸೊಂದು ಅದು ತಾನೇ ಹೇಗೆ ಪೇಪರ್ ಲೆಸ್ ಆಗಲು ಸಾಧ್ಯ? ಮಂಡೆ ಬಿಸಿಯಾಗುವುದನ್ನು ತಪ್ಪಿಸಿಕೊಳ್ಳಲು ತಲೆ ಕೆರೆದುಕೊಳ್ಳಬೇಕಾದ ಸನ್ನಿವೇಶ. ಹೋಟೆಲಿಗೆ ಹೋಗಿ ಶುಗರ್ ಲೆಸ್ ಕಾಫಿ ಎಂದರೆ ಯಾವ ಮಾಣಿಯೂ ಕಡಿಮೆ ಸಕ್ಕರೆ ಹಾಕಿ ಕೊಡೋಲ್ವಲ್ಲ. ಹೋಟೆಲಿನವರ ಮಟ್ಟಿಗೆ ಶುಗರ್‌ಲೆಸ್ ಎಂದರೆ ನೋಶುಗರ್ ಎಂದೇ ಅರ್ಥ.

**ಕಂಪ್ಯೂಟರ್ ಬಂದ ಮೇಲೆ ಪೆನ್ನಿಗೇನು ಕೆಲಸ ಪೇಪರ್ ಆಫೀಸಿನಲ್ಲಿ?**

ಪೇಪರ್ ಆಫೀಸು, ಹೋಟೆಲ್ ಅಲ್ವಲ್ರೀ. ಹಾಗಾಗಿ ತಲೆ ತುರಿಸಿಕೊಳ್ಳುವವರೂ ಇದನ್ನು ನೋ ಪೇಪರ್ ಆಫೀಸು ಎಂದು ಕಲ್ಪಿಸಿಕೊಳ್ಳದೆ ಲೆಸ್ ಪೇಪರ್ ಆಫೀಸು ಎಂದು ವ್ಯಾಖ್ಯಾನಿಸಿ ಸಮಾಧಾನಪಟ್ಟುಕೊಳ್ಳುತ್ತಾರೋ ಏನೋ.

''ನೋಡ್ರಪ್ಪಾ , ಟೈಪಿಂಗ್ ಬಾರದವರು ಬೇಗ ಟೈಪಿಂಗ್ ಕಲಿತುಕೊಳ್ಳಿ. ಸ್ವಲ್ಪೇ ದಿವಸಗಳಲ್ಲಿ ಆಫೀಸು ಪೇಪರ್ ಲೆಸ್ ಆಗ್ತದೆ. ಬರೆಯುವ ಕಾಗದವೂ ಇರೋಲ್ಲ, ಬರೆದು ಕೊಡುವ ಅವಕಾಶವೂ ಇರೋಲ್ಲ'' ಎಂದು ಸಂಪಾದಕರು ಹೇಳುತ್ತಿದ್ದುದು ನಿತ್ಯ ರಾಗವಾಗಿದ್ದ ನನ್ನಂಥವರಿಗೆ ಅದು ಹೇಗೆ ತಾನೇ ಪೇಪರ್ ಆಫೀಸು ಪೇಪರ್ ಲೆಸ್ ಆಗ್ತದೆ ಎಂಬುದು ಅರ್ಥವೇ ಆಗದೆ ತೊಳಸಂಬಟ್ಟೆ ಆಗಿತ್ತು.

ಕೆಲಸ ಮಾಡುವ ವರದಿಗಾರ, ಉಪ ಸಂಪಾದಕರಿಗಿಂತ ಪೇಪರ್ ಲೆಸ್ ಕಚೇರಿ ನೋಡಲು ಸಂಪಾದಕರೇ ಉತ್ಸುಕರಾಗಿದ್ದರು. ''ಅವರು ಎಂದಾದರೂ ಬರೆದುದನ್ನು ನೋಡಿದ್ದೀರಾ, ಅವರು ಹಾಗೇ ಹೇಳೋದು, ಮ್ಯಾನೇಜ್‌ಮೆಂಟ್ ಯಾವಾಗಲೂ ಸೈ, ಅದು ದುಡಿಯುವ ವರ್ಗದ ವಿರೋಧಿ, ನಿಮ್ಮ ಸಂಪಾದಕರು ಯಾವಾಗಲೂ ಅವರ ಸೈಡ್'' ಎಂದು ಯೂನಿಯನ್ ಲೀಡರ್ (ಯೂಲೀ= ಇವನೇನೂ ಬ್ರೂಸ್‌ಲೀ ಅಣ್ಣ ಯಾ ತಮ್ಮ ಅಲ್ಲ ಬಿಡ್ರಿ) ಸಿಕ್ಕ ಅವಕಾಶದಲ್ಲೇ ಚಿಕ್ಕ ಲಾಲ್‌ಬಾಗ್ ಭಾಷಣ ಬಿಗಿಯುತ್ತಿದ್ದ. ಇದನ್ನು ಕೇಳಿಸಿಕೊಂಡಾಗ ಇದ್ದರೂ ಇರಬಹುದೋ ಏನೋ ಎಂದೆನಿಸಿಬಿಡುತ್ತಿತ್ತು.

ಒಂದು ದಿವಸ ಕಚೇರಿಯಲ್ಲಿ ಯಂತ್ರಗಳ ಭರ್ಜರಿ ಮೆರವಣಿಗೆ ಶುರುವಾಯಿತು. ಟರ್ಮಿನೇಟರ್ ಸಿನಿಮಾದಲ್ಲಿ ಅರ್ನಾಲ್ಡ್ ಸ್ವಾಷ್ನೆಗ್ಗರ್ ಯಂತ್ರ ಮಾನವನಾಗಿ ದಾಂಗುಡಿ ಇಡುತ್ತಾನಲ್ಲ ಹಾಗೇ ಒಂದಾದ ಬಳಿಕ ಒಂದರಂತೆ ಪ್ಯಾಕ್ ಓಪನ್ ಮಾಡಿ, ಕಂಪ್ಯೂಟರನ್ನು ಸಾಲು ಸಾಲಾಗಿ ಜೋಡಿಸಿಟ್ಟಿದ್ದನ್ನು ನೋಡುತ್ತ ನಿಂತಾಗ ಇನ್ನು ಈ ಪೆನ್ನಿಗೇನು ಕೆಲಸ ಎನ್ನುವುದು ಥಟ್ಟನೆ ಎದುರಾದ ಸಮಸ್ಯೆ.

ಟೇಬಲುಗಳಿಗೆ ಕಂಪ್ಯೂಟರ್ ಜೋಡಿಸಿ, ಸಂಪಾದಕರ ಕೊಠಡಿಯಲ್ಲಿ ಅವರು ಎಂದೆಂದೂ ಬಳಸದ ಕಂಪ್ಯೂಟರ್‌ಗೆ ಹಾರದ ಅಲಂಕಾರವೂ ಆಯಿತು. ಸಾಮಾನ್ಯ

ಪತ್ರಕರ್ತರು ಬಳಸುವುದಕ್ಕೆಲ್ಲ ಅರಿಶಿನ-ಕುಂಕುಮ ಹಚ್ಚಿ ಇಡೀ ಆಫೀಸೇ ರಂಗ್ ರಂಗ್ ಆಗುವಂತೆ ಮಾಡಿದ ಆ ದಿವಸ, ಆ ಕ್ಷಣ ಇನ್ನೂ ನೆನಪಿನಲ್ಲಿದೆ. ಪೂಜೆಯ ಕೊನೆ ಘಟ್ಟ ಮಂಗಳಾರತಿ. ಅದು ಆಗಿದ್ದು ಮಾತ್ರ ಕಂಪ್ಯೂಟರುಗಳಿಗಲ್ಲ, ಅವುಗಳನ್ನು ಬಳಸಲಾಗದ ಪತ್ರಕರ್ತರಿಗೆ. ಕಂಪ್ಯೂಟರೀಕರಣ ಇಷ್ಟೆಲ್ಲ ಬೇಗ ಆಗುವುದಿಲ್ಲ ಎನ್ನುತ್ತಿದ್ದ ಯೂಲೀ ಮಾತು ಕೇಳಿ ಬೇಸ್ತು ಹೋಗಿದ್ದ ನಮಗೆಲ್ಲರಿಗೂ ಉಗುಳಾರ್ಚನೆ ಜೊತೆಗೆ ಸಖತ್ ಮಂಗಳಾರತಿ ಆಯಿತು. ಆ ಸಮಯದಲ್ಲಿ ಧೂರ್ತ ಯೂಲೀ ಮಾತ್ರ ಗಾಯಬ್.

ಬೇರೆ ಮಾರ್ಗವೇ ಇರಲಿಲ್ಲ. ಇಂಗ್ಲಿಷ್‌ನ ಯಾವ ಅಕ್ಷರ ಒತ್ತಿದರೆ ಕನ್ನಡದ ಯಾವ ಅಕ್ಷರ ಮೂಡುತ್ತದೆಂಬುದನ್ನು ತಿಳಿಸುವ ಪೇಪರ್ ಪ್ರಿಂಟೌಟನ್ನು ನಮಗೆಲ್ಲ ಕೊಟ್ಟು ದಿನವೂ ಕಚೇರಿ ಸಮಯಕ್ಕೆ ಒಂದು ತಾಸು ಮೊದಲೇ ಬಂದು ಸ್ವಯಂ ತರಬೇತಿ ಮಾಡಿಕೊಳ್ಳುವಂತೆ ಸಂಪಾದಕರು ತಾಕೀತು ಮಾಡಿದರು. ಪ್ರಿಂಟೌಟ್‌ಗೆ ಪೇಪರ್ ಬಳಸಿದ್ದೇಕೆಂದು ಕೇಳುವ ಚಪಲ ಮೂಡಿತಾದರೂ ಅದು ತುಟಿಯಿಂದಾಚೆಗೆ ಬರಲೇ ಇಲ್ಲ. ಆ ಮೇಲೆ ಎಲ್ಲರೂ ಕ್ಯಾಂಟೀನಿನಲ್ಲಿ ಕಲೆತಾಗ ಅದನ್ನು ಸಂಪಾದಕರಲ್ಲಿ ಕೇಳಿ ಅವರ ಕಾಲೆಳೆಯಬೇಕಾಗಿತ್ತೆಂದು ಅಲವತ್ತುಕೊಂಡರು. ಚಹಾಕ್ಕೆಂದು ಸಂಪಾದಕರು ಅಲ್ಲಿಗೇ ಬರುವುದರೊಂದಿಗೆ ಆ ಸೀನು ಕೂಡಾ ಅಲ್ಲಿಗೇ ಬರಖಾಸ್ತಾಯಿತು.

ಅಲ್ಲಿಂದ ಮುಂದಕ್ಕೆ ಕೈಬೆರಳ ನೋವಿನ ಸರದಿ. ಕಚೇರಿಯೊಳಗೆ ಬರುವಾಗ ಬೆರಳುಜ್ಜುತ್ತ ಬರುವವರೇನು...? ಬೆರಳ ನೆಟಿಗೆಯನ್ನು ಮುರಿಯುತ್ತ ಬರುವವರೇನು...? ಮುಷ್ಟಿ ಬಿಗಿ ಹಿಡಿಯುತ್ತ ಬಿಡುತ್ತ ಯೋಗಭಂಗಿಯಲ್ಲಿ ಬರುವವರೇನು...? ಹಿಮಾಲಯವನ್ನೇ ಹೊತ್ತು ತಂದವರಂತೆ ಎರಡೂ ಕೈಗಳನ್ನೂ ಸೊಂಟದ ಮೇಲಿರಿಸಿಕೊಂಡು ಉಸ್ಸಪ್ಪಾ ಎನ್ನುವವರೇನು...? ತರಾವರಿ ದೃಶ್ಯ. ಒಬ್ಬರಂತೂ ಕೈಗೇ ಸಣ್ಣ ಪೆಟ್ಟಾದವರು ಹಾಕಿಕೊಳ್ಳುತ್ತಾರಲ್ಲ ಆ ಕತ್ತಿನ ಮಾಲೆ ಧರಸಿ ಬಂದು ಟೈಪಿಂಗ್ ಕಿರಿಕಿರಿಯನ್ನು ತಪ್ಪಿಸಿಕೊಂಡರು.

ಟಾಯ್ಲೆಟ್‌ಗೆ ಹೋಗುವಾಗ ಪೇಪರ್ ಹಿಡಿದು ಹೋಗುತ್ತಿದ್ದವರಿಗೆ ಮೊದಲ ಆಘಾತವಾಯಿತು. ಜೀವಮಾನದಲ್ಲಿ ಎಂದೂ ಕರ್ಚೀಫ್ ಕೊಳ್ಳದೆ ಕಾಲ ತಳ್ಳಿದ್ದ ಅವರಿಗೆ ಟಾಯ್ಲೆಟ್‌ಗೆ ಹೋಗುವುದೇ ತ್ರಾಸಾಯಿತು. ಬಡ್ಡಿ ವ್ಯವಹಾರದ ಕೆಲವು ಪತ್ರಕರ್ತರಿಗೆ ಸಾಲದ ಹಣ ಕೊಟ್ಟ, ತಿಂಗಳ ಕಂತು ಪಾವತಿಸಿಕೊಂಡ ಲೆಕ್ಕ ಬರೆದುಕೊಳ್ಳುವುದಕ್ಕೆ ಪುಕಟ್ ರದ್ದಿ ಕಾಗದ ಸಿಗದೆ ವಹಿವಾಟು ತ್ರಾಸಿಗೆ ಸಿಕ್ಕು ಹಾಕಿಕೊಂಡಿತು. ದೊಡ್ಡ ಮೊತ್ತದ ನೋಟುಗಳ ಅಮಾನ್ಯೀಕರಣದಿಂದ ವಹಿವಾಟು ಉಲ್ಟಾಪಲ್ಟಾ ಆದಂತೆ ನಮ್ಮ ಕಚೇರಿಯಲ್ಲೂ ಆಯಿತು.

ಆದರೆ ನೋಟು ಅಮಾನ್ಯೀಕರಣದ ನಂತರ ವಾಟ್ಸ್ ಆಪ್‌ನಲ್ಲಿ ಹರಿದಾಡಿದ ವೀಡಿಯೋವೊಂದು ''ಯುರೇಕಾ'' ಎನ್ನುವಂತೆ ಮಾಡಿತು. ಆ ವೀಡಿಯೋವನ್ನು ಗಮನಿಸದ ಸಜ್ಜನರಿಗಾಗಿ ಅದರ ಪುಟ್ಟ ವಿವರಣೆ ಇದು. ಸುಂದರಿಯೊಬ್ಬಳು ಹಾಸಿಗೆ ಹಿಡಿದು ಮಲಗಿದ್ದಾಳೆ. ಜ್ವರ ಬಂದಿರಬಹುದು. ಹಾಗಲ್ಲವಾದರೆ ಜಗತ್ತಿನ ಸುಂದರಿಯರು ಮಲಗುವುದಿಲ್ಲ. ಜ್ವರ, ಹೌದು ಊಹೆ ಮಾಡಬೇಕಷ್ಟೆ. ಚಿತ್ರವನ್ನು ಮುಟ್ಟಿದರೂ ಶರೀರದ

ತಾಪ ತಟ್ಟುವುದಿಲ್ಲವಲ್ಲ, ಹಾಗಾಗಿ! ಒಂದಾದ ಬಳಿಕ ಒಂದರಂತೆ ಸೀನು ಅಂದರೆ ಆಕ್ಷೀ ಅವಳಿಗೆ ಬರುತ್ತದೆ. ಮೂಗು ಕೆಂಪಾಗಿ ಬಳಬಳ ಸುರಿಯಲಾರಂಭವಾಗುತ್ತದೆ. ಮಲಗಿದಲ್ಲಿಂದಲೇ ಆಕೆಯ ಕೈ ಬೆಡ್ ಪಕ್ಕದಲ್ಲಿರುವ ಟಿಶ್ಯೂ ಬಾಕ್ಸ್‌ನಿಂದ ಪೇಪರನ್ನು ಎಳೆಯುತ್ತದೆ. ಅದರಿಂದ ಮೂಗನ್ನೊರೆಸಿ ಪಕ್ಕದ ಕಬುಗೆ ಹಾಕುತ್ತಾಳೆ. ಅರೇ ಅದೆಂಥ ಟಿಶ್ಯೂ ಪೇಪರು...! ನಮ್ಮ ಪ್ರೈಮ್ ಮಿನಿಸ್ಟರ್ ಮೋದಿ ನವೆಂಬರ್ ಎಂಟರ ಪ್ರೈಂ ಟೈಮಿನಲ್ಲಿ ರದ್ದು ಮಾಡಿದರಲ್ಲ ಆ ಸಾವಿರದ ಮುಖ ಬೆಲೆಯ ಗರಿಗರಿ ನೋಟುಗಳವು. ಇನ್ಯಾವುದಕ್ಕೆ ಬರದೇ ಇದ್ದರೂ ಆ ನೋಟುಗಳು ಮೂಗನ್ನೋ ಮತ್ತೊಂದನ್ನೋ ಒರೆಸಿ ಬಿಸಾಕುವುದಕ್ಕೆ ಅನುಕೂಲವಾದವಲ್ಲ, ಮೋದಿ ನೀತಿ ಸಾರ್ಥಕವಾಯಿತು.

ಆದರೆ ಪೇಪರ್‌ಲೆಸ್ ಪೇಪರ್ ಆಫೀಸಿನಲ್ಲಿ ಅಂಥ ಅನುಕೂಲವೂ ಸಿಗದಂತಾಯಿತು. ಕಾಗದದ ಮೇಲೆ ಪ್ರಿಂಟ್ ಆಗಿ ಮನೆಗೆ ಬಂದು ಬೀಳುವ ಪೇಪರನ್ನೇ ಸುತ್ತಿ ಸುರಳಿ ಮಾಡಿಕೊಂಡು ಒಯ್ಯಬೇಕಾದ ಘೋರ ದೃಶ್ಯ ಅಣಕಿಸುತ್ತಿರುವಾಗಲೇ ನೀನಾರಿಗಾದೆಯೋ ಎಲೆ ಮಾನವಾ ಪದ್ಯ ನೆನಪಾಯಿತು.

❑



# ಕಾರ್ಡೇ ಕಾಂಚಾಣ

**- ಆನಂದ**

**ಈ** ಡಿಜಿಟಲ್ ಯುಗದಲ್ಲಿ 'ಒಂದಾನೊಂದು ಕಾಲದಲ್ಲಿ..' ಎಂದು ಪ್ರಾರಂಭಿಸುವಂತಿಲ್ಲ. ಆದರೂ ಸಹ ಒಂದಾನೊಂದು ಕಾಲದಲ್ಲಿ ಜೇಬಿನಲ್ಲಿ ದುಡ್ಡಿಟ್ಟುಕೊಂಡು ಚೀಲದ ತುಂಬ ಸಾಮಾನು ತರಬಹುದಿತ್ತು, ಈಗ ಪರಿಸ್ಥಿತಿ ಬದಲಾಗಿದೆ. ಈಗ ಜೇಬಿನಲ್ಲಿ ದುಡ್ಡು ಇಡುವುದೂ ಬೇಡ. ಪ್ಲಾಸ್ಟಿಕ್ ಕಾರ್ಡಿದ್ದರೆ ಸಾಕು ಬೇಕಿದ್ದು, ಬೇಡವಾದ್ದು, ಕಂಡದ್ದು, ಅಷ್ಟೇಕೆ ಜಗತ್ತನ್ನೇ ಕೊಂಡು ತರಬಹುದು. ಖಾತೆಯಲ್ಲಿ ಹಣ ಇಲ್ಲದಿದ್ದರೂ ಪರವಾಗಿಲ್ಲ ಕಾರ್ಡ್ ಇದ್ದರೆ ಉದ್ರಿ ಸೌಲಭ್ಯ ಇದೆ. ದುಡ್ಡಿದ್ದವನೇ ದೊಡ್ಡಪ್ಪ ಎಂದಂತೆ ಈಗ ಕಾರ್ಡಿದ್ದವನೇ ದೊಡ್ಡಪ್ಪ. ಖಡ್ಗಕ್ಕಿಂತ ಲೇಖನಿ - ಈಗ ಕೀ ಬೋರ್ಡ್ - ಶಕ್ತಿಶಾಲಿ ಎಂದಂತೆ ಈಗ ಕ್ಯಾಷ್‌ಗಿಂತ ಕಾರ್ಡೇ ವಾಸಿ. ಕಾರ್ಡಿದ್ದರೆ ಚಿಲ್ಲರೆಗಾಗಿ ತಡಕಾಡಬೇಕಿಲ್ಲ. ಎಣಿಸುವ ಗೋಜೂ ಇಲ್ಲ. ಉಜ್ಜಿದರೆ ಸಾಕು ವ್ಯವಹಾರ ಚುಕ್ತ.

**ದುಡ್ಡಿದ್ದವನೇ ದೊಡ್ಡಪ್ಪ ಎಂದಂತೆ ಈಗ ಕಾರ್ಡಿದ್ದವನೇ ದೊಡ್ಡಪ್ಪ**

ಮುಂದಾನೊಂದು ಕಾಲದಲ್ಲಿ - ಅಂದರೆ ಆದಷ್ಟು ಬೇಗ - ಈ ಕಾರ್ಡೂ ಬೇಡವಾಗುತ್ತದಂತೆ, ಹಣದ ವ್ಯವಹಾರಕ್ಕೆ. ನಿಮ್ಮ ಮೊಬೈಲೇ ನಿಮ್ಮ ಪರ್ಸ್, ನಿಮ್ಮ ಬ್ಯಾಂಕ್. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಕೋಟಿ ರೂಗಳಿಗೆ ಸಮ ಎಂದು ಒಂದಾನೊಂದು ಕಾಲದಲ್ಲಿ ಹೇಳಿದ ಕವಿ ಈ ಡಿಜಿಟಲ್ ಯುಗದಲ್ಲಿ ಕಾವ್ಯ ರಚನೆ ಮಾಡಿದ್ದರೆ ಮೊಬೈಲೊಂದು ಜೇಬಿನಲ್ಲಿದ್ದರೆ ಆ ಹೆಂಡತಿಯೂ ಬೇಡ ಎಂದು ಹೇಳುತ್ತಿದ್ದರೇನೋ. ಕ್ಯಾಷ್‌ಗೆ ನಮೋ ಹೇಳಿ ಡಿಜಿಟಲ್ ವ್ಯವಹಾರಕ್ಕೆ ನಾಂದಿ ಹೇಳಿ ಎಂದು ನಮೋಜಿ ಸಾರುತ್ತಿದ್ದರೆ ರಾಗಾ ಇದಕ್ಕೆ ಅಪಸ್ವರದ ರಾಗ ಎತ್ತಿದ್ದಾರೆ. ಇರಲಿ. ಆದರೆ ಈಗೀಗ ಫುಟ್‌ಪಾತ್ ಅಂಗಡಿಯವನೂ ಸಹ ಡಿಜಿಟಲ್ ವ್ಯವಹಾರಕ್ಕೆ ಇಳಿದಿದ್ದಾನೆ. ಮೊಬೈಲ್ ಮೂಲಕ ಹಣ ಪಡೆಯುವ ಆಟೋದವನಿಗೆ ಲಾಸ್. ಏಕೆಂದರೆ ಅವನ ಬಳಿ ಈ ಹಿಂದೆ 3, 4, 5 ರೂಪಾಯಿ ಚಿಲ್ಲರೆಯೇ ಇರುತ್ತಿರಲಿಲ್ಲ. ಜೇಬಿನಲ್ಲಿ ಕೈ ಆಡಿಸುವ ನಾಟಕ ಆಡಿ, ಚಿಲ್ಲರೆ ಇಲ್ಲ ಎಂದು ಹೇಳಿ 56 ಆಗಿದ್ದರೆ 60 ರೂ ವಸೂಲು ಮಾಡಿ ಹೊರಟೇ ಹೋಗುತ್ತಿದ್ದ. ತರಕಾರಿಯವ, ಟ್ಯಾಕ್ಸಿಯವ, ಅಂಗಡಿಯವ ಹೀಗೆ ಎಲ್ಲರೂ ನಿಧಾನವಾಗಿಯಾದರೂ ಡಿಜಿಟಲ್ ಕ್ಯಾಷ್ ವ್ಯವಹಾರಕ್ಕೆ ಪರಿವರ್ತನೆಗೊಳ್ಳುತ್ತಿದ್ದಾರೆ. ಇದೇ ಮುಂದುವರೆದರೆ ನಾಳೆ ಚುನಾವಣೆ ಸಮಯದಲ್ಲಿ ಕಾಸು ಕೊಟ್ಟು ಓಟು ಕೊಳ್ಳುವವರು, ಕಾಸಿಗಾಗಿ ಓಟು ಮಾರಿಕೊಳ್ಳುವವರೂ ಸಹ ಡಿಜಿಟಲ್ ವ್ಯವಹಾರಕ್ಕೆ ಇಳಿಯಬಹುದು. ನಿನ್ನ ಅಕೌಂಟಿಗೆ 1000 ಹಾಕಿದ್ದೇನೆ ನಮ್ಮ ಗುರುತಿಗೇ ಓಟು ಹಾಕುವುದನ್ನು ಮರೆಯಬೇಡ ಎಂದು ಕಮಲ, ಕೈ, ತೆನೆ ಹೊತ್ತ ಮಹಿಳೆ, ಆನೆ, ಸೈಕಲ್‌ಗಳು ಪ್ರಲಾಪಿಸಬಹುದು. ಅದರಂತೆ ಓಟು ಮಾರಿಕೊಳ್ಳುವವನು ನನ್ನ ಅಕೌಂಟಿಗೆ ದುಡ್ಡು ಹಾಕಿದರೆ ನಿನ್ನ ಗುರುತಿಗೆ ಓಟು ಹಾಕುತ್ತೇನೆ ಎಂದು ಹೇಳಬಹುದು.


ಅಷ್ಟೇಕೆ, ಮುಂದಾನೊಂದು ಕಾಲದಲ್ಲಿ ಗೌರಿ, ಗಣೇಶ, ಮದುವೆ, ಮುಂಜಿ, ಗೃಹ ಪ್ರವೇಶಕ್ಕೆ ಬರುವ ಪುರೋಹಿತರು ತಮ್ಮ ಸಂಭಾವನೆಯನ್ನು ಇ-ಪೇಮೆಂಟ್ ಮೂಲಕ ಪಡೆಯಲು ಸಾಧ್ಯ. ಈಗಾಗಲೇ ಶವ ಸಂಸ್ಕಾರಕ್ಕೆ ಆನ್‌ಲೈನ್ ಮೂಲಕ ವ್ಯವಸ್ಥೆ ಮಾಡಲು ಸಾಧ್ಯವಂತೆ. ಸಾಯುತ್ತಿರುವವನು ಹೀಗೆ ತನ್ನ ಸ್ಲಾಟ್ ಮೊದಲೇ ಬುಕ್ ಮಾಡಿ ಇಹಲೋಕ ತ್ಯಜಿಸಲು ಸಾಧ್ಯವಿಲ್ಲ ನಿಜ ಆದರೆ ಸತ್ತವನನ್ನು ಪರಲೋಕಕ್ಕೆ ಕಳಿಸುವ ಪುರೋಹಿತರು ಇ-ಕ್ಯಾಷ್ ಮೂಲಕ ಸಂಭಾವನೆ ಪಡೆದುಕೊಳ್ಳಲು ಸಾಧ್ಯ.

ಶುಭ ಸಮಾರಂಭಗಳಲ್ಲಿ ಪೌರೋಹಿತ್ಯ ವಹಿಸುವವರು ತಮ್ಮ ಮೊಬೈಲ್ ಪಕ್ಕದಲ್ಲೇ ಇರಿಸಿಕೊಂಡು ಮಂತ್ರ ಹೇಳುತ್ತಿರುತ್ತಾರೆ. ಮೊಬೈಲ್ ರಿಂಗಾದರೆ ಮಂತ್ರ ನಿಲ್ಲಿಸಿ ಅದಕ್ಕೆ ಉತ್ತರ ಹೇಳಿ ನಂತರ ಮಂತ್ರ ಪಠಣ ಮುಂದುವರೆಸುತ್ತಾರೆ. ಈ 'ರುಖಾವಟ್‌ಗಾಗಿ' ಅವರಿಗೇನು 'ಖೇದ್' ಇರುವುದಿಲ್ಲ. ಈ ಪುರೋಹಿತರು ನಾಳೆ ಒಂದು ಪಿಒಎಸ್ ಯಂತ್ರವನ್ನು ತಂದು ಕೊಡಬೇಕಾದ ಸಂಭಾವನೆಯನ್ನು ಕಾರ್ಡಿನ ಮೂಲಕ ಪಡೆದುಕೊಂಡರೆ ಮೋದೀಜಿ ಸಹ ಆಶ್ಚರ್ಯ ಪಡಬೇಕಿಲ್ಲ. ಸಂಭಾವನೆಯನ್ನು ತಾಂಬೂಲ ಸಮೇತ ಕೊಡಬಯಸುವ ಸಂಪ್ರದಾಯಸ್ಥರು ಪಿಒಎಸ್ ಹೊರಹಾಕುವ ರಶೀತಿಯನ್ನು ತಟ್ಟೆಯಲ್ಲಿಟ್ಟು ಕೊಟ್ಟರೆ ಪುರೋಹಿತರು ಒಲ್ಲೆ ಎನ್ನುವರೆ? ಆದರೆ ಪ್ರತಿ ದಿನದ ಸಂಭಾವನೆಯನ್ನು ಹೆಂಡತಿಯ ಕೈಗಿಡುವ ಸಂಪ್ರದಾಯವನ್ನು (ಒಲ್ಲದ ಮನಸ್ಸಿನಿಂದ?) ಇರಿಸಿಕೊಂಡಿರುವ ಪುರೋಹಿತರಿಗೆ ತುಸು ಕಷ್ಟ. ಏಕೆಂದರೆ ಕ್ಯಾಷ್ ಬದಲು ಇ-ಪೇಮೆಂಟ್ ಆದ ರಶೀತಿಯನ್ನು ಕೊಟ್ಟರೆ ಆಕೆ ಒಪ್ಪಳೆ? ಕ್ಯಾಷೇ ಬೇಕೆಂದರೆ ಪುರೋಹಿತರು ಇ-ಕ್ಯಾಷ್ ಒಪ್ಪರು. ಆಗ ಹೆಂಡತಿಯ ಖಾತೆಗೇ ಹಣ ಜಮೆ ಮಾಡಬೇಕಾಗಿ ಬರಬಹುದು. ಶ್ರಮ ಇವರದ್ದು ಸಂಭಾವನೆ ಶ್ರೀಮತಿಯದ್ದು.

ಕಿಸೆಯಲ್ಲಿ ಕಾರ್ಡು, ಓಡಾಡಲು ಗಾಡಿ ಇದ್ದರೆ ಒಮರ್ ಖಯ್ಯಾಂ ಸಹ ಸ್ವರ್ಗಕ್ಕೆ ಕಿಚ್ಚು ಹಚ್ಚುತ್ತಿದ್ದನೇನೋ. ಈಗ ಸ್ವಂತ ಗಾಡಿಯೂ ಬೇಡ. ಏಕೆಂದರೆ ಡಿಜಿಟಲ್ ಸೇವೆಯಿಂದಾಗಿ ಗಾಡಿ ಮನೆ ಬಾಗಿಲಿಗೇ ಬಂದು, ಬೇಕೆಂದೆಡೆ ಇಳಿಸಿ, ಡಿಜಿಟಲ್ ಹಣ ಪಡೆದು ಹೋಗುತ್ತದೆ. ಪಾರ್ಕಿಂಗ್ ಪ್ರಾಬ್ಲಮ್ ಇರದು. ತರಕಾರಿ, ಔಷಧಿ, ಮನೆ ಸಾಮಾನು, ಬಟ್ಟೆ, ಒಡವೆ, ಫರ್ನೀಚರ್.. ಏನುಂಟು ಏನಿಲ್ಲ ಎಲ್ಲವೂ ಲಭ್ಯ. ಮನೆ ಬಾಗಿಲಿಗೆ. ಹಣ ಕೊಡಬೇಕಾಗಿಯೇ ಇಲ್ಲ. ಕಾರ್ಡಿದ್ದರೆ ಸಾಕು.

ಕಾರ್ಡಿದ್ದರೆ ಕೈಲಾಸ. ಆದರೆ ಕಾರ್ಡಿನಿಂದಾಗಿ ಕೈ ಲಾಸ್ ಆಗದಿದ್ದರೆ ಸರಿ.

❑



# ಓಎಲ್‌ಎಕ್ಸ್‌ನಲ್ಲಿ ಮಾರಿಬಿಡಿ

**- ಸುಧಾ ಸರನೋಬತ್**

**ಯ**ಜಮಾನರು ಓದಿದ್ದು ಮರಾಠಿ ಇಂಗ್ಲೀಷ್ ಮೀಡಿಯಮ್‌ನಲ್ಲಿ ನಾನು ಅವರೊಂದಿಗೆ ಮದುವೆ ಆಗಿ ಬಂದಾಗ, ಅವರ ಮರಾಠಿಗನ್ನಡ ನನಗೆ ಅರ್ಥವಾಗದ ಕಬ್ಬಿಣದ ಕಡಲೆ ಆಗಿತ್ತು. ಅವರಿಗೆ ಕನ್ನಡದ ಎಲ್ಲ ಪದಗಳ ಅರ್ಥ ಸರಿಯಾಗಿ ಆಗುತ್ತಿರಲಿಲ್ಲ ಬೆಂಗಳೂರಿಗೆ ಬಂದ ಹೊಸದರಲ್ಲಿ ಅವರ ಸ್ನೇಹಿತರೊಬ್ಬರು ನಿಮ್ಮ ವಾಸ ಎಲ್ಲಿ ಎಂದು ಕೇಳಿದರಂತೆ ಅದಕ್ಕೆ ನಮ್ಮವರು ಕೊಟ್ಟ ಉತ್ತರ ನನಗೇನು ವಾಸ್ ಇಲ್ಲವಲ್ಲ ಸೆಂಟ್ ಹಾಕ್ಕೊಂಡು ಬಂದಿದ್ದೀನಿ ಎಂದರಂತೆ. ಮರಾಠಿಯಲ್ಲಿ ವಾಸ್ ಎಂದರೆ ವಾಸನೆ ಎಂದು ಅರ್ಥ. ನನಗೂ, ಮಾತನಾಡುವಾಗ ಮರಾಠಿ ಬಳಸಬೇಕು ಎಂಬ ಕಟ್ಟಪ್ಪಣೆ ಮಾಡಿದ್ದರು ನಾನು ಬೆಳಗಾವಿಯಲ್ಲಿ ಎಲ್.ಕೆ.ಜಿಯಿಂದ ಕಾಲೇಜು ಶಿಕ್ಷಣದವರೆಗೆ ಓದಿದ್ದರಿಂದ ಕೊಂಚ ಮರಾಠಿ ಭಾಷೆಯ ಪರಿಚಯವಿತ್ತು. ನನಗೋ ಹಾಸ್ಯ ಲೇಖನ ಬರೆಯುವ ಗೀಳು ಇವರಿಗೆ ನಾನು ಬರೆದಿದ್ದು ಓದಲೂ ಬರುವುದಿಲ್ಲ. ಆದರೂ ನನ್ನ ಬರಹ ಓದಿ ಹೇಳುವವರೆಗೂ ನನ್ನನ್ನು ಸುಮ್ಮನೆ ಬಿಡುತ್ತಿರಲ್ಲಿಲ್ಲ ನಾನು ಓದಿದಾಗ, ಕೆಲ ಕನ್ನಡ ಶಬ್ದಗಳು ಅರ್ಥವಾಗದಿದ್ದರೂ, ಅರ್ಥವಾದವರಂತೆ ತೋರಿಸಿಕೊಳ್ಳುತ್ತಿದ್ದರು. ಪತ್ರಿಕೆಯಲ್ಲಿ ನನ್ನ ಲೇಖನ ಪ್ರಕಟವಾದ ಮೇಲೆ ಸ್ನೇಹಿತರಿಂದ ಓದಿಸಿ, ಅವರಿಂದಲೇ ಸರಿಯಾದ ಅರ್ಥ ತಿಳಿದುಕೊಳ್ಳುತ್ತಿದ್ದರು.

> **ನಿಮ್ಮದೇನಾದರೂ ಹಳೆಯ ಸಾಮಾನು ಓ.ಎಲ್.ಎಕ್ಸ್‌ನಲ್ಲಿ ಮಾರುವುದಿದೆಯೆ?**

ನಮ್ಮ ಅಕ್ಕ ತಂಗಿ ಅಣ್ಣ, ತಮ್ಮಂದಿರ ತಂದೆಯಿಂದ ಕನ್ನಡ ಪತ್ರಗಳು ಬಂದಾಗ, ಅವನ್ನು ಓದಲಾಗದೆ, ವಿಷಯ ತಿಳಿಯದೆ ನೀರಿನಿಂದ ಬಿದ್ದ ಮೀನು ಹೊರಗೆ ತೆಗೆದಂತೆ ಚಡಪಡಿಸುತ್ತಿದ್ದರು. ಏನು ಬರೆದಿದ್ದಾರೆ ಓದಿ ಹೇಳು ಎಂದು ದುಂಬಾಲು ಬೀಳುತ್ತಿದ್ದರು. ನನಗೋ ಓದಿ ಹೇಳುವುದು ಬಲು ಬೇಜಾರಿನ ಕೆಲಸ ಕಳೆದ ನಲವತ್ತು ವರ್ಷಗಳಿಂದ ನಾನು ನನ್ನ ಮಕ್ಕಳು ನನ್ನ ಮೊಮ್ಮಕ್ಕಳು ನಮ್ಮವರಿಗೆ, ಕನ್ನಡ ಅಕ್ಷರ ಕಲಿಸಲು ಪ್ರಯತ್ನಿಸಿ ಸೋತಿದ್ದಾರೆ. ಕೇಂದ್ರ ಸರಕಾರಿ ಹುದ್ದೆಯಲ್ಲಿ ಆಫೀಸರ್ ಆಗಿ ಕೆಲಸ ಮಾಡುವಾಗ ಪರ ಊರಿಗೆ ಆಡಿಟ್ ಮಾಡಲು ಹೋದಾಗ ಅವರು ಸಾಹೇಬರು ಓದಲಿ ಅಂತ ಕನ್ನಡದ ಎಲ್ಲ ಪತ್ರಿಕೆ ಪೇಪರುಗಳನ್ನು ಇವರ ಮುಂದೆ ಹರವಿದಾಗ ಅವರ ಮುಂದೆ ಓದುವ ನಾಟಕವಾಡಿ ಬರೀ ಚಿತ್ರ ನೋಡುತ್ತ ಕುಳಿತುಕೊಳ್ಳುತ್ತಿದ್ದರಂತೆ. ಹೀಗೆ ಅಂತ ಅವರೇ ಸ್ವತ: ನನ್ನ ಹತ್ತಿರ ಹೇಳಿಕೊಂಡಿರುವುದು.

ಇನ್ನು ಹಳೇ ಸಾಮಾನಿನ ಮೋಹ ವರ್ಣಿಸಲು ಸಾಧ್ಯವಿಲ್ಲ ನಲವತ್ತು ವರ್ಷಗಳ ಹಿಂದೆ ಖರೀದಿಸಿದ ಪ್ರತಿಯೊಂದು ವಸ್ತು, ನಮ್ಮ ಮನೆಯಲ್ಲಿದೆ. ಅದು ಕೆಟ್ಟು ಕೆರ ಹಿಡಿದರೂ ಅವನ್ನು ಬಿಸಾಡುವುದಿಲ್ಲ ದಿನಕ್ಕೊಮ್ಮೆ ಅವನ್ನು ಒರೆಸಿ, ಮನಸನ್ನು ಮುದಗೊಳಿಸಿಕೊಳ್ಳುತ್ತಾರೆ. 'ಹೊಸದನ್ನು ಖರೀದಿಸುವುದಿಲ್ಲ. ಹಳೆಯ ಸಾಮಾನು ಮಾರುವುದಿಲ್ಲ' ಇದು ಅವರ ಹಟ. ನನಗೂ ಆ ಹಳೆಯ ಸಾಮಾನು ನೋಡಿ ನೋಡಿ ಬೇಜಾರು ಆದರೇನು ಮಾಡಲಿ ಯಜಮಾನರ ವಿಶ್ವಾಮಿತ್ರನ ಸಿಟ್ಟಿನ ಮುಂದೆ ನನ್ನದೇನು

ನಡೆಯದು. ಒಂದು ಸಲ ಓ.ಎಲ್.ಎಕ್ಸ್‌ನಲ್ಲಿ ಮಾರಿ ಬಿಡಿ ಎಂಬ ಜಾಹೀರಾತು ನೋಡಿ ಅವರನ್ನು ಸಂಪರ್ಕಿಸಿದೆ. ಅವರೇ ನಮ್ಮ ಮನೆಗೆ ಖುದ್ದಾಗಿ ಬೇಟಿ ನೀಡಿ ನಿಮ್ಮ ಮನೆಯಲ್ಲಿ ನಮ್ಮ ಓ.ಎಲ್.ಎಕ್ಸ್‌ನಲ್ಲಿ ಇರುವುದಕ್ಕಿಂತ ಜಾಸ್ತಿ ಹಳೆಯ ವಸ್ತುಗಳಿದ್ದು, ನಿಮ್ಮ ಮನೆಯನ್ನೇ ನಮ್ಮ ಹೆಡ್ ಕ್ವಾರ್ಟರ್ ಮಾಡಿಕೊಳ್ಳುತ್ತೇವೆ ಎಂದು ಸಂತೋಷದಿಂದ ಹೇಳಿದರು ಯಜಮಾನರ ಸಂತಸಕ್ಕೆ ಪಾರವೇ ಇಲ್ಲ ಅಂತ ಬೇರೆ ಹೇಳಬೇಕಿಲ್ಲ.

ಇನ್ನು ಅವರಿಗೆ ಇಷ್ಟವಿಲ್ಲದ ಸ್ನೇಹಿತರು ಮನೆಗೆ ಬಂದಾಗ ಮರಾಠಿಯಲ್ಲಿ ''ಚಹಾ ಕರೂ ನಕೋ'' (ಟೀ ಮಾಡಬೇಡ) ಅಂತ ನಮ್ಮವರು ಸ್ನೇಹಿತನಿಗೆ ಅರ್ಥವಾಗದು ಎಂದು ಮರಾಠಿಯಲ್ಲಿ ಹೇಳಿದಾಗ, ಸ್ನೇಹಿತ ಹೇಳಿದ್ದು, ನನಗೆ ಮರಾಠಿ ಬರುತ್ತೆ ಚಹ ಕರಾ (ಟೀ ಮಾಡಿ) ಎಂದು ನನಗೆ ಹೇಳಿದಾಗ ನಮ್ಮವರ ಮುಖ ಇಂಗು ತಿಂದ.. ಆಗಿತ್ತು! ಇವತ್ತಿಗೂ ಅಂಗಡಿಗೆ ಸಾಮಾನು ತರಲು ಕಳಿಸಿದರೆ ಅಂಗಡಿಯವನೊಂದಿಗೆ ಮರಾಠಿಗನ್ನಡದಲ್ಲೇ ಮಾತನಾಡುತ್ತಾರೆ. ಕಾಂದಾ (ಈರುಳ್ಳಿ) ಬಟಾಟಾ (ಅಲೂಗಡ್ಡೆ) ವಠಾಣಾ (ಬಟಾಣಿ) ಸಾಬೂದಾಣಾ (ಸಬ್ಬಕ್ಕಿ) ಇತ್ಯಾದಿ ಇತ್ಯಾದಿ ಅಂಗಡಿಯವ ಎಲ್ಲರನ್ನು ಕಳಿಸಿ ನಂತರ ನನಗೆ ಫೋನ್ ಮಾಡಿ ಏನೆಂದು ಕೇಳಿ ಇವರಿಗೆ ಸಾಮಾನು ಕೊಟ್ಟು ಕಳಿಸುತ್ತಾನೆ.

ಮಕ್ಕಳಿಗೆ ತಿಳಿಯದಂತೆ ಮರಾಠಿಯಲ್ಲಿ ನಾವಿಬ್ಬರೂ ಜಗಳವಾಡುತ್ತಿದ್ದೆವು. ಬರಬರುತ್ತಾ ನನ್ನ ಮಕ್ಕಳಿಗೆ ಕೆಲವು ಶಬ್ದಗಳು ತನ್ನಿಂದ ತಾನೇ ಅರ್ಥವಾಗಲಾರಂಬಿಸಿದವು. ಆದರೂ ಯಜಮಾನರಿಗೆ ಮಕ್ಕಳೆದುರು ಜಗಳ ಮಾಡಬಾರದು ಎಂದು ಅರ್ಥವಾಗಲಿಲ್ಲ. ಕೊನೆಗೆ ಮಕ್ಕಳೇ ನಮ್ಮಿಬ್ಬರ ಜಗಳ ಬಿಡಿಸುವಷ್ಟು ಮರಾಠಿ ಕಲಿತುಕೊಂಡರು. ಲೆಕ್ಕದ ಅಫೀಸರ್ ನಮ್ಮವರು ಎಲ್ಲದಕ್ಕೂ ಲೆಕ್ಕವಿಡಬೇಕು 1 ರೂಗೂ ಲೆಕ್ಕ ಕೊಡಬೇಕು ನನಗೋ ಲೆಕ್ಕ ಇಟ್ಟು ಅಭ್ಯಾಸವೇ ಇಲ್ಲ ಎಲ್ಲವೂ ಲೆಕ್ಕಾಚಾರ!

ಸೀರೆ ಕೊಳ್ಳಲು ಹೊರಗೆ ಹೋದಾಗ, ಇಂತಿಷ್ಟು ಹಣ ಅಂತ ಎಣಿಸಿ ಕೊಡುವ ರೂಢಿ, ಬಂದ ಮೇಲೆ ಲೆಕ್ಕ ಕೊಡಬೇಕು ಎಲ್ಲವನ್ನು ಎಣಿಸಿ, ಗುಣಿಸಿ ಇಟ್ಟುಕೊಂಡು ನಾವು ಹೋಟ್ಲಿನಲ್ಲಿ ದೋಸೆ ತಿಂದೆವು, ಕಾಫಿ ಕುಡಿದೆವು ಎಂದರೆ ಏಕೆ ಮನೆಯಲ್ಲಿ ದೋಸೆ ಮಾಡಿ ತಿಂದರಾಗುವುದಿಲ್ಲವೇ? ಎಂದು ರೇಗುತ್ತಾರೆ ಎಂದು ಸೀರೆಯ ಲೆಕ್ಕದಲ್ಲಿಯೇ ದೋಸೆ, ಕಾಫಿ ಇತ್ಯಾದಿ ತಿಂದ ಖರ್ಚನ್ನು ಸೇರಿಸಿ ಹೇಳುತ್ತಿದ್ದೆ. ಸೀರೆಯ ಬಿಲ್ ತೋರಿಸು, ಅಷ್ಟು ಬೆಲೆಬಾಳುವ ಸೀರೆ ಏಕೆ ಬೇಕಾಗಿತ್ತು? ಎನ್ನುವುದು ಉಂಟು. ಆಗೆಲ್ಲ ಪರ್ಸನಲ್ಲಿ ರಶೀದಿ ತಡಕಾಡಿ ಆಮೇಲೆ ಕೋಡುತ್ತೇನೆ. ಎಂದು ಹೇಳಿ ಮರೆಸಿದ್ದೂ ಉಂಟು ಸಿನಿಮಾಗೆ ಹೋದಾಗ ಅಲ್ಲಿ ಟಿಕೇಟ್ ಕೊಳ್ಳುವಾಗ ''ನಮಗೆ ಫಸ್ಟ್‌ಕ್ಲಾಸ್ ಬೇಡಪ್ಪಾ, ಮಿಡಲ್‌ಕ್ಲಾಸ್ ಇರ್ಲಿ'' ಎಂದು ಹೇಳಿ ನಗೆಗೀಡಾಗಿದ್ದು ಉಂಟು.

ಹೆಣ್ಣು ಮಕ್ಕಳು ವಿದೇಶಕ್ಕೆ ಹೋಗುವ ಮುಂಚೆ ತಮ್ಮಲ್ಲಿದ್ದ ಹಳೆಯ ಸಾಮಾನು ಓ.ಎಲ್.ಎಕ್ಸ್‌ನಲ್ಲಿ ಮಾರಿಬಿಡಿ ಎಂದು ಹೇಳಿದರೆ ಅವನ್ನೆಲ್ಲ ಜತನವಾಗಿ ನಮ್ಮ ಮನೆಗೆ ತಂದು ತುಂಬಿಸಿದ್ದಾರೆ; ನನಗೆ ಬೆಳಗ್ಗೆ ಎದ್ದ ತಕ್ಷಣ 'ಕರಾಗ್ರೆ' ಹೇಳುವ ಸಮಯದಲ್ಲಿ ಅಮೂಲಾಗ್ರವಾಗಿ ಹಳೆಯ ಹರಕು ಮುರುಕು, ಸಾಮಾನುಗಳೇ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಇವರ ಹಳೆಯ ಸಾಮಾನಿನ ಮೋಹ ನೋಡಿದಾಗ, ಹೋದ ಜನ್ಮದಲ್ಲಿ ನಮ್ಮವರು ರದ್ದಿ ಪೇಪರ್ ಅಂಗಡಿಯ ಮಾಲೀಕರಾಗಿರಬಹುದು ಅಥವಾ ಗುಜರಿ ಸಾಮಾನಿನ ಹೋಲ್ ಸೇಲ್ ವ್ಯಾಪಾರಿ ಆಗಿರಬಹುದು ಎನಿಸದೆ ಇರಲಾರದು.

ಚಪ್ಪಲಿ ಹರಿದಾಗ ಅದನ್ನು ಇನ್ನು ರಿಪೇರಿ ಆಗಲು ಸಾಧ್ಯವೇ ಇಲ್ಲ ಎಂದು ಚಪ್ಪಲಿ ಹೊಲಿಯುವವನು ದಬಾಯಿಸುವವರೆಗೂ ರಿಪೇರಿ ಮಾಡಿಸುತ್ತಲೇ ಇರುತ್ತಾರೆ. ನಾನೋ ಪೂರ್ತಿ ಅಪೋಜಿಟ್. ಹರಿದರೆ ಸೀದಾ ಚರಂಡಿಗೇ ಹಾಕುವ ಜಾಯಮಾನ! ಪರಸ್ಪರ ವಿರುದ್ದ ದಿಕ್ಕಿನ ಸತಿ-ಪತಿಯರು ನಾವು! ರಿಪೇರಿ ಮಾಡಿಸುವುದು ಎಂದರೆ ಎಲ್ಲಿಲ್ಲದ ಆನಂದ ನಮ್ಮವರಿಗೆ! ಅಷ್ಟು ಸಂತೋಷ ನಮ್ಮ ಮದುವೆ ಆದ ಹೊಸತರಲ್ಲಿ ಮನೆಗೆ ಹೊಸ ಸಾಮಾನು ತರುವುದರಲ್ಲಿ ಇರಲಿಲ್ಲ. ಹರಿದ ಪರ್ಸುಗಳು ವ್ಯಾನಿಟ್ ಬ್ಯಾಗ್ ಕುಕ್ಕರ್, ಮಿಕ್ಸಿ ಹ್ಯಾಂಡಲ್‌ಗಳು ಚಾಕು ಹರಿತ, ಈಳಿಗೆ ಹರಿತಗೊಳಿಸುವುದು. ಹೊಲಿಗೆ ಬಿಚ್ಚಿದ ತಮ್ಮ ಬಟ್ಟೆಗಳಿಗೆ ಮರು ಹೊಲಿಗೆ ಹಾಕಿಸುವುದು. ಹಳೆಯ ಜೀರ್ಣವಾದ ಗಾದಿಗಳನ್ನು ರಿಪೇರಿ ಮಾಡಿಸಿ ಮನೆಯಲ್ಲಿ ಮಂಚದ ಮೇಲೆ ಹಾಕಿ ಇಡುವುದು. ಅಂದು ಹನುಮಂತ ತನ್ನ ಬಾಲವನ್ನು ಸುರುಳಿ ಸುತ್ತಿ ರಾವಣನ ಎದುರು ಕೂತಿರಲಿಲ್ಲವೇ.. ಹಾಗೇ ನಮ್ಮವರು 10 ಗಾದಿ ಮಂಚದ ಮೇಲೆ ಹಾಕಿ ಹನುಮಂತನಂತೆ ಎತ್ತರದ ಸ್ಥಾನದಲ್ಲಿ ಕುಳಿತಿರುತ್ತಾರೆ!

ಆದರೆ ನಮ್ಮದೇ ಸ್ವಂತ ಮನೆಯ ಅನೇಕ ರಿಪೇರಿಗಳಿಗೆ ಅವರಿಗೆ ಆಸಕ್ತಿ ಇಲ್ಲ. ಇದಕ್ಕೆ ಕಾರಣ 30 ವರ್ಷ ಬಾಡಿಗೆ ಮನೆಯಲ್ಲಿ ಇದ್ದುದೇ ಕಾರಣ. ಈಗಲೂ ನಾನು ಪದೇ ಪದೇ ಎಚ್ಚರಿಸಬೇಕಾಗುತ್ತದೆ.

ಇದು ನಿಮ್ಮದೇ ಸ್ವಂತ ಮನೆ ಬಾಡಿಗೆ ಮನೆ ಅಲ್ಲ ರಿಪೇರಿ ಮಾಡಿಸದೇ ಇರಲು ಎಂದು.

ಮೊದಲೆಲ್ಲ 2-3 ಬಸ್ಸು ಹಿಡಿದು ಬಸ್ಸಿನಲ್ಲಿ ಜಾಗ ಸಿಗದೆ ನೇತಾಡಾಸನ ಮಾಡುತ್ತ ಹೋಗುತ್ತಿದ್ದ ನನ್ನನ್ನು ಆಟೋದಲ್ಲಿ ಕರೆದೊಯ್ಯುವಷ್ಟು ಪರಿವರ್ತನೆ ಆಗಿದೆ. ಆದರೆ ಅಡಿಗೆ ಮನೆಗೆ ಬಂದು ಇಷ್ಟೇಕೆ ಮಾಡಿದ್ದೀ ವೇಸ್ಟ್ ಮಾಡಬೇಡ ಅಂತ ದಿನಾಲು ಹೇಳುವದು ಬಿಟ್ಟಿಲ್ಲ! ನಾವು ಅವರಿಗೂ ಜಾಣರಿರುತ್ತೇವೆ. ಉಳಿದ ಅಡಿಗೆ ರಿಮೇಕ್ ಮಾಡುವುದನ್ನು ನಮ್ಮ ಮಕ್ಕಳು ನಮಗೆ ಹೇಳಿಕೊಟ್ಟಿರುತ್ತಾರೆ. ಯಾವುದೂ ವೇಸ್ಟ್ ಆಗೋಲ್ಲ! ರಿಕ್ಷಾ ನಮ್ಮನೆಯ ಎದುರು ನಿಂತಾಗ ರಿಕ್ಷಾದವನೊಂದಿಗೆ ಲೆಕ್ಕಾಚಾರ ಮಾಡುತ್ತಿರುವ ಯಜಮಾನರ ವೈಖರಿಯಮ್ ಅದೆಂತು ಬಣ್ಣಿಸಲಿ! ಬೀದಿಯ ಜನರಿಗೆ ನಮ್ಮವರು ಹೊರಗಿನಿಂದ ಮನೆಗೆ ಬಂದಿದ್ದಾರೆ ಅಂತ ತಿಳಿಯುವುದು ಅದರಿಂದಲೇ. ಇನ್ನು ತರಕಾರಿಯವರೊಂದಿಗಿನ, ಹಣ್ಣಿನವರೊಂದಿಗಿನ ಸಾಣೆ ಹಿಡಿಯುವರು, ಪ್ಲಂಬರ್, ಪೇಂಟರ್, ಗೌಂಡಿಗಳು ಇವರ ಜೊತೆ ಚೌಕಾಶಿಗೆ ನಮ್ಮನೆಯ ಗೋಡೆ ಬಿರುಕು ಬಿಟ್ಟರೂ ಆಶ್ಚರ್ಯವಿಲ್ಲ.

ನಮ್ಮ ಮನೆಯ ಮೇಲೆ ಮಹಡಿ ಹಾಕಿಸಿದಾಗ, ಕಂಟ್ರಾಕ್ಟರ್ ಕಮ್ ಮೇಸ್ತ್ರಿಯೊಂದಿಗಿನ ಆಡಿಟ್ ಆಂಡ್ ಅಕೌಂಟ್ಸನಿಂದ ಅವನು ಇನ್ನೂ ಚೇತರಿಸಿಕೊಳ್ಳುತ್ತಿದ್ದಾನೆ. ಇವರಿಬ್ಬರ ಜಗಳದಲ್ಲಿ ಲಾಭ ನನ್ನದು. ಆ ಮನೆಯ ಬಾಡಿಗೆ ದುಡ್ಡು ನನಗೆ. ಓ.ಎಲ್.ಎಕ್ಸ್‌ನವರು ನಮ್ಮ ಮನೆಯನ್ನೇ ತಮ್ಮ ಹೆಡ್ ಕಾರ್ಟ್ವರ್ ಮಾಡಿಕೊಂಡು ಅದಕ್ಕೆ ನಮ್ಮವರನ್ನೇ ಮ್ಯಾನೇಜರ್ ಮಾಡಿದ್ದಾರೆ. ಈಗ ಅಲ್ಲಿ ಹಳೆಯ ವಸ್ತು ನಮ್ಮವರೇ, ಆದರೆ ಓ.ಎಲ್.ಎಕ್ಸ್‌ನಲ್ಲಿ ಮಾರಲು ಸಾಧ್ಯವಿಲ್ಲ ಅದಕ್ಕೆ ಮ್ಯಾನೇಜರ್ ಪದವಿ ಕೊಟ್ಟು ಕೂಡಿಸಿದ್ದಾರೆ! ನಿಮ್ಮದೇನಾದರೂ ಹಳೆಯ ಸಾಮಾನು ಓ.ಎಲ್.ಎಕ್ಸ್‌ನಲ್ಲಿ ಮಾರುವುದಿದ್ದರೆ ಹೇಳಿ ನಮ್ಮವರೆ ಅದಕ್ಕೆ ಹೆಡ್ಡು ಈಗ!!

❑